ಮರೆಯಲಾಗದ ತುಳುವರು - 3

ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು

ನಾ. ಉಜಿರೆ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ಧರ್ಮಸ್ಥಳ

ಮಂಜಯ್ಯ ಹೆಗ್ಗಡೆಯವರು

ಸಂಕ್ಷಿಪ್ತ ಜೀವನ ಚರಿತ್ರೆ

ನಾ. ವುಜಿರೆ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ಮಂಗಳೂರು ಮಹಾನಗರಪಾಲಿಕೆ ಕಟ್ಟಡ
ಲಾಲ್‌ಬಾಗ್, ಮಂಗಳೂರು - 575 003.

DHRMASTHALA MANJAYYA HEGGADEYAVARU

(Brief biography in Kannda) written by Na. Ujire (Nagaraja Poovani), Ujire - 574 240. D.K , Published by Karnataka Tulu Sahithya Academy, Sponserd by : Sri Suresh Ballal Lalbagh Mangalore - 3

Chief Editor	:	*Dr. Vamana Nandavara, President, Karanataka Tulu Sahitya Academy, Corporation Building, Lalbagh, Mangalore - 575 003*
Copy Right	:	*Academy*
Publisher	:	*S. H. Shivarudrappa Register Karanataka Tulu Sahitya Academy, Corporation Building, Lalbagh, Mangalore - 575 003*
First Impression	:	*2004*
Pages	:	*48*
Price	:	*Rs. 15/-*
Printers	:	*Aruna Printers N.D. Complex, Kudroli, Mangalore - 575 003 Ph : 2494925*

ಗ್ರಂಥ ಪ್ರಾಯೋಜನೆ : ಸುರೇಶ್ ಬಲ್ಲಾಳ್ ಮಾಜಿ ಅಧ್ಯಕ್ಷರು, ಮೂಡ ಮಂಗಳೂರು
ಧರ್ಮಸ್ಥಳ ಮಂಜಯ ಹೆಗ್ಗಡೆಯವರು : 2004. ಬೆಲೆ ರೂ. *15/-*



ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು

ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು

ನಮ್ಮ ಭಾರತವೆಂದರೆ - ಒಂದು ಅತ್ಯಂತ ಪ್ರಾಚೀನ ದೇಶ. ಇಲ್ಲಿನ ಇತಿಹಾಸ, ಸಂಸ್ಕೃತಿ, ಕಲೆ, ಧರ್ಮ, ಸಾಹಿತ್ಯಗಳಂತೆಯೇ ಇಲ್ಲಿನ ಜನರೂ ಮಹಿಮಾನ್ವಿತರು. ಈ ದೇಶದಲ್ಲಿ ದೊಡ್ಡ - ದೊಡ್ಡ ಮಹಾಪುರುಷರು ಜನಿಸಿದರು ಹಾಗೂ ಈ ದೇಶದ ಉದ್ಧಾರಕ್ಕಾಗಿ ಶ್ರಮಿಸಿದರು. 19ನೇ ಶತಮಾನದ ಕೊನೆಯ ಭಾಗದಲ್ಲಿ ಜನಿಸಿ, 20ನೇ ಶತಮಾನದ ಆದಿಭಾಗದಲ್ಲಿ ಭಾರತ ಮಾತೆಯ ಸೇವೆ ಮಾಡಿದ ಜನರಲ್ಲಿ ಅನೇಕ ಮಂದಿ ವಿಖ್ಯಾತರಾಗಿದ್ದಾರೆ. ದೇಶ ಸೇವೆ, ಈಶ ಸೇವೆ ಮಾಡಿ ಪ್ರಸಿದ್ಧರಾದ ಮಹಾತ್ಮಾ ಗಾಂಧಿ, ನೆಹರೂ, ಸುಭಾಶ್ಚಂದ್ರ ಬೋಸ್, ಸರ್ದಾರ್ ವಲ್ಲಭ ಭಾಯಿ ಪಟೇಲರಂತೆಯೇ ನಮ್ಮ ತುಳುನಾಡಿನಲ್ಲೂ ಅನೇಕ ಜನರು ಪ್ರಸಿದ್ಧರಾಗಿದ್ದರು. ಕಾರ್ನಾಡ್ ಸದಾಶಿವರಾಯರು, ಕುದ್ಮಲ್ ರಂಗರಾಯರು, ಯು. ಶ್ರೀನಿವಾಸ ಮಲ್ಯರು... ಇತ್ಯಾದಿಯಾಗಿ ಅನೇಕ ಜನರು.

ಅವರು ರಾಜಕೀಯ ರಂಗದಲ್ಲಿ ಸೇವೆ ಸಲ್ಲಿಸಿ ಪ್ರಸಿದ್ಧರಾದರೆ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ರಂಗಗಳಲ್ಲಿ ಅಪೂರ್ವ ಸೇವೆ ಸಲ್ಲಿಸಿ ಶಾಶ್ವತವಾದ ಕೀರ್ತಿಯನ್ನು ಗಳಿಸಿದ ಒಬ್ಬರು ಮಹಾನುಭಾವರಿದ್ದರು, ಅವರನ್ನು ನಮ್ಮ ತುಳುನಾಡಿನ ಜನರು ಎಂದೂ ಮರೆಯಲು ಸಾಧ್ಯವಿಲ್ಲ.

ನಮ್ಮ ತುಳುನಾಡಿನಲ್ಲಿ ಹೆಸರಾಂತ ಪುಣ್ಯಕ್ಷೇತ್ರವೆಂದರೆ - ಬೆಳ್ತಂಗಡಿ ತಾಲೂಕಿನ ಶ್ರೀ ಧರ್ಮಸ್ಥಳ. ಈ ಕ್ಷೇತ್ರದ ಮಟ್ಟಿಗೆ ಜನರಲ್ಲಿ ಎಷ್ಟೊಂದು ಭಯಭಕ್ತಿಯಿದೆ - ಎಂದರೆ, ಧರ್ಮಸ್ಥಳವನ್ನು ಜನರು 'ಹೊಳೆಯಾಚೆ' ಸ್ಥಳ, ಕ್ಷೇತ್ರ ಎಂದೇ ಕರೆಯುತ್ತಾರೆ ; ಅಲ್ಲಿಯ ಹೆಸರು ಹೇಳಬಾರದು - ಎಂಬ ನಂಬಿಕೆ ಇತ್ತು. ತುಳುನಾಡಿನಲ್ಲಿ ಪೂರ್ವದಿಕ್ಕಿನಲ್ಲಿ ನೇತ್ರಾವತಿ ನದಿಯಾಚೆಯ ಕ್ಷೇತ್ರವೇ ಈ ಧರ್ಮಸ್ಥಳ.

ಸುಮಾರು ನೂರು ವರ್ಷಗಳ ಹಿಂದೆ ಈ ಮೂಡು ದಿಕ್ಕಿನಲ್ಲಿ ಒಂದು ನಕ್ಷತ್ರ ಉದಯಿಸಿತು. ಈ ಪುಣ್ಯ ಕ್ಷೇತ್ರವನ್ನೇ ಬೆಳಗಿತು. ಇಡೀ ರಾಜ್ಯದ ಜನತೆಯೇ ಅಭಿಮಾನ ಪಡುವಂತೆ ಕ್ಷೇತ್ರವನ್ನು ಬೆಳೆಸಿ, ಇಡೀ ರಾಷ್ಟ್ರದ ಜನರಿಗೆ ದಾರಿತೋರುವಂತಹ ಕಾರ್ಯಗಳನ್ನು ಮಾಡಿತು. ಆ ಮೂಡು ದಿಕ್ಕಿನ ನಕ್ಷತ್ರವೇ - ಧರ್ಮಸ್ಥಳದಲ್ಲಿ ಧರ್ಮಾಧಿಕಾರಿಯಾಗಿದ್ದ ಪೂಜ್ಯ ದಿ| ಡಿ. ಮಂಜಯ್ಯ ಹೆಗ್ಗಡೆಯವರು.

ಅವರ ಬಗ್ಗೆ ಧರ್ಮಸ್ಥಳದ ಈಗಿನ ಧರ್ಮಾಧಿಕಾರಿಗಳಾದ ಪದ್ಮಭೂಷಣ ಡಾ| ವೀರೇಂದ್ರ ಹೆಗ್ಗಡೆಯವರು ಹೀಗೆನ್ನುತ್ತಾರೆ. :-

"ಹಿರಿಮೆಯನ್ನು ಗಳಿಸುವುದು ಕಷ್ಟ. ಹಿರಿಯರನ್ನು ಅರ್ಥ ಮಾಡಿಕೊಳ್ಳುವುದೂ ಕಷ್ಟ. ಅವರನ್ನು ಒಬ್ಬೊಬ್ಬರು ಒಂದೊಂದು ವಿಧವಾಗಿ ಅರ್ಥ ಮಾಡಿಕೊಳ್ಳುತ್ತಾರೆ. ಒಬ್ಬೊಬ್ಬರಿಗೆ ಅವರ ಒಂದೊಂದು ಗುಣಗಳು ಮಹತ್ವದವು ಅನ್ನಿಸಬಹುದು. ಒಂದು ಹೂವಿನ ನಿದರ್ಶನ ತೆಗೆದುಕೊಳ್ಳೋಣ. ಒಬ್ಬನಿಗೆ ಅದರ ಬಣ್ಣ ಇಷ್ಟವಾದರೆ, ಇನ್ನೊಬ್ಬನಿಗೆ ಅದರ ಪರಿಮಳ ಸಂತಸ ನೀಡುತ್ತದೆ. ಮತ್ತೊಬ್ಬನಿಗೆ ಅದರ ಸೌಂದರ್ಯವೇ ಆನಂದ ಉಂಟುಮಾಡುತ್ತದೆ. ಹೀಗೆ ಒಂದು ವಸ್ತುವನ್ನು ಅನೇಕ ದೃಷ್ಟಿಯಿಂದ ನೋಡುವುದನ್ನು ಅನೇಕಾಂತ ವಾದವೆನ್ನುತ್ತಾರೆ. ಪೂಜ್ಯ ಮಂಜಯ್ಯ ಹೆಗ್ಗಡೆಯವರ ಹಿರಿಮೆಯೂ ಕೂಡಾ ಇಂತಹ ಬಹು ದೊಡ್ಡ ಪ್ರತಿಭೆ, ವಿಶೇಷವಾದ ಸೌಂದರ್ಯ, ಮಹಿಮೆಯುಳ್ಳದ್ದಾಗಿತ್ತು."

ಜನ್ಮ ಮತ್ತು ಬಾಲ್ಯದ ವಿಚಾರಗಳು

ಹತ್ತೊಂಬತ್ತನೇ ಶತಮಾನದ ಕೊನೆಯ ದಶಕ. ಆಗ ನಮ್ಮ ದೇಶದಲ್ಲಿ ಬ್ರಿಟಿಷರ ಆಡಳಿತ. ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಮದ್ರಾಸು (ಈಗಿನ ತಮಿಳುನಾಡು) ರಾಜ್ಯಕ್ಕೆ ಸೇರಿತ್ತು. ಬೆಳ್ತಂಗಡಿ ತಾಲೂಕು ಮತ್ತು ಸುಳ್ಯ ತಾಲೂಕು ಪುತ್ತೂರು ತಾಲೂಕಿನ ಭಾಗವಾಗಿದ್ದವು.

ಸನ್ 1889ನೇ ಇಸವಿ ವಿರೋಧಿ ಸಂವತ್ಸರದ ವೃಶ್ಚಿಕ ಮಾಸದಲ್ಲಿ ನವಂಬರ್ ಎರಡರಂದು ಮಂಜಯ್ಯ ಹೆಗ್ಗಡೆಯವರು ಜನಿಸಿದರು. ವಿರೋಧಿ ಸಂವತ್ಸರದಲ್ಲಿ ಜನಿಸಿದರೂ ಅವರು ಯಾರಿಗೂ ವಿರೋಧಿಯಾಗಿರಲಿಲ್ಲ; ಎಲ್ಲರ ಹಿತೈಷಿಯಾಗಿದ್ದರು. ಪುತ್ತೂರು ತಾಲೂಕಿನ (ಇಂದಿಗೆ ಬಂಟ್ವಾಳ ತಾಲೂಕಿನ) ವಿಟ್ಲ ಫಿರ್ಕಾದಲ್ಲಿ 'ಕೇಪು' ಎಂಬ ಹೆಸರಿನ ಗ್ರಾಮ ಅವರ ಹುಟ್ಟೂರು. ಈ ಕೇಪು ಗ್ರಾಮವು ವಿಟ್ಲದಿಂದ ಐದು ಕಿ.ಮೀ. ದೂರದಲ್ಲಿದೆ. ಇದು ಹಿಂದೆ ವಿಟ್ಲದ ಅರಸರ ಆಡಳಿತಕ್ಕೆ ಸೇರಿತ್ತು. ಇಡೀ ವಿಟ್ಲ ಗ್ರಾಮದಲ್ಲೇ ಹೆಸರಾಂತ ಮನೆತನ - ಚಕ್ಕಿತ್ತಡಿ. ಅದೊಂದು ಗೌರವದ ಮನೆ; ಇಡೀ ಊರಿನಲ್ಲೇ ಮನ್ನಣೆ ಗಳಿಸಿದ ಸ್ಥಾನವಾಗಿತ್ತು.

ಊರಿನ ಪಟೇಲಿಕೆ, ನ್ಯಾಯ ತೀರ್ಮಾನ, ವಿವಾದಗಳನ್ನು ಪರಿಹರಿಸಿ ತೀರ್ಪು ನೀಡುವ ಮನೆತನವಾಗಿತ್ತು - ಚಕ್ಕಿತ್ತಡಿ. ಅಲ್ಲೇ ನಡೆಯಿತು - ಮಂಜಯ್ಯ ಹೆಗ್ಗಡೆಯವರ ಜನನ. ಚಕ್ಕಿತ್ತಡಿ ಅಣ್ಣಿ ಶೆಟ್ಟಿ - ಉರ್ಫ್ - ಪದ್ಮ ಶೆಟ್ಟಿ ಊರಿಗೇ ಓರ್ವ ಹಿರಿಯ ಗೌರವದ ನೇತಾರ. ಜೈನ ಧರ್ಮವನ್ನು ಅವಲಂಬಿಸಿದವರು. ಪದ್ಮ ಶೆಟ್ಟಿ - ಎಂಬ ಹೆಸರಲ್ಲೇ ದೇವರ ಸ್ಮರಣೆಯುಂಟು. ಜೈನರ ಆರನೇ ತೀರ್ಥಂಕರರಾದ - ಪದ್ಮಪ್ರಭರ ಸ್ಮರಣೆಗಾಗಿ, ಇಲ್ಲವೇ ಜೈನರ ಯಕ್ಷಿಯಾದ ಮಾತೆ ಶ್ರೀ ಪದ್ಮಾವತಿ ದೇವಿಯ ಸ್ಮರಣೆಗಾಗಿ ಈ ಹೆಸರು. ಅವರ ಪತ್ನಿ ಅನಂತಮತಿಯಮ್ಮ. ಈ ದಂಪತಿಗಳ ಪ್ರೀತಿಯ ಮದ್ದಿನ ಮಗನೇ ಮಂಜಯ್ಯ ಹೆಗ್ಗಡೆಯವರು.

ಈ ಚಕ್ಕಿತ್ತಡಿ ಅಣ್ಣಿ ಶೆಟ್ಟಿ - ಎಂದರೆ ಮಹಾ ರಸಿಕರು, ಹಾಸ್ಯಪ್ರಿಯರು, ಬಹುದೊಡ್ಡ ಪರೋಪಕಾರಿ. ಅದರಿಂದಾಗಿ ಎಲ್ಲರಿಗೂ ಬೇಕಾದ ಜನಪ್ರಿಯ ವ್ಯಕ್ತಿ. ಆಗ ನಮ್ಮ ತುಳುನಾಡಿನಲ್ಲಿ

ಬ್ರಿಟಿಷರದೇ ಆಡಳಿತೆ. ಓದು ಬರೆಹ ತಿಳಿದವರು ಬಹಳ ಕಡಿಮೆ. ಮಂಗಳೂರು ಬಿಟ್ಟರೆ ಮತ್ತೆಲ್ಲೂ ಕಾಲೇಜಿರಲಿಲ್ಲ. ಮಂಗಳೂರನ್ನು ಹೊರತು ಪಡಿಸಿದರೆ ಪುತ್ತೂರು ಮತ್ತು ಉಡುಪಿಯಲ್ಲಿ ಒಂದೊಂದು ಹೈಸ್ಕೂಲುಗಳಿದ್ದವು. ಪ್ರಾಥಮಿಕ ಶಾಲೆಗಳಂತೂ ದೂರದೂರದ ಊರುಗಳಲ್ಲಿದ್ದವು.

ಇಂಥ ಪರಿಸ್ಥಿತಿಯಲ್ಲಿ ಮಂಜಯ್ಯರಿಗೆ ಓದು - ಬರೆಹ ಬಗ್ಗೆ ಭಾರೀ ಹಂಬಲವಿದ್ದರೂ, ಸರಿಯಾಗಿ ಕಲಿಯುವ ಅವಕಾಶವೇ ಸಿಗಲಿಲ್ಲ. ಅವರಿಗೆ ತುಂಬಾ ಬೇಸರವೆನಿಸಿತು. ಆಗಾಗ ಅಡ್ಡಿ-ಆತಂಕಗಳೇ ಅಧಿಕ. ಅವರ ತಂದೆ ಅಣ್ಣಿ ಶೆಟ್ಟಿ ; ಅವರು ಪಟೇಲಿಕೆ ನಡೆಸಲು ಬೇಕಾದಷ್ಟು ವಿದ್ಯಾಭ್ಯಾಸ ಪಡೆದಿದ್ದರು. ತಾಯಿ ಅನಂತಮತಿಯಮ್ಮನವರಿಗೆ ಶಿಕ್ಷಣವೇ ದೊರಕಲಿಲ್ಲ. ಮಹಿಳೆಯರಿಗೆ ಓದು ಬರೆಹವೇಕೆ? ಎಂದು ಭಾವಿಸುವವರೇ ಆಗ ಅಧಿಕವಾಗಿದ್ದರು.

ಹಾಗಿದ್ದರೂ, ಅವರ ತಾಯಿ ಅನಂತಮತಿಯಮ್ಮನಿಗೆ ದೇವಪೂಜೆ, ವ್ರತ - ಉಪವಾಸ, ನೋಂಪಿ - ಉಪಾಸನೆ, ಭಜನೆ - ಶೋಭಾನೆಗಳೆಂದರೆ ವಿಶೇಷ ಪ್ರೀತಿ - ಶ್ರದ್ಧೆಗಳಿದ್ದವು. ದೇವರು, ಬಸದಿ - ಗೋಪುರ, ಯಕ್ಷ - ಯಕ್ಷಿಯರ ಬಗ್ಗೆ ವಿಶೇಷ ಭಯ - ಭಕ್ತಿಯುಳ್ಳವರಾಗಿದ್ದರು.

ಇಂತಹ ಪುಣ್ಯಾತ್ಮರಾದ ಮಾತಾಪಿತರ ಶುಭ ಪ್ರಭಾವದಲ್ಲಿ, ಪುಣ್ಯದ ಫಲವಾಗಿ ಪುತ್ರ ಮಂಜಯ್ಯರು ಒಂದು ಮಹತ್ವದ ವ್ಯಕ್ತಿತ್ವವನ್ನು ಗಳಿಸಿದರು. ಅವರು ಬೆಳೆದು ದೊಡ್ಡವರಾದಾಗ, ದೇವರು - ಧರ್ಮದ ವಿಚಾರ, ರಾಜಕೀಯ - ಆಡಳಿತ ಸಂಗತಿ, ಜನತೆಯ ಶೈಕ್ಷಣಿಕ ಪ್ರಗತಿ, ಸಾಹಿತ್ಯ - ಸಂಸ್ಕೃತಿ ಹಾಗೂ ಸಮಾಜದ ಉನ್ನತಿಗಾಗಿ ವಿಶೇಷ ಪ್ರಯತ್ನ ನಡೆಸಿದರು. ಇದೆಲ್ಲವೂ ಅವರ ಮಾತಾಪಿತರು ಅವರಿಗೆ ನೀಡಿದ ಸಂಸ್ಕಾರದ ಫಲವಾಗಿತ್ತು. ಒಳ್ಳೆಯ ಕ್ಷೇತ್ರದಲ್ಲಿ ಒಳ್ಳೇ ಬೀಜವನ್ನು ಹಾಕಿ, ಚೆನ್ನಾಗಿ ನೀರು - ಗೊಬ್ಬರಗಳನ್ನೊದಗಿಸಿದರೆ, ಸತ್-ಫಲ ದೊರೆಯದೇ ಇರಲು ಸಾಧ್ಯವೇ?

ಇಷ್ಟರಲ್ಲೇ ಅವರ ಬದುಕಿನಲ್ಲೇ ಒಂದು ಬಹುದೊಡ್ಡ ತಿರುವು ನೀಡುವ ಸಂದರ್ಭವೊದಗಿ ಬಂತು. ಧರ್ಮಸ್ಥಳದಲ್ಲಿ ಧರ್ಮಾಧಿಕಾರಿಯಾಗಿದ್ದ ಧರ್ಮಪಾಲ ಹೆಗ್ಗಡೆಯವರು ತೀರಿಕೊಂಡರು. ಅವರಿಗೆ ಮಕ್ಕಳಿರಲಿಲ್ಲ. ಅವರ ತಾಯಿ ಲಕ್ಷ್ಮೀಮತಿಯಮ್ಮ ವಿಟ್ಲಕ್ಕೆ ಬಂದರು. ಅಲ್ಲಿ ಚಿಕ್ಕಿತ್ತಡ ಅಣ್ಣಿ ಶೆಟ್ಟಿಯವರ ಮಗನಾದ ಚಂದಪ್ಪ - ಎಂಬ 13 ವರ್ಷದ ಬಾಲಕನನ್ನು ಅಣ್ಣಿ ಶೆಟ್ಟಿಯವರ ಮಗನಾದ ಮಂಜಪ್ಪ - ಎಂಬ ಒಂದು ವರ್ಷ ಪ್ರಾಯದ ಮಗುವನ್ನೂ ದತ್ತಕ್ಕೆ ತೆಗೆದುಕೊಂಡರು. ಹೀಗಾಗಿ ಅವರ ಬಾಲ್ಯವು ವಿಟ್ಲದಲ್ಲೋ, ಧರ್ಮಸ್ಥಳದಲ್ಲೋ ಕಳೆಯಿತು.

ಅವರಿಗೆ ತಮ್ಮ ಬಾಲ್ಯದಲ್ಲಿ ವಿದ್ಯಾಭ್ಯಾಸದ ಕಡೆಗೆ ಯಾರೂ ಗಮನ ಹರಿಸಲಿಲ್ಲ ಎಂಬ ಬೇಸರವಿತ್ತು. ಪ್ರಾರಂಭದಲ್ಲಿ ಅವರು ವಿಟ್ಲದ ಶಾಲೆಗೆ ಹೋಗತೊಡಗಿದರು. ಅನಂತರ ಧರ್ಮಸ್ಥಳದಲ್ಲೂ ಶಾಲೆಗೆ ಹೋದರು. ಅವರ ತಂದೆ ಅಣ್ಣಿ ಶೆಟ್ಟಿಯವರಿಗೆ ಎರಡು ಮದುವೆಗಳಾಗಿದ್ದವು. ಅನಂತಮತಿಯಮ್ಮನ ತಂಗಿಯೇ ಅವರ ಎರಡನೇ ಪತ್ನಿ. ಈ ಪತ್ನಿಯಲ್ಲಿ ಕುಮಾರಯ್ಯ ಮತ್ತು ಪುಟ್ಟುಸ್ವಾಮಿ ಎಂದು ಎರಡು ಗಂಡು ಮಕ್ಕಳು. ಕುಮಾರಯ್ಯ ತೀರಿಕೊಂಡರು. ಪುಟ್ಟುಸ್ವಾಮಿ ಮಂಜಯ್ಯ ಹೆಗ್ಗಡೆಯವರ ಪ್ರೀತಿಯ ತಮ್ಮನಾಗಿದ್ದು ಮಂಗಳೂರಲ್ಲಿ ವಕಾಲತ್ತು ಮಾಡಿಕೊಂಡಿದ್ದರು.

ಧರ್ಮಸ್ಥಳದಲ್ಲಿ ಮಂಜಯ್ಯನವರ ವ್ರತ ಸ್ವೀಕಾರ - ಉಪನಯನ ನಡೆಯಿತು. ಶ್ರವಣ ಬೆಳಗೊಳದ ಸ್ವಸ್ತಿ ಶ್ರೀ ನೇಮಿಸಾಗರ ವರ್ಣಿಯವರೇ ಆಗಮಿಸಿ ಅವರಿಗೆ ಮಂತ್ರ - ವ್ರತೋಪದೇಶ ನೀಡಿದ್ದರು.

ಆಗ ಧರ್ಮಸ್ಥಳದಲ್ಲಿ ನಾಲ್ಕನೇ ತರಗತಿ ವರೆಗೆ ಮಾತ್ರ ಓದುವ ವ್ಯವಸ್ಥೆಯಿತ್ತು. ಅವರಿಗೆ ಮತ್ತಷ್ಟು ಓದಬೇಕು, ಇನ್ನಷ್ಟು ಕಲಿಯಬೇಕೆಂಬ ಹಂಬಲ. ವಿಟ್ಲದಲ್ಲಾಗಲೀ, ಧರ್ಮಸ್ಥಳದಲ್ಲಾಗಲೀ ಇದಕ್ಕಿಂತ ಹೆಚ್ಚು ಕಲಿಸುವ ಅವಕಾಶದ ಶಿಕ್ಷಣ ಸಂಸ್ಥೆಗಳು ಆಗ ಇದ್ದಿಲ್ಲ. ದೂರಕ್ಕೆ ಕಳುಹಿಸುವುದು ಮನೆಯವರಿಗೆ ಇಷ್ಟವಿಲ್ಲ ; ಮುದ್ದಿನ ಮಗನಷ್ಟೆ! ಮನೆಯಲ್ಲೇ ಇಂಗ್ಲಿಷ್ ಭಾಷೆಯನ್ನು ಕಲಿಸಲೆಂದು ಓರ್ವ ಇಂಗ್ಲಿಷ್ ಭಾಷಾಧ್ಯಾಪಕರನ್ನು ಇರಿಸಿಕೊಂಡರು. ಅವರೂ ಕೂಡಾ ಸ್ವಲ್ಪ ಸಮಯದ ಬಳಿಕ ಹೇಳದೆ - ಕೇಳದೆ ಓಡಿ ಹೋದರು. ಹೀಗೆ ಮನೆಯ ಅಧ್ಯಯನವೂ, ಇಂಗ್ಲೀಷಿನ ಅಧ್ಯಯನವೂ ನಿಂತು ಹೋದವು. ಆದರೆ ಮಂಜಯ್ಯನವರಿಗೆ ತಾನು ಇನ್ನಷ್ಟು ಕಲಿಯಬೇಕು, ಹೆಚ್ಚು ಕಲಿತು ಪ್ರಗತಿಯನ್ನು ಸಾಧಿಸಬೇಕೆಂಬ ಹಠವಿತ್ತು.

ಇಷ್ಟರಲ್ಲಿ ದುರ್ವಿಧಿ ಕಾಡಿತು! ಓರಗೆಯ ಮಕ್ಕಳೊಂದಿಗೆ ಆಡುತ್ತಿರುವಾಗ ಮಂಜಯ್ಯನವರು ಕಾಲು ಜಾರಿ ಬಿದ್ದರು. ಕುಳಿತಲ್ಲೇ ಇರಬೇಕಾಯ್ತು. ನಡೆದಾಡುವಂತಿಲ್ಲ. ಚಿಕಿತ್ಸೆ ನಡೆದು ಬಹು ಕಷ್ಟದಿಂದ ಗುಣವಾಯಿತು. ಹಾಗಿದ್ದರೂ ಅವರು ಹಠ ಹಿಡಿದು ತನ್ನ 16ನೇ ವರ್ಷದಲ್ಲಿ ಪುತ್ತೂರಿಗೆ ಹೋಗಿ, ಅಲ್ಲಿ ಮಿಡ್ಲ್‌ಸ್ಕೂಲ್ ಫಸ್ಟ್ ಫಾರ್ಮ್ (ಈಗಿನ ಆರನೇ ತರಗತಿ)ಗೆ ಸೇರಿಕೊಂಡರು. ಅಲ್ಲಿ ಮಿಡ್ಲ್‌ಸ್ಕೂಲ್ ಸೆಕೆಂಡ್ ಫಾರ್ಮ್ ಪಾಸಾಗಿ, ಮೂರನೇ (ಥರ್ಡ್) ಫಾರ್ಮ್‌ಗೆ ಮಂಗಳೂರಿನ ಕೆನರಾ ಹೈಸ್ಕೂಲಿಗೆ ಸೇರಿಕೊಂಡರು. ಅಲ್ಲಿ 34 ತಿಂಗಳು ಕಳೆಯುವಷ್ಟರಲ್ಲಿ ಊಟ - ವಸತಿಯ ಅಸಮರ್ಪಕತೆಯಿಂದಾಗಿ ಮತ್ತೆ ಆರೋಗ್ಯ ಕೆಟ್ಟಿತು. ರಕ್ತಾತಿಸಾರ ವ್ಯಾಧಿಯು ಅವರನ್ನು ಪೀಡಿಸಿತು. ಮತ್ತೆ ವಿಟ್ಲಕ್ಕೆ ಬಂದು ಉಪಚಾರ ಪಡೆದರು. ಹೀಗೆ ಮತ್ತೆ ಒಂದು ವರ್ಷ ವ್ಯರ್ಥವಾಯಿತು.

ಅವರಿಗೆ ಚಿತ್ರಕಲೆಯೆಂದರೆ ಬಹಳ ಇಷ್ಟ. ಹೈಸ್ಕೂಲಿನ ಮೆಟ್ರಿಕ್ ಶಿಕ್ಷಣ ಮುಗಿದೊಡನೆ, ಮುಂಬೈಗೆ ಹೋಗಬೇಕು ; ಅಲ್ಲಿ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಚಿತ್ರಕಲೆಯ ಅಧ್ಯಯನ ನಡೆಸಬೇಕೆಂಬ ಮಹತ್ವಾಕಾಂಕ್ಷೆಯಿತ್ತು. ಆದರೆ, ಆಗ ಮುಂಬೈ ಎಂದರೆ ವಿದೇಶಕ್ಕೆ ಹೋದಂತೆಯೇ ದೂರ! ಅವರ ತಂದೆ - ತಾಯಂದಿರು ಅಷ್ಟು ದೂರದ ಅಪರಿಚಿತ - ಪರಿಸರಕ್ಕೆ ಕಳುಹಿಸಲು ಸಿದ್ಧರಿರಲಿಲ್ಲ. ಅದರಿಂದಾಗಿ ಚಿತ್ರಕಲೆ ಕಲಿಯಲೆಂದು ಮುಂಬೈಗೆ ಹೋಗುವ ಬಯಕೆಯನ್ನು ಕೈಬಿಡಬೇಕಾಯ್ತು. ಹಾಗೆಂದು ಸುಮ್ಮನೆ ಮನೆಯಲ್ಲಿರಲೂ ಅವರಿಗೆ ಮನಸ್ಸಿರಲಿಲ್ಲ. ಅವರು ಮಂಗಳೂರಿಗೆ ಹೋಗಿ ಸೈಂಟ್ ಅಲೋಶಿಯಸ್ ಕಾಲೇಜಿನಲ್ಲಿ ಇಂಟರ್ ಮೀಡಿಯೆಟ್ (ಈಗಿನ ಪಿ.ಯು.ಸಿ.) ತರಗತಿಗೆ ಸೇರಿದರು. ಆಗ ಕೂಡಾ ಅವರ ಮನಸ್ಸು ಚಿತ್ರಕಲೆಯಲ್ಲೇ. ಪಾಠ ಮಾಡುವ ಪ್ರಾಧ್ಯಾಪಕರ ಚಿತ್ರ ಬಿಡಿಸುತ್ತಾ ಕುಳಿತಿರುತ್ತಿದ್ದರು.

ಇಷ್ಟರಲ್ಲಿ ಅವರ ಜೀವನದಲ್ಲಿ ಇನ್ನೊಂದು ಬದಲಾವಣೆ ನಡೆಯಿತು. ಧರ್ಮಸ್ಥಳದಲ್ಲಿ ಧರ್ಮಾಧಿಕಾರಿಯಾಗಿದ್ದ ಚಂದಯ್ಯ ಹೆಗ್ಗಡೆಯವರು ನಿಧನರಾದರು. ಹೀಗೆ ಇವರು ತಮ್ಮ ಕಾಲೇಜು ವಿದ್ಯಾಭ್ಯಾಸಕ್ಕೆ ಇತಿಶ್ರೀ ಹಾಡಬೇಕಾಯ್ತು; ಮತ್ತು ಧರ್ಮಸ್ಥಳದ ಬಹುದೊಡ್ಡ ಜವಾಬ್ದಾರಿಯನ್ನು ಸ್ವೀಕರಿಸಬೇಕಾಯಿತು.

ಸನ್ 1918ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಅವರ ಪಟ್ಟಾಭಿಷೇಕ ನಡೆಯಿತು. ನಾಡಿನ ಬಲು - ದೊಡ್ಡ ಪುಣ್ಯಕ್ಷೇತ್ರವಾದ ಧರ್ಮಸ್ಥಳದಲ್ಲಿ ಧರ್ಮಾಧಿಕಾರಿಯವರ ವಿಶೇಷ ಗೌರವದ ಸ್ಥಾನವನ್ನು ಅವರು ಸ್ವೀಕರಿಸಿದರು.

ಕ್ಷೇತ್ರ ಸುಧಾರಣೆಯ ಮಹಾಕಾರ್ಯ

ಪಟ್ಟವನ್ನೇರಿದ ಬಳಿಕ ತನ್ನ ಕ್ಷೇತ್ರಕ್ಕೆ, ತನ್ನ ಊರಿಗೆ, ತನ್ನ ಸಮಾಜಕ್ಕೆ ತಾನು ಸಲ್ಲಿಸಬೇಕಾದ ಕರ್ತವ್ಯಗಳೇನು? ತಾನು ಆ ಕರ್ತವ್ಯಗಳನ್ನು ಹೇಗೆ ನಿರ್ವಹಿಸಬಹುದು? - ಎಂಬ ಯೋಚನೆಗಳೇ ಮತ್ತೆ - ಮತ್ತೆ ಅವರ ಮನಸ್ಸಿನಲ್ಲಿ ಸುತ್ತುತ್ತಿದ್ದವು.

ಆ ಕಾಲದಲ್ಲಿ ಧರ್ಮಸ್ಥಳ ಮಾತ್ರವಲ್ಲ, ಇಡೀ ಮಲೆನಾಡೇ ಮಲೇರಿಯಾದ ಪ್ರದೇಶವಾಗಿತ್ತು. ಈ ರೋಗ ಉಪಟಳ ಹೇಳತೀರದು. ಜನರಂತೂ ಕಂಗಾಲಾಗಿದ್ದರು. ಹಾಗಿದ್ದರೂ ಅವರು ಹೆದರಲಿಲ್ಲ. ಪಟ್ಟಕ್ಕೆ ಬಂದೊಡನೆ - ಅವರು ಕೈಗೆತ್ತಿಕೊಂಡ ಕಾರ್ಯವೆಂದರೆ - ಮಲೇರಿಯಾ ಬಾಧೆಯನ್ನು ಕುಗ್ಗಿಸುವ ಪ್ರಯತ್ನ. ಸುತ್ತಮುತ್ತಲಿನ ಅನಾರೋಗ್ಯಕರ ಪರಿಸರವನ್ನು ಶುದ್ಧಗೊಳಿಸಿದರು ; ಕಾಡು - ಪೊದೆಗಳನ್ನು ಸವರಿ, ನೀರು ನಿಲ್ಲುವ ಕೊಚ್ಚೆ - ಜವುಗು ಪ್ರದೇಶಗಳನ್ನು ಮಣ್ಣು ಹಾಕಿ ಮುಚ್ಚಿಸಿದರು. ಅಲ್ಲಲ್ಲಿ ಹೊಸ ರಸ್ತೆ - ಮಾರ್ಗಗಳನ್ನು ನಿರ್ಮಿಸಿದರು. ಹೊಸ ಕೆರೆ - ಬಾವಿಗಳನ್ನು ಮಾಡಿಸಿದರು. ನಳ್ಳಿ ನೀರು ಸರಬರಾಜು ವ್ಯವಸ್ಥೆ ಮಾಡಿಸಿದರು. ಇಡೀ ಊರಿಗೇ ಹೊಸತೊಂದು ರೂಪ ಕೊಡಿಸಿದರು.

ಮಲೇರಿಯಾ ಎಂದರೆ ಅದೊಂದು ಅಂಟುರೋಗ. ಒಬ್ಬರಿಂದೊಬ್ಬರಿಗೆ ಹರಡುವ ವ್ಯಾಧಿ. ನೀರಿನಲ್ಲಿ ಡಿ.ಡಿ.ಟಿ. ಔಷಧ ಸಿಂಪರಣೆ ಮಾಡಿಸಿದರು. ರೋಗ ಪೀಡಿತರಿಗೆ ಕ್ವಿನೈನ್ ಮಾತ್ರೆಗಳನ್ನು ಉಚಿತವಾಗಿ ವಿತರಿಸಿದರು. ಮಲೇರಿಯಾದ ರೋಗಿಗಳ ಉಪಚಾರ - ವಸತಿಗಾಗಿ ಪ್ರತ್ಯೇಕ ವ್ಯವಸ್ಥೆ ಮಾಡಿಸಿದರು. ಇಂತಹ ಉಪಚಾರ, ಔಷಧ, ಚಿಕಿತ್ಸೆಯಿಂದಾಗಿ ಆರೋಗ್ಯವು ಸುಧಾರಿಸಿತು.

ಅನಂತರ ಅವರು ಧಾರ್ಮಿಕ ಸುಧಾರಣೆಗಳತ್ತ ಗಮನ ಹರಿಸಿದರು. ಧರ್ಮಸ್ಥಳವೆಂದರೆ - ದಾನಧರ್ಮಗಳಿಗೆ ತವರು ಮನೆಯಂತೆ ಇತ್ತು. ಶ್ರೀ ಮಂಜುನಾಥ ಸ್ವಾಮಿ ದೇವಸ್ಥಾನ, ನೆಲ್ಯಾಡಿ ಬೀಡಿನ ಧರ್ಮದೇವತೆಗಳು, ಶ್ರೀ ಚಂದ್ರನಾಥ ಸ್ವಾಮಿ ಬಸದಿ - ಇವು ಮೂರೂ ಸೇರಿದಂಥ ಒಂದು ವಿಶಿಷ್ಟ ಸಂಸ್ಥೆ. ಇಲ್ಲಿ ಎಲ್ಲಾ ಜಾತಿ - ಮತ - ಪಂಥಗಳವರಿಗೂ ದಾನ, ಧರ್ಮ, ಸಹಾಯ ಸಿಗುವಂತೆ

ಇನ್ನಷ್ಟು ವ್ಯಾಪಕ ವ್ಯವಸ್ಥೆ ಮಾಡಬೇಕೆಂಬುದು ಅವರ ಅಭಿಲಾಷೆಯಾಗಿತ್ತು. ದೇವಸ್ಥಾನದ ಎದುರುಗಡೆ ಪೂರ್ವ ದಿಕ್ಕಿನಲ್ಲಿ ಒಂದು ಹೊಸ ಉದ್ಯಾನ - (ಅದರ ಹೆಸರು 'ಲಲಿತೋದ್ಯಾನ')ವನ್ನು ನಿರ್ಮಿಸಿದರು. ಅಲ್ಲೊಂದು ಮಂಟಪ ರಚಿಸಿ, ಅದರಲ್ಲಿ ಸರಸ್ವತಿಯ ಮೂರ್ತಿಯನ್ನು ಸ್ಥಾಪಿಸಿದರು. ದೇವಸ್ಥಾನ, ಬೀಡು ಮತ್ತು ಉದ್ಯಾನಕ್ಕೆ ವಿದ್ಯುದ್ದೀಪ ಹಾಕಿಸಿದರು. ಇಡೀ ಧರ್ಮಸ್ಥಳವೇ ರಾತ್ರಿ ವೇಳೆಯಲ್ಲಿ ಝಗ - ಝಗ ಎಂದು ಶೋಭಿಸಿತು. ಆ ಕಾಲದಲ್ಲಿ ಇಡೀ ತಾಲೂಕಿನಲ್ಲೇ ಮೊಟ್ಟಮೊದಲ ಬಾರಿಗೆ ಇಂತಹ ವಿದ್ಯುತ್ತಿನ ವ್ಯವಸ್ಥೆಯಾದದ್ದು ಇಲ್ಲೇ.

ಧರ್ಮಸ್ಥಳದಲ್ಲಿ ನಡೆಯುವ ದಾನ - ಧರ್ಮಗಳ ದೃಷ್ಟಿಯಿಂದ ಕ್ಷೇತ್ರವು ಸ್ವಾವಲಂಬಿಯಾಗಿರಬೇಕೆಂದು ಅಲ್ಲಲ್ಲಿದ್ದ ತೋಟಗಳನ್ನು ವಿಸ್ತರಿಸಿದರು. ತೆಂಗು - ಅಡಿಕೆ, ಮಾವು - ಹಲಸು, ಬಾಳೆ ಮೊದಲಾದ ವಿವಿಧ ಜಾತಿಯ ಗಿಡಗಳನ್ನು ನೆಟ್ಟು ತೋಟಗಳನ್ನು ಬೆಳೆಸಿದರು. ಇದರಿಂದಾಗಿ ಕ್ಷೇತ್ರದ ಉತ್ಪತ್ತಿಯೂ ಹೆಚ್ಚಾಗುತ್ತಾ ಬಂತು.

ಆಗ ಧರ್ಮಸ್ಥಳಕ್ಕೆ ಹೋಗುವವರು ಮಂಗಳೂರು - ಚಾರ್ಮಾಡಿ - ಕಡೂರು ರಸ್ತೆಯಲ್ಲಿ ಬಂದು, ಉಜಿರೆಯಲ್ಲಿ ಇಳಿದು ಐದೂವರೆ ಮೈಲು ದೂರ ಧರ್ಮಸ್ಥಳ ರಸ್ತೆಯಲ್ಲಿ ಹೋಗಬೇಕಿತ್ತು. ಮಧ್ಯೆ ದಾರಿಗಡ್ಡವಾಗಿ ನೇತ್ರಾವತಿ ನದಿಯಿದೆ. ಈ ನದಿಯ ಮೇಲೊಂದು ಮುಳುಗು ಸೇತುವೆಯನ್ನು ನಿರ್ಮಿಸಿದರು. ಇಂದಿಗೂ ಆ ಹಳೆಯ ಮುಳುಗು ಸೇತುವೆಯು ಹೊಸ ಸೇತುವೆಯ ಪಕ್ಕದಲ್ಲೇ ಇದೆ. ಆ ಸೇತುವೆಯಿಂದಾಗಿ ಧರ್ಮಸ್ಥಳಕ್ಕೆ ಆಗಮಿಸುವ ಯಾತ್ರಿಕರಿಗೆ, ಭಕ್ತಾದಿಗಳಿಗೆ ಬಹಳ ಉಪಕಾರವಾದಂತಾಯಿತು.

ವಿವಿಧ ಜಾತಿ, ವಿವಿಧ ಧರ್ಮ, ವಿವಿಧ ವರ್ಗಗಳಿಗೆ ಸೇರಿದ ಜನರು ಬಂದಾಗ, ಅವರೆಲ್ಲರಿಗೂ ಯಾವುದೇ ಭೇದಭಾವವಿಲ್ಲದೆ, ಸ್ಥಳದ ಪರಂಪರೆಯಂತೆ ಊಟ - ಉಪಚಾರ ಹಾಗೂ ಎಲ್ಲಾ ವಿಧದ ಧರ್ಮಕಾರ್ಯಗಳನ್ನೂ ನಡೆಸಿದರು.

ಧರ್ಮಸ್ಥಳಕ್ಕೆ ಆಗಮಿಸುವ ಅತಿಥಿಗಳು ಮತ್ತು ಪ್ರವಾಸಿಗಳಿಗಾಗಿ ಧರ್ಮಛತ್ರ, ಅತಿಥಿಗೃಹಗಳನ್ನು ನಿರ್ಮಿಸಿದರು. ಇಷ್ಟು ಮಾತ್ರವಲ್ಲದೆ, ಬೇರೆ ಊರುಗಳಿಂದ ಧರ್ಮಸ್ಥಳಕ್ಕೆ ಬರುವ ಯಾತ್ರಿಕರಿಗಾಗಿ ಉಜಿರೆಯಲ್ಲಿ ಒಂದು ಛತ್ರವನ್ನೂ ನಿರ್ಮಿಸಿದ್ದರು. ಏಕೆಂದರೆ, ಆಗ ಉಜಿರೆಯಿಂದ ಧರ್ಮಸ್ಥಳಕ್ಕೆ ಸರಿಯಾದ ಸಾರಿಗೆ ಸೌಕರ್ಯವಿದ್ದಿರಲಿಲ್ಲ. ಹಾಗೂ ನೇತ್ರಾವತಿ ನದಿಯ ಮೇಲೆ ಸರಿಯಾದ ಸೇತುವೆಯೂ ಇದ್ದಿರಲಿಲ್ಲ.

ಹೀಗೆ ಕ್ಷೇತ್ರಕ್ಕೆ ಬರುವ ಜನರಿಗಾಗಿ ಸೌಕರ್ಯಗಳನ್ನು ಒದಗಿಸಿ, ಕ್ಷೇತ್ರಕ್ಕೆ ಒಳ್ಳೆಯ ಕೀರ್ತಿ ಸಿಗುವಂತೆ ಮಾಡಿದರು.

ಅವರ ಗೃಹಸ್ಥ ಜೀವನ

ಶ್ರೀ ಮಂಜಯ್ಯ ಹೆಗ್ಗಡೆಯವರು ಧರ್ಮಸ್ಥಳದ ಹಿರಿಯ ಮನೆತನದ ಹಿರಿಯ ವ್ಯಕ್ತಿಯಾಗಿದ್ದಂತೆಯೇ, ಅವರ ಭಾಗ್ಯಕ್ಕೆ ಸರಿಸಾಟಿಯಾದ ಜೀವನ ಸಂಗಾತಿಯೂ ಸಿಕ್ಕಿದ್ದರು. ಕಾರ್ಕಳ ತಾಲೂಕಿನ ಮೂಡಬಿದ್ರೆ ನಗರದಲ್ಲಿ ಪಟ್ಟಣ ಶೆಟ್ಟರಾಗಿದ್ದ ಶ್ರೀ ದೇವರಾಜ ಶೆಟ್ಟಿಯವರ ಪ್ರಥಮ ಪುತ್ರಿ ಲೋಕಮ್ಮ ಎಂಬವರ ಜತೆಗೆ ಸನ್ 1922ನೇ ಇಸವಿಯಲ್ಲಿ ಅವರ ವಿವಾಹ ನಡೆಯಿತು. ಅವರ ಧರ್ಮಪತ್ನಿ ಲೋಕಮ್ಮ - ಅವರನ್ನು ಎಲ್ಲರೂ ಗೌರವದಿಂದ 'ಶ್ರೀಮತಿಯಮ್ಮ' ಎಂದೇ ಕರೆಯುತ್ತಿದ್ದರು.

ಬಂಗಾರದ ಪುಷ್ಪಕ್ಕೆ ಪರಿಮಳ ಬಂದ ಹಾಗಾಯಿತು. ಅನುರೂಪ ದಂಪತಿಗಳು ಒಂದಾಗಿ ಧರ್ಮಸ್ಥಳದ ದಾನಧರ್ಮಗಳ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು, ಬೆಳಗಿದರು.

ಶ್ರೀಮತಿ ಲೋಕಮ್ಮ ಬಾಲ್ಯದಿಂದಲೇ ಒಳ್ಳೇ ಸ್ವಭಾವದವರು. 1940ರಲ್ಲಿ ಶ್ರವಣಬೆಳಗೊಳದಲ್ಲಿ ಜರಗಿದ ಮಹಾಮಸ್ತಕಾಭಿಷೇಕದಂಗವಾಗಿ ಅ.ಭಾ. ಜೈನ ಮಹಿಳಾ - ಸಮ್ಮೇಳನ ನಡೆದಾಗ, ಅವರೇ ಅದರ ಅಧ್ಯಕ್ಷತೆ ವಹಿಸಿದ್ದರು. ಕಾರ್ಕಳದ ಕನ್ಯಾಪಾಠಶಾಲೆಗಾಗಿ ಸಾಕಷ್ಟು ದಾನ - ಧರ್ಮ ನಡೆಸುತ್ತಿದ್ದರು. ಶ್ರೀಪಂಚಮಿ ನೋಂಪಿ, ಆದಿತ್ಯವಾರ ನೋಂಪಿ, ಅನಂತ ನೋಂಪಿ, ಸಹಸ್ರನಾಮ ಪೂಜೆಗಳನ್ನು ಮಾಡಿಸುತ್ತಿದ್ದರು ; ಉದ್ಯಾಪನೆ ನಡೆಸಿದ್ದರು. ಸಮ್ಮೇದ ಶಿಖರ್ಜಿ ಯಾತ್ರೆಗೂ ಸಹ ಹೋಗಿ ಬಂದಿದ್ದರು. ಅವರಿಗೆ ಸ್ವಾಧ್ಯಾಯ, ಶಾಸ್ತ್ರಾಭ್ಯಾಸಗಳೆಂದರೆ - ವಿಶೇಷ ಆಸಕ್ತಿ. ಅಷ್ಟಮಿ, ಚತುರ್ದಶಿ, ಪಂಚಮಿ - ವ್ರತಾಚರಣೆಗಳನ್ನೂ ನಡೆಸುತ್ತಿದ್ದರು. ಮುನಿಗಳಿಗೆ ಆಹಾರದಾನ, ಬಡವರಿಗೆ ಉಪಕಾರ ಮಾಡುವುದೆಂದರೆ ಅವರಿಗೆ ಬಹಳ ಇಷ್ಟ.

ಧರ್ಮಸ್ಥಳದ ಬೀಡು - ಎಂದರೆ ಅಲ್ಲಿ ನಿತ್ಯವೂ ಅತಿಥಿಗಳೇ. ಅತಿಥಿ - ಅಭ್ಯಾಗತರು, ಯಾತ್ರಿಕರು, ಪ್ರವಾಸಿಗಳು - ಇತ್ಯಾದಿಯಾಗಿ ಬಂದ ಜನರನ್ನು ಸತ್ಕರಿಸಿ ಹಿಂದೆ ಕಳುಹಿಸುವುದೇ ಒಂದು ದೊಡ್ಡ ವಿಚಾರ. ಈ ಮಹಾಮನೆಯಲ್ಲಿ ಸಣ್ಣ - ದೊಡ್ಡ, ವಿಧ - ವಿಧದ ಜನರಿಗೆ ಆದರೋಪಚಾರ ನಡೆಸಿ, ಈ ದಂಪತಿಗಳು ವಿಶೇಷ ಖ್ಯಾತಿಯನ್ನು ಗಳಿಸಿದರು.

ಈ ದಂಪತಿಗಳ ಕುಟುಂಬವೆಂಬ ಕಡಲಿನಲ್ಲಿ ಚಂದ್ರನೇ ಮೂಡಿ ಬಂದಂತೆ - ಒಬ್ಬಳೇ ಒಬ್ಬಳು ಮುದ್ದಿನ ಮಗಳು - ವಿಮಲಮ್ಮ. ಆಕೆ ತನ್ನ ತಂದೆ - ತಾಯಂದಿರ ಎಲ್ಲ ಗುಣಗಳನ್ನು ಪಡೆದ ತೇಜಸ್ವಿನಿ - ಸದ್ಗುಣ ಸಂಪನ್ನೆಯಾದ ಪುತ್ರಿ. ಆಗ ದಕ್ಷಿಣ ಕನ್ನಡದಲ್ಲೇ ಹಿರಿಯ ಮನೆತನವಾಗಿದ್ದ ಕಟ್ಟೆಮಾರು ರಘುಚಂದ್ರ ಬಲ್ಲಾಳರ ಏಕಮಾತ್ರ ಪುತ್ರರಾದ ಶ್ರೀನಿವಾಸ ಬಲ್ಲಾಳರಿಗೆ ಧಾರೆಯೆರೆದು ಮದುವೆ ಮಾಡಿದರು.

ಶ್ರೀಮತಿ ವಿಮಲಮ್ಮ ತನ್ನ ಮಾತಾಪಿತರ ಮನೆಯಲ್ಲಿ ಪಡೆದ ಎಲ್ಲಾ ಸದ್ಗುಣಗಳ ಭಂಡಾರದೊಂದಿಗೇ ಬಂದು ಪತಿಗೃಹವನ್ನು ಬೆಳಗಿದರು. ಆ ಮನೆಗೂ ಬೆಳಕು ತುಂಬಿದರು. ಇಂದಿಗೆ ನಾಲ್ಕು ಗಂಡು, ನಾಲ್ಕು ಹೆಣ್ಣು ಮಕ್ಕಳನ್ನು ಪಡೆದು, ತುಂಬು - ಕುಟುಂಬದ ಯಜಮಾನಿಯಾಗಿ,

ಮಂಗಳೂರಿನ ಲಾಲ್‌ಬಾಗ್ ಬಳಿ 'ಬಲ್ಲಾಳ್-ಬಾಗ್' ಹೆಸರಿನ ಮನೆಯಲ್ಲಿ ವಾಸವಾಗಿದ್ದಾರೆ. ಹಾಗೂ ತುಳುನಾಡಿನ ಮಹಿಳೆಯರಿಗೆ 'ಆದರ್ಶ ನಾರಿ'ಯಾಗಿದ್ದಾರೆ.

ಗೃಹಸ್ಥರಾದವರು ಆಹಾರ ದಾನ, ಶಾಸ್ತ್ರ ದಾನ, ಔಷಧ ದಾನ, ಅಭಯ ದಾನ - ಹೀಗೆ ಚತುರ್ದಾನಗಳನ್ನು ನಡೆಸಬೇಕೆಂದು ಶಾಸ್ತ್ರಗಳು ಹೇಳುತ್ತವೆ. ಆಹಾರ ದಾನವೆಂದರೆ - ಮನೆಗೆ ಬಂದವರಿಗೆ ಊಟದ ವ್ಯವಸ್ಥೆ. ಈ ಸಂದರ್ಭದಲ್ಲಿ ಮೇಲು - ಕೀಳು, ಆ ಜಾತಿ - ಈ ಜಾತಿಯೆನ್ನದೆ, ಭೇದಭಾವವಿಲ್ಲದೆ ಎಲ್ಲರಿಗೂ ಭೋಜನದ ವ್ಯವಸ್ಥೆ ನಡೆಸಿದರು. ಪ್ರಾಚೀನ ಕಾಲದಲ್ಲಿ ಇಲ್ಲಿ ಪಡಿಯಕ್ಕಿಯ ವ್ಯವಸ್ಥೆಯಿತ್ತು. ಕಡೆಗೆ ಎಲ್ಲರಿಗೂ ಉಚಿತ ಭೋಜನದ ವ್ಯವಸ್ಥೆ ನಡೆಸಿದರು.

ಶಾಸ್ತ್ರದಾನದ ಆಧುನಿಕ ಸ್ವರೂಪ - ಓದು ಬರೆಹದ ಪ್ರಚಾರ ; ವಿದ್ಯಾಪ್ರಸಾರ. ಜನರಿಗೆ ವಿದ್ಯೆ ನೀಡಿದರೆ, ಅವರು ಉತ್ತಮ ನಾಗರಿಕರಾಗಿ ಸಮಾಜಕ್ಕೂ, ದೇಶಕ್ಕೂ ಮಾಡಬೇಕಾದ ಕರ್ತವ್ಯಗಳನ್ನು ಚೆನ್ನಾಗಿ ನಿರ್ವಹಿಸುತ್ತಾರೆ. ಹಾಗೆಯೇ ತಮ್ಮ ಆತ್ಮೋದ್ಧಾರಕ್ಕಾಗಿ ಪಾರಮಾರ್ಥಿಕ ವಿಚಾರಗಳನ್ನು ತಿಳಿಯುವ ಪ್ರಯತ್ನ ಮಾಡುತ್ತಾರೆ. ಅದಕ್ಕಾಗಿ ಅವರು ಉಜಿರೆಯಲ್ಲಿ ಸಿದ್ಧವನ ಗುರುಕುಲ ಮತ್ತು ಹೈಸ್ಕೂಲು ಆರಂಭಿಸಿದರು. ಇತರರಿಗೂ ಇಂಥ ಶಾಲೆ - ಹೈಸ್ಕೂಲುಗಳನ್ನು ತೆರೆಯಲು ಪ್ರೇರಣೆ ನೀಡಿದರು.

ಔಷಧ ದಾನ - ಧರ್ಮಾಸ್ಪತ್ರೆಯಲ್ಲಿ ಬಡಜನತೆಗೆ ಉಚಿತವಾಗಿ ಔಷಧ ಕೊಡಿಸಿದರು. ಇದಕ್ಕಿಂತಲೂ ಮಹತ್ವದ ವಿಚಾರವೆಂದರೆ - ಅಭಯ ದಾನ. ಈ ಜಗತ್ತಿನಲ್ಲಿ ನಾನಾ ಪ್ರಕಾರವಾದ ಕಷ್ಟ - ತಾಪತ್ರಯಗಳಲ್ಲಿ ನೊಂದ ಜನರಿರುತ್ತಾರೆ. ಅಂಥವರು ಶ್ರೀ ಕ್ಷೇತ್ರಕ್ಕೆ ಬಂದಾಗ 'ನೀವೇನೂ ಭಯಪಡಬೇಕಾಗಿಲ್ಲ. ಶ್ರೀ ಮಂಜುನಾಥ ಸ್ವಾಮಿಯನ್ನು ನಂಬಿಕೊಂಡಿರಿ. ನಿಮ್ಮನ್ನು ಅವರೇ ರಕ್ಷಿಸುತ್ತಾರೆ' - ಎಂದು ಸಾವಿರಾರು ಜನರಿಗೆ ಅಭಯ ದಾನ ಮಾಡುತ್ತಿದ್ದರು.

ರತ್ನಾಕರ ವರ್ಣಿಯೆಂಬ ಮೂಡಬಿದ್ರೆಯ ಕವಿ ಹೇಳಿದಂತೆ ಆದರ್ಶ ಗೃಹಸ್ಥ ಜೀವನವನ್ನು ಅವರು ನಡೆಸುತ್ತಿದ್ದರು :-

ತನುವಂ ಸಂಘದ ಸೇವೆಯೊಳ್ ಮನಮನಾತ್ಮಧ್ಯಾನದಭ್ಯಾಸದೊಳ್
ಧನಮಂ ದಾನ ಸುಪೂಜೆಯೊಳ್ ದಿನಮನರ್ಹದ್ಧರ್ಮಕಾರ್ಯ ಪ್ರವ -
ರ್ತನೆಯೊಳ್ ಪರ್ವವನೊಬ್ಬ ನೋಂಪಿಗಳೊಳರ್ದಾಯುಷ್ಯಮಂ ಮೋಕ್ಷ ಚಿಂ -
ತನೆಯೊಳ್ ತೀರ್ಚುವ ಸದ್ಗೃಹಸ್ಥನನಘಂ ರತ್ನಾಕರಾಧೀಶ್ವರಾ ||

- ಅವರ ಈ ಎಲ್ಲಾ ಕಾರ್ಯಗಳಲ್ಲೂ ಅವರ ಧರ್ಮಪತ್ನಿಯಾದ ಲೋಕಮ್ಮನವರ ಸಹಕಾರವೂ ಇದ್ದಿತು. ಆಕೆಗೆ ಸಮ್ಮೇದ ಶಿಖರ್ಜಿ ಯಾತ್ರೆಗೆ ಹೋಗಬೇಕೆಂಬ ಹಂಬಲವಿತ್ತು. ಅವರನ್ನು ತಂದೆ - ತಾಯಿಯ ಜತೆಗೆ ಶಿಖರ್ಜಿ - ಯಾತ್ರೆಗೆ ಕಳುಹಿಸಿ ಕೊಟ್ಟರು.

ಒಮ್ಮೆ ಅವರ ಪತ್ನಿ ಅಸ್ವಸ್ಥರಾದರು. ಅವರು ಕ್ಷಯರೋಗ ಪೀಡಿತರಾಗಿದ್ದರು. ಆಗ ಕ್ಷಯರೋಗಕ್ಕೆ ಸೂಕ್ತ ಮದ್ದಿರಲಿಲ್ಲ. ಅದರಿಂದಾಗಿ ಅವರು 1945ನೇ ಇಸವಿಯಲ್ಲಿ ನಿಧನರಾದರು.

ಅನಂತರವೂ ಸುಮಾರು ಹತ್ತು ವರ್ಷಗಳ ಕಾಲ ಮಂಜಯ್ಯ ಹೆಗ್ಗಡೆಯವರು ಧರ್ಮಸ್ಥಳದ ಧರ್ಮಾಧಿಕಾರಿಯಾಗಿ, ಓರ್ವ ಆದರ್ಶ ಶ್ರಾವಕರಾಗಿದ್ದು ಜೀವನ ನಡೆಸಿದರು.

ಅವರ ಧಾರ್ಮಿಕ ಜೀವನ

ಧರ್ಮಸ್ಥಳದ ಧರ್ಮಾಧಿಕಾರಿಯಾಗಿದ್ದ ಅವರ ಬದುಕೇ ಧರ್ಮಕ್ಕೇ ಮುಡಿಪಾಗಿದ್ದಿತು. ಅವರಿಗೆ ದಾನ - ಧರ್ಮ ಪರೋಪಕಾರಾದಿಗಳಲ್ಲಿ ವಿಶೇಷ ಸಂತೋಷ ಸಿಗುತ್ತಿತ್ತು. ದಾನ ಧರ್ಮ ಮಾಡುವಾಗ ಆ ಜಾತಿ - ಈ ಜಾತಿಯೆಂದು ಭೇದಭಾವ - ಪಕ್ಷಪಾತಗಳಿಲ್ಲದೆ, ಸರ್ವರನ್ನೂ ಸಮಭಾವದಿಂದ ಕಾಣುವ ಸರ್ವಧರ್ಮ - ಸಮನ್ವಯದ ದೃಷ್ಟಿ ಅವರದಾಗಿತ್ತು.

ಅವರೂ, ಅವರ ಪತ್ನಿಯೂ ಉತ್ತರಭಾರತಕ್ಕೆ ತೀರ್ಥಯಾತ್ರೆಗೆಂದು ತೆರಳಿದ್ದರು. ಶ್ರೀ ಪಂಚಮಿ, ಅನಂತನೋಂಪಿ, ಆದಿತ್ಯವಾರ ನೋಂಪಿ - ಮೊದಲಾದ ವ್ರತಗಳನ್ನು ಆಚರಿಸಿ, ಉದ್ಯಾಪನೆ ಮಾಡಿಸಿದ್ದರು. ಅವರಿಗೆ ದಿಗಂಬರ ಮುನಿಗಳು, ಸ್ವಾಮಿಗಳು ಎಂದರೆ ವಿಶೇಷವಾದ ಭಕ್ತಿ. ದಿಗಂಬರ ಮುನಿಗಳಿಗೆ ಆಹಾರ ದಾನ, ಶಾಸ್ತ್ರದಾನ ನಡೆಸುತ್ತಿದ್ದರು.

ಸನ್ 1952ನೇ ಇಸವಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಶ್ರೀಪಾಯಸಾಗರರು ಒಮ್ಮೆ ಆಗಮಿಸಿದ್ದರು. ಅವರು ಅತ್ಯಂತ ಪ್ರಸಿದ್ಧ ಜೈನಮುನಿಗಳು. ಶ್ರೀ ಯೋಗೀಂದು ದೇವ - ಎಂಬ ಹೆಸರಿನ ಸಂಸ್ಕೃತದ ಮಹಾಕವಿಯು ಸಂಸ್ಕೃತದಲ್ಲಿ ಬರೆದ 'ಪರಮಾತ್ಮ ಪ್ರಕಾಶ' - ಎಂಬ ಗ್ರಂಥಕ್ಕೆ ಕನ್ನಡದ ವ್ಯಾಖ್ಯೆ ಸಿದ್ಧವಾಗಬೇಕು - ಎಂದು ಆ ಮುನಿಗಳು ಅಪೇಕ್ಷೆ ಪಟ್ಟರು. ಮಂಜಯ್ಯ ಹೆಗ್ಗಡೆಯವರು ತಕ್ಷಣ ಈ ಕೆಲಸಕ್ಕೆ ಕೈಹಾಕಿದರು. ಮೂಡಬಿದ್ರೆಯಲ್ಲಿದ್ದ ಶ್ರೀ ಚಂದ್ರರಾಜೇಂದ್ರ - ಎಂಬ ಹೆಸರಿನ ಪ್ರಸಿದ್ಧ ವಿದ್ವಾಂಸರಿಂದ ಆ ಮಹಾಗ್ರಂಥಕ್ಕೆ ಕನ್ನಡ ವ್ಯಾಖ್ಯಾನ ಬರೆಸಿದರು. ಆ ಪುಸ್ತಕ ಪ್ರಕಟವಾದಾಗ, ಆ ಮುನಿಗಳಿಗೇ ಆ ಮಹಾಗ್ರಂಥವನ್ನು ಸಮರ್ಪಿಸಿದರು. ಹಾಗೂ ಆ ಗ್ರಂಥದ ಒಂದು ಸಾವಿರ ಪ್ರತಿಗಳನ್ನು ಮುದ್ರಿಸಿ ದಾನ ಮಾಡಿದರು ; ಸಾರ್ವಜನಿಕರಿಗೆ ಹಂಚಿದರು.

ಧರ್ಮದ ಕುರಿತಾದ ಚರ್ಚೆ ನಡೆಸುವುದು, ಪುಸ್ತಕಗಳನ್ನು ಓದುವುದು - ಬರೆಯುವುದು, ಭಾಷಣ

ಮಾಡುವುದು - ಮಾಡಿಸುವುದು - ಕೇಳುವುದು ; ಇವಿಷ್ಟು ಮಾತ್ರವಲ್ಲದೆ ಧರ್ಮವನ್ನು ಆಚರಿಸುವುದು - ಇವೆಲ್ಲದರಲ್ಲೂ ಅವರಿಗೆ ವಿಶೇಷಾಸಕ್ತಿ. ಧರ್ಮದ ವಿಷಯವನ್ನು ತಾನು ಮಾತ್ರ ತಿಳಿದರೆ ಸಾಲದು, ಸರ್ವಜನರೂ ಧರ್ಮದ ತಿರುಳನ್ನು ಅರಿಯಬೇಕು - ಎಂಬ ಉದ್ದೇಶದಿಂದ ಸರ್ವಧರ್ಮ ಸಮ್ಮೇಳನದ ಪರಂಪರೆಯನ್ನು ಆರಂಭಿಸಿದರು. ಹಿಂದಿನ ಕಾಲದಲ್ಲಿ ಮಾರಿಗುಡಿಗಳಲ್ಲಿ ಪ್ರಾಣಿ ಬಲಿ ನಡೆಯುತ್ತಿತ್ತು. ಹಳ್ಳಿಗಳ ಜನರು ಮೂಢನಂಬಿಕೆಯಿಂದ ಮೂಕಪ್ರಾಣಿಗಳ ತಲೆಕಡಿದು, ಬಲಿ ನೀಡುತ್ತಿದ್ದರು. ಹಾಗೂ ಆ ಪ್ರಾಣಿಗಳ ಮಾಂಸವನ್ನು ಪ್ರಸಾದವೆಂದು ಭಾವಿಸಿ, ತಿನ್ನುತ್ತಿದ್ದರು. ಇಂತಹ ಜನರ ಮೂಢನಂಬಿಕೆಯ ನಿವಾರಣೆಗಾಗಿ ಅವರು ಇಂತಹ ಜಾತ್ರೆಗಳು ನಡೆಯುವಲ್ಲಿಗೆ ವಿದ್ವಾಂಸರನ್ನೂ, ಜ್ಞಾನಿಗಳನ್ನೂ ಕಳುಹಿಸಿ, ಅವರಿಂದ ಜನತೆಗೆ ಸೂಕ್ತ ಮಾರ್ಗದರ್ಶನ ಕೊಡಿಸುತ್ತಿದ್ದರು :-

"ದೇವರೆಂದರೆ ಎಲ್ಲಾ ಜೀವಿಗಳಿಗೂ ತಂದೆ - ತಾಯಂದಿರಿದ್ದಂತೆ. ಆದ್ದರಿಂದ ಆ ಜೀವಿಗಳನ್ನು ಬಲಿ ಕೊಡುವುದು ಸರಿಯಲ್ಲ. ಎಲ್ಲಾದರೂ ತಾಯಿ ತನ್ನ ಮಕ್ಕಳ ಬಲಿ ಕೇಳುತ್ತಾಳಾ? ಈ ಪ್ರಾಣಿ ಬಲಿಯೆಂದರೆ ದೇವರು ಮೆಚ್ಚದ ಕಾರ್ಯ!" - ಎಂದು ಮೊದಲಾಗಿ ಜನರಿಗೆ ತಿಳಿಯ ಹೇಳಿ ಅನೇಕ ಕಡೆಗಳಲ್ಲಿನ ಪ್ರಾಣಿಬಲಿಯನ್ನು ನಿಲ್ಲಿಸಿದರು.

ಧರ್ಮಸ್ಥಳದಲ್ಲಿ ನಡೆಯುವ ಲಕ್ಷ ದೀಪೋತ್ಸವವೆಂದರೆ - ಆಗ ಸಹ ಇಡೀ ರಾಜ್ಯದಲ್ಲೇ ಒಂದು ದೊಡ್ಡ - ಉತ್ಸವ. ಬೇರೆ ಬೇರೆ ಊರಿನ ಜನರು ಆಗಮಿಸುತ್ತಿದ್ದರು. ಐದು ದಿನಗಳ ಕಾಲ ಬಹು ಸಂಭ್ರಮದಿಂದ ನಡೆಯುವ ಬಲು ದೊಡ್ಡ ಉತ್ಸವ. ಐದು ಕಡೆಗಳಲ್ಲಿ ಐದು ಕಟ್ಟೆಗಳಲ್ಲಿ ವಿಶೇಷ ಪೂಜೆ ; ರಾತ್ರೆ ಈ ತೆರನಾದ ಕಟ್ಟೆಪೂಜೆಯಾದ ಬಳಿಕ ವಿಶೇಷ ಸಂಭ್ರಮದಿಂದ ಜನರಿಗೆ ಪಂಚಕಜ್ಜಾಯ ವಿತರಣೆ ನಡೆಯುತ್ತಿತ್ತು.

ಆಗ ಒಂದು ಬಾರಿ, 1932ನೇ ಇಸವಿಯಲ್ಲಿ ಮಂಗಳೂರಿನ 'ಕಂಠೀರವ ' ಪತ್ರಿಕೆಯ ಸಂಪಾದಕರಾದ ಸಾಹಿತಿ ಶ್ರೀ ಹುರುಳಿ ಭೀಮರಾಯರೂ ಬಂದಿದ್ದರು. ಈ ಉತ್ಸವದಲ್ಲಿನ ಕಟ್ಟೆಪೂಜೆಯನ್ನು ವೀಕ್ಷಿಸಲೆಂದೇ ಆಗಮಿಸಿದ್ದರು. ಮೂಡಬಿದ್ರೆಯ ಘನವಿದ್ವಾಂಸರಾದ ಶ್ರೀ ಶಿಶುಪಾಲ ಶಾಸ್ತ್ರಿಗಳೂ ಇದ್ದರು. ಅವರಿಬ್ಬರೂ ಶ್ರೀ ಮಂಜಯ್ಯ ಹೆಗ್ಗಡೆಯವರ ಜತೆಗೇ ಇದ್ದರು.

ಪೂಜೆ ಮುಗಿದು, ಪಂಚಕಜ್ಜಾಯ ಹಂಚುವ ಮೊದಲು ಶ್ರೀ ಹೆಗ್ಗಡೆಯವರು ಎದ್ದು ನಿಂತು ಹೀಗೆಂದು ಹೇಳಿದರು - "ಭಕ್ತ ಮಹಾಶಯರೆ, ನೀವೆಲ್ಲರೂ ದೇವರ ಪೂಜೆಯ ಬಳಿಕ ಸಿಗುವ ಪ್ರಸಾದಕ್ಕಾಗಿ ಕಾದಿದ್ದೀರಿ, ಇದು ನಮಗೂ ಗೊತ್ತಿದೆ. ಬಹುದೂರದಿಂದ ಬಂದ ನಿಮಗೆ ಇಂದು ಬಾಯಿಗೆ ಸಿಹಿ ಪ್ರಸಾದ ನೀಡುವುದರೊಂದಿಗೆ ಅದಕ್ಕಿಂತಲೂ ಸವಿಯಾದ - ಅಂದರೆ ಮನಸ್ಸಿಗೆ ಸಂತೋಷ ನೀಡುವ ಒಂದು ವಿಚಾರ - ಧರ್ಮದ ಪಂಚಕಜ್ಜಾಯ ನೀಡಬೇಕೆಂದು ನಾನು ಸಂಕಲ್ಪ ಮಾಡಿದ್ದೇನೆ. ಇಂದು ಮಂಗಳೂರಿನ ಹಿರಿಯ ಸಾಹಿತಿಗಳಾದ ಶ್ರೀ ಹುರುಳಿ ಭೀಮರಾಯರು ಮತ್ತು ಮೂಡಬಿದ್ರೆಯ ಹಿರಿಯ ವಿದ್ವಾಂಸರಾದ ಶ್ರೀ ಶಿಶುಪಾಲ ಶಾಸ್ತ್ರಿಗಳು ಬಂದಿದ್ದಾರೆ. ಅವರಿಬ್ಬರೂ ಇದೀಗ ಧರ್ಮದ

ವಿಷಯದಲ್ಲಿ ನಾಲ್ಕಾರು ಮಾತುಗಳನ್ನು ಆಡಲಿದ್ದಾರೆ. ನಿಮ್ಮ ಮನಸ್ಸಿಗೆ ಬೇಕಾದ ಪಂಚಕಜ್ಜಾಯ ನೀಡಲಿದ್ದಾರೆ!"

ದೇವರು, ಧರ್ಮ, ಉತ್ಸವಗಳ ಅರ್ಥ, ಉದ್ದೇಶ, ಪ್ರಯೋಜನಗಳು, ಮಾನವಕರ್ತವ್ಯಗಳ ಬಗ್ಗೆ ಅವರಿಬ್ಬರೂ ಹತ್ತು - ಹತ್ತು ನಿಮಿಷಗಳ ಅವಧಿಯಲ್ಲಿ ಸುಂದರವಾಗಿ ಉಪನ್ಯಾಸ ಮಾಡಿದರು. ಇದನ್ನು ಕೇಳಿದ ಶ್ರೀ ಹೆಗ್ಗಡೆಯವರಿಗೂ, ಜನತೆಗೂ ಸಂತೋಷವಾಯಿತು.

ಇದರ ಬಳಿಕ ಧರ್ಮಸ್ಥಳದಲ್ಲಿ ಸರ್ವಧರ್ಮ ಸಮ್ಮೇಳನಗಳು ಪ್ರಾರಂಭವಾದುವು. 1933ನೇ ಇಸವಿಯಲ್ಲಿ ಈ ತೆರನಾದ ಮೊದಲ ಸಮ್ಮೇಳನ ನಡೆಸಿದರು.

ಈ ರೀತಿಯಾಗಿ ಜನತೆಗೆ ಧರ್ಮದ ಸತ್ವವನ್ನು ತಿಳಿಸಬೇಕೆಂದು ಅವರ ಮನಸ್ಸಿನಲ್ಲಿ ಮಹತ್ವಾಕಾಂಕ್ಷೆಯಿತ್ತು. ಜನರು ಧರ್ಮವನ್ನು ತಿಳಿದರೆ ಸಾಲದು; ಅದನ್ನು ಆಚರಿಸುವಂತಾಗಬೇಕೆಂಬ ಹಂಬಲ. ಅವರೂ ಕೂಡಾ ಸ್ವತಃ ಆಚರಿಸಿ, ಇತರರಿಗೆ ಉಪದೇಶ ನೀಡುವವರು.

ಅವರು ಸ್ವತಃ ಬೆಳಿಗ್ಗೆ ಆರು ಗಂಟೆಗೆದ್ದು, ನಿತ್ಯ ವಿಧಿಗಳನ್ನು ತೀರಿಸಿ, ದೇವರ ಪೂಜೆ, ಜಪ, ಶಾಸ್ತ್ರ ಪಠನ, ದೇವರ ಪ್ರಸಾದ ಸ್ವೀಕರಿಸಿದ ಬಳಿಕವೇ ತಮ್ಮ ಬೆಳಗ್ಗಿನ ಉಪಾಹಾರ; ಜನರೊಡನೆ ಮಾತುಕತೆ, ವಿದ್ವಾಂಸರು - ಸಾಹಿತಿಗಳೊಡನೆ ಧರ್ಮದ ಕುರಿತಾದ ಚರ್ಚೆ ನಡೆಸುತ್ತಿದ್ದರು. ಇಂತಹ ಚರ್ಚೆಗಳೆಂದರ ಅವರಿಗೆ ಬಲು ಇಷ್ಟ.

ಅವರು ಧರ್ಮಸ್ಥಳದ ಶ್ರೀ ಮಂಜುನಾಥ ಸ್ವಾಮಿ ದೇವಾಲಯ, ಶ್ರೀ ಚಂದ್ರನಾಥ ಸ್ವಾಮಿ ಬಸದಿ ಮಾತ್ರವಲ್ಲದೆ, ಇತರ ಕಡೆಗಳ ದೇವಸ್ಥಾನ, ಬಸದಿಗಳ ಜೀರ್ಣೋದ್ಧಾರಗಳಿಗೆ, ಅವುಗಳ ಬ್ರಹ್ಮಕಲಶ - ಪಂಚಕಲ್ಯಾಣ ಉತ್ಸವಗಳಿಗೂ ನೆರವು ನೀಡುತ್ತಿದ್ದರು. ಪೂಜಾ ವ್ಯವಸ್ಥೆಯಿಲ್ಲದ ಮಂದಿರಗಳಲ್ಲಿ ಸೂಕ್ತ ವ್ಯವಸ್ಥೆ ಮಾಡಿಸುತ್ತಿದ್ದರು. ಅಕ್ಕಿ - ಎಣ್ಣೆ - ಆಸ್ತಿಯ ವ್ಯವಸ್ಥೆ ಮಾಡಿಸುತ್ತಿದ್ದರು.

ಯಾವುದೇ ಒಂದು ಊರಲ್ಲಿ ಒಂದು ಪೂಜಾ ಸಮಾರಂಭ, ಮೂರ್ತಿ ಪ್ರತಿಷ್ಠೆ, ಸ್ತಂಭ ಪ್ರತಿಷ್ಠೆ, ಮಹಾಭಿಷೇಕ - ಮಸ್ತಕಾಭಿಷೇಕ ಕಾರ್ಯಕ್ರಮಗಳು ನಡೆದರೆ, ಅಲ್ಲಿ ಅವರಿಗೆ ಅಗ್ರಸ್ಥಾನವಿರುತ್ತಿತ್ತು ; ಅವರಿಂದ ನೆರವೂ ಸಿಗುತ್ತಿತ್ತು. ವೇಣೂರು, ಕಾರ್ಕಳ, ಶ್ರವಣಬೆಳಗೊಳಗಳಲ್ಲಿ ನಡೆದ ಬಾಹುಬಲಿ ಮಸ್ತಕಾಭಿಷೇಕಗಳಲ್ಲಿ ಅವರಿಗೆ ಗೌರವದ ಸ್ಥಾನವಿರುತ್ತಿತ್ತು.

ಉಜಿರೆಯ ಶ್ರೀ ಸಿದ್ಧವನ ಗುರುಕುಲದಲ್ಲಿ ಅವರು ವೃಷಭ ಜಯಂತಿಯೆಂದು ಹೊಸ ಆಚರಣೆಗೆ ನಾಂದಿ ಹಾಡಿದರು. ಸಾಮಾನ್ಯವಾಗಿ ಎಲ್ಲರೂ ಮಹಾವೀರ ಜಯಂತಿಯನ್ನು ಆಚರಿಸಿದರೆ, ಅವರು ಜೈನರ ಮೊದಲ ತೀರ್ಥಂಕರರಾದ ವೃಷಭನಾಥರನ್ನು ಜನರು ಮರೆಯದಿರಲೆಂದು ವೃಷಭ ಜಯಂತಿಯನ್ನು ಸಂಭ್ರಮದಿಂದ ಆಚರಿಸುವ ಏರ್ಪಾಡು ಮಾಡಿದರು.

ಹೀಗೆ ಧಾರ್ಮಿಕ ರಂಗದಲ್ಲಿ ಅವರ ದೃಷ್ಟಿಕೋನ ಮತ್ತು ಕಾರ್ಯವಿಧಾನಗಳು ವಿಶೇಷ ಮಹತ್ವದ ಸಂಗತಿಗಳಾಗಿದ್ದವು.

ಶಿಕ್ಷಣರಂಗದ ಸೇವೆ

ಮಾನವನಿಗೆ ಕೇವಲ ಹೊಟ್ಟೆಗೆ ಆಹಾರ ದೊರಕಿದರೆ ಸಾಲದು. ಅವರ ಮಸ್ತಿಷ್ಕಕ್ಕೆ - ಮೆದುಳಿಗೂ ಆಹಾರ ನೀಡಬೇಕೆಂದು ಶಿಕ್ಷಣ, ಓದು - ಬರೆಹಕ್ಕೂ ವಿಶೇಷ ಮಹತ್ವ ನೀಡಿದವರು ಅವರಾಗಿದ್ದರು.

ಧರ್ಮಸ್ಥಳದ ಚತುರ್ದಾನಗಳ ಪರಂಪರೆಯಲ್ಲಿ ಹಿಂದಿನಿಂದಲೂ ವಿದ್ಯಾಭ್ಯಾಸಕ್ಕೆ ವಿಶೇಷ ಮಹತ್ವವಿತ್ತು. ಮಂಜಯ್ಯ ಹೆಗ್ಗಡೆಯವರು ವಿಟ್ಲ, ಧರ್ಮಸ್ಥಳ, ಪುತ್ತೂರು, ಮಂಗಳೂರು ನಗರದಲ್ಲಿ ತನ್ನ ಶಿಕ್ಷಣಕ್ಕಾಗಿ ಅನುಭವಿಸಿದ ಕಷ್ಟ - ತೊಂದರೆಗಳನ್ನು ಎಂದೂ ಮರೆತಿರಲಿಲ್ಲ. ಅದಕ್ಕಾಗಿ ಬಡವರಿಗೆ, ದೀನ - ದಲಿತರಿಗೆ ಶಿಕ್ಷಣ ಸಿಗುವಂತೆ ಪ್ರೇರಣೆ ನೀಡುವ ಅನೇಕ ಕಾರ್ಯಗಳನ್ನು ಮಾಡಿದರು.

1940ನೇ ಇಸವಿಯಲ್ಲಿ ಅವರು ಉಜಿರೆಯಲ್ಲಿ ಶ್ರೀ ಸಿದ್ಧವನ ಗುರುಕುಲ - ಎಂಬ ಸಂಸ್ಥೆಯನ್ನು ಆರಂಭಿಸಿದರು 1947ರಲ್ಲಿ ಶ್ರೀ ಕರ್ನಾಟಕ ವಿದ್ಯಾಲಯ - ಎಂಬ ಹೆಸರಿನ ಹೈಸ್ಕೂಲನ್ನು ಊರವರ ಸಹಕಾರದೊಂದಿಗೆ-ಆರಂಭಿಸಿದರು. ಅದೇ ಸಂಸ್ಥೆಯು ಇಂದಿಗೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸೆಕೆಂಡರಿ ಶಾಲೆಯೆಂಬ ಹೆಸರಲ್ಲಿ ಖ್ಯಾತವಾಗಿದೆ. ಈ ಹೈಸ್ಕೂಲಿಗಾಗಿ ಹಾಸ್ಟೆಲು ಕಟ್ಟಡವನ್ನು ಕಟ್ಟಿಸಿ ಕೊಟ್ಟರು. ಅದಕ್ಕೆ ಬೇಕಾದ ಜಮೀನನ್ನೂ ಅವರೇ ಒದಗಿಸಿಕೊಟ್ಟರು.

1953ರಲ್ಲಿ ಧರ್ಮಸ್ಥಳದಲ್ಲಿದ್ದ ಪ್ರಾಥಮಿಕ ಶಾಲೆಯನ್ನು ಹಿರಿಯ ಪ್ರಾಥಮಿಕ ಶಾಲೆಯನ್ನಾಗಿ ಮಾಡಿದರು. ಅಲ್ಲಿ ಕಲಿಯುವ ಮಕ್ಕಳಿಗೆ ಪುಸ್ತಕ, ಬಳಪ, ಸಮವಸ್ತ್ರ - ಮೊದಲಾದುವನ್ನು ಉಚಿತವಾಗಿ ಒದಗಿಸುವ ವ್ಯವಸ್ಥೆಯೊಂದಿಗೆ, ಉಚಿತ ಭೋಜನದ ಏರ್ಪಾಟನ್ನೂ ಮಾಡಿದರು.

ಅವರಿಗೆ ಗಾಂಧಿ - ಸಿದ್ಧಾಂತಗಳಲ್ಲಿ ದೃಢವಾದ ವಿಶ್ವಾಸವಿತ್ತು. ಗಾಂಧಿಯಂತೆ ರಾಜಕೀಯ ಪಕ್ಷದಲ್ಲಿ, ಕಾಂಗ್ರೆಸ್ ಪಕ್ಷದಲ್ಲಿ ಇರದಿದ್ದರೂ, ಗಾಂಧೀಜಿಯ ರಚನಾತ್ಮಕ ಕಾರ್ಯಕ್ರಮಗಳಲ್ಲಿ

ಆಳವಾದ ವಿಶ್ವಾಸವುಳ್ಳವರಾಗಿದ್ದರು. ಅವರ ಬಟ್ಟೆ, ವೇಷ - ಭೂಷಣಗಳು ಗಾಂಧಿಯಂತೆಯೇ ಸರಳ ಹಾಗೂ ಶುಭ್ರ, ಹಾಗೂ ಸದಾ ಬಿಳಿ ವಸ್ತ್ರಧಾರಿ. ಗಾಂಧಿಯವರ ಶೈಕ್ಷಣಿಕ ಆದರ್ಶಗಳ ಪ್ರಸಾರಕ್ಕೆಂದೇ ಉಜಿರೆಯ ಶ್ರೀ ಸಿದ್ಧವನ ಗುರುಕುಲದ ಆವರಣದಲ್ಲಿ ಒಂದು ಬುನಾದಿ ತರಬೇತಿ ಶಾಲೆಯನ್ನು ಆರಂಭಿಸಿದರು. ಇಲ್ಲಿ ತರಬೇತಿ ಪಡೆದವರಿಗೆ ಪ್ರಾಥಮಿಕ ಶಾಲೆಗಳಲ್ಲಿ ಅಧ್ಯಾಪಕರ ಉದ್ಯೋಗ ಸಿಗುತ್ತಿತ್ತು. ಇಲ್ಲಿ ಶಿಕ್ಷಕ ವೃತ್ತಿ ಮತ್ತು ಗಾಂಧಿ ತತ್ವಗಳೆರಡರ ತರಬೇತಿಯೂ ದೊರೆಯುತ್ತಿತ್ತು. ಖಾದಿ ವಸ್ತ್ರ ತಯಾರಿಸುವುದು, ಖಾದಿ ಬಟ್ಟೆಗೆ ಬೇಕಾದ ನೂಲನ್ನು ತಕಲಿ - ಅಥವಾ - ಚರಕದಲ್ಲಿ ತಯಾರಿಸುವುದು, ಕೃಷಿ ಮಾಡುವುದು - ಇತ್ಯಾದಿಯಾಗಿ ವಿಶೇಷ ಮಾದರಿಯ ಸ್ವಾವಲಂಬನೆಯ ತರಬೇತಿ ನೀಡುತ್ತಿದ್ದರು.

ಇಂತಹ ಸಂಸ್ಥೆಯನ್ನು ಒಂದು ವರ್ಷ ನಡೆಸಿದ ಬಳಿಕ, ಅದನ್ನು ಸರಕಾರಕ್ಕೇ ಬಿಟ್ಟುಕೊಟ್ಟರು. ಸರಕಾರವಾದರೋ ಈ ಸಂಸ್ಥೆಯನ್ನು ಕೆಲವು ವರ್ಷಗಳ ತನಕ ನಡೆಸಿದ ಬಳಿಕ ಮುಚ್ಚಿಬಿಟ್ಟಿತು.

ಶ್ರೀ ಮಂಜಯ್ಯ ಹೆಗ್ಗಡೆಯವರಿಗೆ ಸಂಸ್ಕೃತವೆಂದರೆ ವಿಶೇಷ ಆದರ. ಅವರು ಎಂ.ಎಲ್.ಸಿ.ಯಾಗಿ ಮದ್ರಾಸು (ಈಗಿನ ತಮಿಳುನಾಡು) ರಾಜ್ಯದಲ್ಲಿ ವಿಶೇಷ ಗೌರವ ಪಡೆದಿದ್ದರು. ಆಗ ಮದ್ರಾಸು ರಾಜ್ಯದಲ್ಲಿ ಅವಿನಾಶ ಲಿಂಗಂ ಚೆಟ್ಟಿಯಾರ್ - ಎಂಬವರು ಶಿಕ್ಷಣ ಮಂತ್ರಿಗಳಾಗಿದ್ದರು. ಅವರೊಡನೆ ಚರ್ಚಿಸಿ, ಸಂಸ್ಕೃತಕ್ಕೆ ವಿಶೇಷ ಪ್ರಾಧಾನ್ಯ ನೀಡುವ ಹೈಸ್ಕೂಲು ಶಿಕ್ಷಣದ ಪಾಠಪಟ್ಟಿಯೊಂದನ್ನು ರಚಿಸುವಂತೆ ಮಾಡಿದರು. ಆ ಪಾಠಪಟ್ಟಿಗನುಸಾರವಾಗಿ ಶಿಕ್ಷಣ ನೀಡುವ ಓರಿಯಂಟಲ್ ಹೈಸ್ಕೂಲೊಂದನ್ನು ಉಜಿರೆಯಲ್ಲಿ ಆರಂಭಿಸಿದರು. ಇದರಲ್ಲಿ ಶಿಕ್ಷಣ ಮುಗಿಸಿದವರಿಗೆ ಓ.ಎಸ್.ಎಲ್.ಸಿ. ಎಂಬ ಸರ್ಟಿಫಿಕೇಟ್ ಸಿಗುತ್ತಿತ್ತು.

ಆ ವಿಶೇಷ ಪ್ರಕಾರದ ಓರಿಯೆಂಟಲ್ ಹೈಸ್ಕೂಲನ್ನು ಉಜಿರೆಯ ಶ್ರೀ ಸಿದ್ಧವನದಲ್ಲಿ 1953ರಲ್ಲಿ ಪ್ರಾರಂಭಿಸಿದರು. ಆ ಹೈಸ್ಕೂಲಿಗೆ ಮುಖ್ಯೋಪಾಧ್ಯಾಯರಾಗಿ ಶ್ರೀ ಆರ್.ಡಿ. ಶಾಸ್ತ್ರಿಯವರು ನೇಮಕ ಹೊಂದಿದ್ದರು. 1950ರಲ್ಲಿ ಈ ಹೈಸ್ಕೂಲು ಮುಚ್ಚಿಹೋಯಿತು.

ಅವರು ಪ್ರಾರಂಭಿಸಿದ ಕೆ.ವಿ. ಹೈಸ್ಕೂಲಿಗೆ ಪ್ರಾರಂಭದ ಮುಖ್ಯೋಪಾಧ್ಯಾಯರಾಗಿ ಶ್ರೀ ರೆಂಜಾಳ ಹರಿ ಶೆಣೈ - ಎಂಬವರು ಕೊಡಗಿನಲ್ಲಿ ಸರಕಾರಿ ಸೇವೆಯಿಂದ ನಿವೃತ್ತರಾದವರು - ಬಂದಿದ್ದರು. ಅವರ ಬಳಿಕ ಶ್ರೀ ರಾಮನಾರಾಯಣ ಭಿಡೆ - ಅವರು ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿದರು. ಶ್ರೀ ಭಿಡೆಯವರು ಮಂಜಯ್ಯ ಹೆಗ್ಗಡೆಯವರ ವ್ಯಕ್ತಿತ್ವದ ಕುರಿತು ಹೀಗೆನ್ನುತ್ತಾರೆ :-

"ಅವರು ಗಂಭೀರ ಚಿಂತನಶೀಲ ಅಂತರ್ಮುಖಿ ವ್ಯಕ್ತಿತ್ವದವರು. ಸದಾಕಾಲಕ್ಕೂ ಅವರಲ್ಲಿ ಜ್ಞಾನದ ಹಂಬಲವಿರುತ್ತಿತ್ತು. ಪ್ರತಿಯೊಂದು ವಿಷಯವನ್ನೂ ತಿಳಿಯಬೇಕೆಂಬ ಆಸೆ. ದುರ್ಬಲ ಶರೀರ, ಶಾಂತವಾದ ಮುಖಚರ್ಯೆ. ಮೃದುನಗು, ಸಾತ್ವಿಕ ವ್ಯಕ್ತಿತ್ವದವರು."

ಅವರು ಶಿಕ್ಷಣ ರಂಗಕ್ಕೆ ಸಲ್ಲಿಸಿದ ಅಮೂಲ್ಯಸೇವೆಯನ್ನು ಇಡೀ ಬೆಳ್ತಂಗಡಿ ತಾಲೂಕು ಎಂದಿಗೂ ಮರೆಯಲಾರದು.

ಶ್ರೀ ಸಿದ್ಧವನ ಗುರುಕುಲ

ಧರ್ಮಸ್ಥಳದ ದಾನಗಳಲ್ಲಿ ವಿದ್ಯಾದಾನಕ್ಕೆ ವಿಶೇಷ ಮಹತ್ವ. ಅಂತೆಯೇ ಮಂಜಯ್ಯ ಹೆಗ್ಗಡೆಯವರಿಗೆ ವಿದ್ಯೆಯೆಂದರೆ, ವಿದ್ಯಾರ್ಥಿಗಳೆಂದರೆ ಹಾಗೂ ವಿದ್ಯೆ ನೀಡುವ ಅಧ್ಯಾಪಕರೆಂದರೆ ವಿಶೇಷ ಪ್ರೀತಿ. ಜನರಿಗೆ ವಿದ್ಯೆಯನ್ನು ನೀಡದೆ ಜನರು ವಿದ್ಯಾವಂತರಾಗದೆ, ಈ ಲೋಕದ ಉದ್ಧಾರವಾಗಲಾರದೆಂದು ಅವರು ತಿಳಿದಿದ್ದರು. ಅದಕ್ಕಾಗಿಯೇ ಅವರು ಎಲ್ಲೆಲ್ಲೂ ಶಿಕ್ಷಣಕ್ಕೇ ಉಚ್ಚ ಸ್ಥಾನ ನೀಡಿದರು. ಹೋದಲ್ಲಿ, ಬಂದಲ್ಲಿ, ಕುಳಿತಲ್ಲಿ, ಎದ್ದಲ್ಲಿ - ಎಲ್ಲೇ ಆಗಲಿ ಸಿಕ್ಕಿದವರೊಡನೆ, ಬಂದವರೊಡನೆ, ಹೋದವರೊಡನೆ, ಎಲ್ಲರೊಡನೆಯೂ, "ನಿಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಿ ; ಓದು ಬರೆಹ ಕಲಿಸಿ ಬುದ್ಧಿವಂತರನ್ನಾಗಿ ಮಾಡಿ" - ಎಂದು ಹೇಳುತ್ತಿದ್ದರು.

ಅವರು ಸ್ವತಃ ಪ್ರಾಥಮಿಕ, ಹೈಸ್ಕೂಲು, ಕಾಲೇಜು - ಶಿಕ್ಷಣದ ಅನುಭವ ಪಡೆದಿದ್ದರು. 'ನನ್ನಂಥವನ ಶಿಕ್ಷಣಕ್ಕೇ ಇಷ್ಟು ಕಷ್ಟವಾಗುವಾಗ, ನಮ್ಮ ದೇಶದ ಬಡವರ ಗತಿಯೇನು?' - ಎಂಬ ಚಿಂತೆಯೇ ಅವರ ಮನಸ್ಸನ್ನು ಕಾಡುತ್ತಿತ್ತು. ಆಗ ಅವರು ಹೀಗೆ ಯೋಚಿಸಿದರು - 'ನಮ್ಮ ಸರಕಾರಿ ವಿದ್ಯಾಸಂಸ್ಥೆಗಳೆಲ್ಲವೂ ಬ್ರಿಟಿಷರ ಮಾದರಿಯಲ್ಲಿ ನಡೆಯುವವು. ಅವರು ನಮಗೆ ನೀಡಿದ ಪಾಠ್ಯ ಕ್ರಮವೆಂದರೆ, ಮೆಕಾಲೆ ಸಾಹೇಬರಿಂದ ಆರಂಭವಾದುದು. ಅದರ ಉದ್ದೇಶವೊಂದೇ - ಬ್ರಿಟಿಷ್ ಸರಕಾರಕ್ಕೆ ಬೇಕಾದ ಗುಲಾಮರನ್ನು ತಯಾರಿಸುವುದು!'

ನಮ್ಮ ದೇಶದ ಸಂಸ್ಕೃತಿ - ಧರ್ಮ, ಆಚಾರ - ವಿಚಾರ, ರೀತಿ - ನೀತಿ ಇವೆಲ್ಲವನ್ನೂ ಉಳಿಸಿ ಬೆಳೆಸಬೇಕಾದರೆ ಬೇರೆಯೇ ಮಾದರಿ ಶಿಕ್ಷಣದ ಅಗತ್ಯವಿದೆ ಎಂದು ಅವರು ಅರ್ಥ ಮಾಡಿಕೊಂಡರು.

ಅವರು ಗಾಂಧೀಜಿಯ ವಾರ್ಧಾ - ಸಾಬರ್ಮತಿ ಆಶ್ರಮದ ವಿದ್ಯಾಪದ್ಧತಿ ಹಾಗೂ ರವೀಂದ್ರನಾಥ ಠಾಗೋರರು ಆರಂಭಿಸಿದ ಶಾಂತಿನಿಕೇತನದ ಮಾದರಿಯನ್ನೂ ಅರಿತಿದ್ದರು.

ಹಾಗೆಂದೇ ಅವರು ಉಜಿರೆಯಲ್ಲಿ ಶ್ರೀ ಸಿದ್ಧವನ ಗುರುಕುಲ ಎಂಬ ಹೆಸರಿನ ಶಿಕ್ಷಣ ಸಂಸ್ಥೆಯನ್ನು ಆರಂಭಿಸಿದರು. 1940ನೇ ಜೂನ್ ತಿಂಗಳ 8ನೇ ತಾರೀಕಿನಂದು ನಮ್ಮ ಪ್ರಾಚೀನ ಮಾದರಿಯ ಈ ಸಂಸ್ಥೆ ಆರಂಭವಾಯ್ತು.

ಹೊಂಬುಜ ಮಠದ ಸ್ವಸ್ತಿ ಶ್ರೀ ಅರ್ಹದ್ದಾಸ ಪಾರ್ಶ್ವ ಸಾಗರ ಸ್ವಾಮೀಜಿಯವರ ದಿವ್ಯ ಹಸ್ತಗಳಿಂದ ಇದರ ಉದ್ಘಾಟನೆ ನಡೆಯಿತು.

ಈ ನೂತನ ವಿದ್ಯಾಸಂಸ್ಥೆಯ ಉದ್ದೇಶಗಳ ಕುರಿತು ಅವರ ಅಭಿಪ್ರಾಯ ಹೀಗಿತ್ತು :-

"ನಮ್ಮ ದೇಶದಲ್ಲಿನ ಸರಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಸಿಗುವ ವಿದ್ಯಾಭ್ಯಾಸದಿಂದ ನಮ್ಮ ಮಕ್ಕಳ ಪ್ರಗತಿ ಸಾಧ್ಯವಾಗದು. ಏಕೆಂದರೆ ಅಲ್ಲಿ ನಮ್ಮ ಸಂಸ್ಕಾರ - ಪದ್ಧತಿಗಳನ್ನು ಉಳಿಸಿ - ಬೆಳೆಸುವ ಯಾವುದೇ ಪ್ರಯತ್ನವಿರುವುದಿಲ್ಲ. ಇತರ ಸಂಸ್ಕೃತ ಪಾಠಶಾಲೆಗಳಿಗೆ ಸೇರಿಸಿದರೆ, ಅಲ್ಲಿ ಕೇವಲ ಸಂಸ್ಕೃತವನ್ನು ಮಾತ್ರ ಕಲಿಸುತ್ತಾರೆ ; ಶಾಸ್ತ್ರಿಗಳನ್ನಾಗಿ ಮಾಡುತ್ತಾರೆ ಅಂಥವರು ಲೌಕಿಕ ಜ್ಞಾನದ ಕೊರತೆಯಿಂದಾಗಿ ಹಿಂದೆ ಬೀಳುತ್ತಾರೆ. ಆಗ ಅವರಿಗೆ ಜೀವನ ನಡೆಸುವುದೇ ಕಠಿಣವಾಗಿ ಬಿಡುತ್ತದೆ.

ನಮ್ಮ ನೂತನ ಸಂಸ್ಥೆಯಲ್ಲಿ ಮಕ್ಕಳಿಗೆ ಅಗತ್ಯವಾದ ನಮ್ಮ ದೇಶದ ನಾಲ್ಕು ಭಾಷೆಗಳಾದ - ಸಂಸ್ಕೃತ, ಕನ್ನಡ, ಹಿಂದಿ, ಇಂಗ್ಲಿಷ್‌ಗಳನ್ನು ಕಲಿಸಬೇಕು. ನಮ್ಮ ಸಂಸ್ಕೃತಿಯನ್ನು ರಕ್ಷಿಸಬೇಕು. ಕೃಷಿ, ಕೈಗಾರಿಕೆ, ಕಲೆ, ಕೈಕಸುಬುಗಳನ್ನು ಕಲಿಸಬೇಕು. ಈ ಸಂಸ್ಥೆಗೆ ಸರಕಾರದ ಮಂಜೂರಾತಿ ಸಿಗದಿದ್ದರೂ ಪರವಾಗಿಲ್ಲ ; ಇಲ್ಲಿ ಕಲಿತವರು ಉಚ್ಚ ಸಂಸ್ಕೃತಿಯವರಾಗಿ, ಸ್ವತಂತ್ರ ಉದ್ಯೋಗವನ್ನು ಅವಲಂಬಿಸಿ ದೇಶಸೇವೆ - ಈಶ ಸೇವೆ ಮಾಡಲು ಸಮರ್ಥರಾಗಬೇಕು - ಎಂದು ನನ್ನ ಆಶೆ. ದೇವರ ದಯೆಯಿಂದ ಇದು ಪೂರೈಸುವುದೆಂದು ಭಾವಿಸುವೆ."

ಇಂದಿಗೆ ಅವರ ಆಶೆ ಪೂರೈಸಿದೆಯೆನ್ನಬಹುದಾಗಿದೆ. ನಮ್ಮ ದೇಶವೆಂದರೆ ಹಿಂದಿನ ಕಾಲದಿಂದಲೂ ವಿವಿಧ ಮತ - ಧರ್ಮಗಳಿಗೆ ಆಶ್ರಯ ನೀಡಿದ ರಾಷ್ಟ್ರ. ಇಲ್ಲಿ ಅಜ್ಞಾನದಿಂದಾಗಿ ಪರಸ್ಪರ ಜಗಳ ಸಂಘರ್ಷಗಳು ನಡೆದುವು. ಇದನ್ನು ನಿವಾರಿಸಬೇಕೆಂದಾದರೆ ಜನರು ವಿವಿಧ ಮತಧರ್ಮಗಳ ವಿಚಾರವನ್ನು ಅರಿಯಬೇಕು. ಬ್ರಾಹ್ಮಣರು, ಜೈನರು, ಹಿಂದುಗಳು, ಮುಸ್ಲಿಮರು, ಕ್ರೈಸ್ತರು ಅವರವರ ಮತಾಚಾರದಂತೆ ದೇವರ ಭಜನೆ ಮಾಡಲಿ, ಪೂಜಿಸಲಿ. ಆದರೆ ಎಲ್ಲ ಜಾತಿಯವರೂ ಒಂದಾಗಿ ಕುಳಿತು, ಉಣ್ಣಬೇಕು. ಅಲ್ಲಿ ಬಡವ - ಶ್ರೀಮಂತರೆಂಬ ಭೇದವಿಲ್ಲ. ಎಲ್ಲರಿಗೂ ಊಟ - ತಿಂಡಿ, ಪುಸ್ತಕ - ಬಳಪ ಇತ್ಯಾದಿಗಳೆಲ್ಲವನ್ನೂ ಉಚಿತವಾಗಿ ನೀಡುವ ವ್ಯವಸ್ಥೆಯಿತ್ತು.

ಇಂದು ಉಜಿರೆಯಲ್ಲಿ ಸಿದ್ಧವನವಿರುವಲ್ಲಿ ಹಿಂದಿನ ಕಾಲದಲ್ಲಿ ದೊಡ್ಡ ಭೂತಸ್ಥಾನವಿದ್ದಿತಂತೆ. ಅಲ್ಲಿಗೆ ಬಂದ ಮಂಜಯ್ಯ ಹೆಗ್ಗಡೆಯವರು ಭೂತಗಳ ಕಲ್ಲಿನೆದುರು ನಿಂತು ಹೀಗೆ ನಿವೇದಿಸಿಕೊಂಡರು :- "ಹೇ ಸತ್ಯದೇವತೆಗಳೇ, ನೀವು ಸಾವಿರ - ಸಾವಿರ ವರ್ಷಗಳಿಂದ ಇದ್ದ ಜಾಗವಿದು. ಈ ತಾಣವನ್ನು ನೀವು ಚೆನ್ನಾಗಿ ಮೆರೆಸಿದ್ದೀರಿ. ಇಂದು ನಾನು ದೇವರಲ್ಲೂ, ಧರ್ಮಸ್ಥಳದ ಧರ್ಮದೇವತೆಗಳಲ್ಲೂ ಅನುಮತಿಯನ್ನು ಯಾಚಿಸಿ, ಇಲ್ಲೊಂದು ಗುರುಕುಲ - ವಿದ್ಯಾಸಂಸ್ಥೆಯನ್ನು ನಿರ್ಮಿಸಲು ಹೊರಟಿದ್ದೇನೆ. ಇಲ್ಲಿರುವ ಅಧ್ಯಾಪಕರಿಗೂ, ವಿದ್ಯಾರ್ಥಿಗಳಿಗೂ ರಕ್ಷಣೆ ನೀಡಿ ನೀವು ಸಹಕರಿಸಬೇಕು. ಈ ಜಾಗವನ್ನು ನೀವು ನನಗೆ ಬಿಟ್ಟು ಕೊಡಬೇಕು"

- ಎಂದು ಹೇಳಿದ ಬಳಿಕ, ಅಲ್ಲಿದ್ದ ಎಲ್ಲ ಭೂತದ ಕಲ್ಲುಗಳ ಉಚ್ಚಾಟನೆಯನ್ನು ಮಾಡಿಸಿದರು.

ಅವರ ಉನ್ನತ ಸಂಕಲ್ಪಕ್ಕೆ ದೈವಸಹಾಯವೂ ಒದಗಿಬಂತು. ಆಗ ಅಲ್ಲೆಲ್ಲಾ ಮಲೇರಿಯಾ ವ್ಯಾಧಿಯ ಹಾವಳಿ ಹೆಚ್ಚು. ಮಹಾಯುದ್ಧದ ಕಾಲ. ಆದ್ದರಿಂದ ಆಹಾರದ ಅಭಾವವೂ ಕಾಡುತ್ತಿತ್ತು. ಎಂತಹ ತಾಪತ್ರಯಗಳೇ ಬಂದರೂ, ಮಕ್ಕಳ ಹೊಟ್ಟೆಗೊಂದಿಷ್ಟೂ ತೊಂದರೆಯಾಗದಂತೆ ನೋಡಿಕೊಂಡರು. ಅವರು ವಾರದಲ್ಲಿ ಎರಡು ಬಾರಿ ಸಿದ್ಧವನಕ್ಕೆ ಹೋಗಿ, ಮಕ್ಕಳ ಸುಖ - ದುಃಖ, ಅಧ್ಯಾಪಕರ ತೊಂದರೆ - ತಾಪತ್ರಯಗಳನ್ನು ವಿಚಾರಿಸುತ್ತಿದ್ದರು. ಅಲ್ಲಿಗೆ ಬರುವಾಗ ಯಾವಾಗಲೂ ಅವರ ಕಾರಿನ ಡಿಕ್ಕಿಯಲ್ಲಿ ಪಂಚಕಜ್ಜಾಯ, ಲಾಡು, ಗೋಡಂಬಿ, ಕಲ್ಲು ಸಕ್ಕರೆ ಮೊದಲಾದುವುಗಳನ್ನು ಮಕ್ಕಳಿಗೆ ವಿತರಿಸಲೆಂದೇ ತರುತ್ತಿದ್ದರು.

ಧರ್ಮಸ್ಥಳದಲ್ಲಿ ಯಾವುದೇ ಒಂದು ವಿಶೇಷ ಪೂಜೆ, ಉತ್ಸವ, ಮಹಾಲಯ, ಹೊಸ ಅಕ್ಕಿ ಊಟ, ಉಪಾಕರ್ಮ - ಇತ್ಯಾದಿ ಏನೇ ಸಂಭ್ರಮ ಕಾರ್ಯಗಳಿದ್ದಾಗ ಸಿದ್ಧವನದ ನಿವಾಸಿಗಳೆಂದರೆ ಮನೆಯವರಂತೆಯೇ, ಅವರು ಬಂದೇ ತೀರಬೇಕು.

ಸಿದ್ಧವನದಲ್ಲಿ ಪ್ರವೇಶಗಳನ್ನು ಬಯಸುವ ಮಕ್ಕಳಿಗೆ ಅವರೇ ಸ್ವತಃ ಹಾಜರಿದ್ದು ಪ್ರವೇಶ ಪರೀಕ್ಷೆ ನಡೆಸುತ್ತಿದ್ದರು ; ಅವರೇ ಪ್ರಶ್ನೆ ಕೇಳುತ್ತಿದ್ದರು. ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಪ್ರಗತಿಯ ಬಗ್ಗೆ ಆಗಾಗ್ಗೆ ಬಂದು ವಿಚಾರಿಸುತ್ತಿದ್ದರು.

ಆಗ ದ.ಕ. ಜಿಲ್ಲೆ ಮದ್ರಾಸು (ತಮಿಳುನಾಡು) ರಾಜ್ಯಕ್ಕೆ ಸೇರಿತ್ತು. ಅಲ್ಲಿನ ರಾಜ್ಯಪಾಲರು, ಮಂತ್ರಿಗಳು, ಉನ್ನತಾಧಿಕಾರಿಗಳು ಧರ್ಮಸ್ಥಳಕ್ಕೆಂದು ಬಂದರೆ, ಅವರಿಗೆ ಸಿದ್ಧವನವನ್ನು ತೋರಿಸಿಯೇ ಕರೆದುಕೊಂಡು ಹೋಗುತ್ತಿದ್ದರು.

ಆಗ ಮದ್ರಾಸು ರಾಜ್ಯದ ಗವರ್ನರರಾಗಿದ್ದ ಆರ್ಚಿ ಬಾಲ್ಡ್‌ನಾಯ್, ಶ್ರೀಪ್ರಕಾಶ್, ಮಂತ್ರಿಗಳಾದ ಅವಿನಾಶಲಿಂಗಂ ಚೆಟ್ಟಿಯಾರ್, ಗೋಪಾಲ ರೆಡ್ಡಿ - ಮೊದಲಾದವರು ಬಂದಾಗ, ಸಿದ್ಧವನದ ವಿದ್ಯಾರ್ಥಿಗಳು ಪ್ರವೇಶ ದ್ವಾರದ ರಸ್ತೆಯ ಎರಡೂ ಬದಿಗಳಲ್ಲಿ ನಿಂತುಕೊಂಡು ಸಂಸ್ಕೃತ ಶ್ಲೋಕಗಳನ್ನು ಹಾಡುವಾಗ ಅವರಿಗೆ ಆಶ್ಚರ್ಯವಾಗುತ್ತಿತ್ತು. 'ಈ 20ನೇ ಶತಮಾನದಲ್ಲಿ ಇಷ್ಟು ಚೆನ್ನಾಗಿ ಸಂಸ್ಕೃತ - ಉಚ್ಚಾರಣೆ ಮಾಡಬಲ್ಲ ಈ ವಾತಾವರಣ ಮತ್ತು ಆಶ್ರಮ ಸಾಧ್ಯವೇ?' ಎನ್ನುತ್ತಿದ್ದರು.

ಶ್ರೀ ಕೃಷ್ಣ ಉಡುಪರು ಈ ಸಿದ್ಧವನದ ಮೊದಲ ಮುಖ್ಯೋಪಾಧ್ಯಾಯರು. ಅನಂತರ ಶ್ರೀ ನಾರಾಯಣಾಚಾರ್ಯರು ಮುಖ್ಯೋಪಾಧ್ಯಾಯರಾದರು.

ಇಲ್ಲಿ ಪ್ರಾಥಮಿಕ ಶಾಲೆಯ ಐದನೇ ತರಗತಿ ಪಾಸಾದ ಗಂಡು ಮಕ್ಕಳನ್ನು ಮಾತ್ರ ಸೇರಿಸಿಕೊಳ್ಳುತ್ತಿದ್ದರು. ಅಕಸ್ಮಾತ್ತಾಗಿ ಯಾರಾದರೂ ಅನುತ್ತೀರ್ಣರಾದರೆ, ಅವರು ನೇರವಾಗಿ ಹಿಂದಕ್ಕೆ ಮನೆಗೇ ಹೋಗಬೇಕಿತ್ತು. ಇಲ್ಲಿ ಸಂಸ್ಕೃತದಲ್ಲಿ ನಾಲ್ಕು ವರ್ಷಗಳ ಅಧ್ಯಯನ ಮುಗಿಸಿದವರು ಕಾರ್ಕಳ, ಕಾಸರಗೋಡು, ಉಡುಪಿಯಲ್ಲಿದ್ದ ಸಂಸ್ಕೃತ ಕಾಲೇಜುಗಳಲ್ಲಿ ಉಚ್ಚ ಶಿಕ್ಷಣಕ್ಕೆ ಸೇರುತ್ತಿದ್ದರು. ಇಲ್ಲವೇ ಉಜಿರೆಯಲ್ಲಿದ್ದ ಕನ್ನಡ ಮಾಧ್ಯಮದ ಹೈಸ್ಕೂಲಲ್ಲಿ ಮೂರನೇ ಫಾರ್ಮಿಗೆ (ಈಗಿನ ಎಂಟನೇ ತರಗತಿ) ಸೇರುತ್ತಿದ್ದರು. ಮತ್ತೆ ಉಜಿರೆಯ ಹೈಸ್ಕೂಲಲ್ಲಿ ನಾಲ್ಕು ವರ್ಷ ಎಸ್.ಎಸ್.ಎಲ್.ಸಿ. ವರೆಗೆ ಕಲಿಯುವಾಗಲೂ ಅವರಿಗೆ ಸಿದ್ಧವನದ ಆಶ್ರಯ ಸಿಗುತ್ತಿತ್ತು.

ಈ ಸಿದ್ಧವನದಲ್ಲಿ ಕೇವಲ ಪಾಠ - ಪ್ರವಚನಗಳು ಮಾತ್ರವಲ್ಲ. ಸಂಗೀತ, ನೃತ್ಯ, ಹರಿಕಥೆ, ಚಿತ್ರಕಲೆ, ನಾಟಕ ಮೊದಲಾದವುಗಳನ್ನು ಕಲಿಸುತ್ತಿದ್ದರು. ಹಿಂದೂ ಧರ್ಮ - ಜೈನ ಧರ್ಮಗಳ ತತ್ವ - ಸಿದ್ಧಾಂತಗಳನ್ನೂ ಕಲಿಸುತ್ತಿದ್ದರು. ಬೆಳಿಗ್ಗೆ ಐದು ಗಂಟೆಗೆ ಎದ್ದರೆ, ರಾತ್ರೆ ಹತ್ತು - ಗಂಟೆಗೆ ಮಲಗುವ ವರೆಗೂ ಮಕ್ಕಳು ಏನು ಮಾಡಬೇಕು? ಏನು ಮಾಡಬಾರದು? ಎಂಬ ಕುರಿತು ವೇಳಾಪಟ್ಟಿಯಿತ್ತು.

ಆಗ ಬಹು ಸಂಭ್ರಮದಿಂದ ಸಿದ್ಧವನದ ವಾರ್ಷಿಕೋತ್ಸವ ನಡೆಯುತ್ತಿತ್ತು. ಅದಕ್ಕಾಗಿ ರಂಗನಾಥ ಭಟ್, ಕೃಷ್ಣ ರಾವ್, ನಾರಾಯಣಾಚಾರ್, ಜಿನರಾಜ ಶಾಸ್ತ್ರಿ - ಇವರೆಲ್ಲ ಸೇರಿ ಕನ್ನಡ, ಇಂಗ್ಲಿಷ್, ಸಂಸ್ಕೃತ, ಹಿಂದಿ ನಾಟಕಗಳನ್ನೂ ಮಕ್ಕಳಿಂದ ಆಡಿಸುತ್ತಿದ್ದರು.

ಈ ಸಿದ್ಧವನದ ಖರ್ಚು - ವೆಚ್ಚಗಳಿಗಾಗಿಯೇ ಅವರು ಒಂದು ಪ್ರತ್ಯೇಕ ಟ್ರಸ್ಟಿನ ವ್ಯವಸ್ಥೆ ಕೂಡಾ ಮಾಡಿದ್ದರು.

ಅವರ ಸಾರ್ವಜನಿಕ ಜೀವನ

ಧರ್ಮಸ್ಥಳದ ಧರ್ಮಾಧಿಕಾರಿಯಾಗಿದ್ದಂತೆಯೇ ಮಂಜಯ್ಯ ಹೆಗ್ಗಡೆಯವರು ಇಡೀ ಕರ್ನಾಟಕ ರಾಜ್ಯದಲ್ಲೂ, ಮದ್ರಾಸು ರಾಜ್ಯದಲ್ಲೂ ಕೀರ್ತಿ ಪಡೆದಿದ್ದರು. ಎಲ್ಲಿ ಹೋದರೂ ಅವರಿಗೆ ವಿಶೇಷ ಗೌರವವಿತ್ತು.

1927ನೇ ಇಸವಿಯಲ್ಲಿ ಅವರು ಎಂ.ಎಲ್.ಸಿ.ಯಾದರು. ಅವರು ಮದರಾಸು ರಾಜ್ಯದ ಲೆಜಿಸ್ಲೇಟಿವ್ ಕೌನ್ಸಿಲ್ ಅಂದರೆ ವಿಧಾನಪರಿಷತ್ತಿನ ಸದಸ್ಯರಾಗಿ ಒಟ್ಟಿಗೆ 20 ವರ್ಷಗಳ ಕಾಲ ದ.ಕ. ಜಿಲ್ಲೆಯನ್ನು ಪ್ರತಿನಿಧೀಕರಿಸಿದ್ದರು.

ಅವರಿಗೆ ಆ ಪಕ್ಷ - ಈ ಪಕ್ಷ ಭೇದವಿರಲಿಲ್ಲ. ಅವರಿಗೆ ಜನರ ಹಿತವೇ ಮುಖ್ಯವಾಗಿತ್ತು. ಪಕ್ಷಾತೀತರಾಗಿ ಅವರು ಜನರಿಗಾಗಿ ಕೆಲಸ ಮಾಡಿದರು. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುವಾಗ, ಕಾಂಗ್ರೆಸ್‌ನವರೊಂದಿಗೇ ಕೂಡಿ ಕೆಲಸ ಮಾಡಿದರೂ ಅವರು ಆ ಪಕ್ಷದ ಸದಸ್ಯರಾಗಿರಲಿಲ್ಲ. ದ.ಕ. ಜಿಲ್ಲೆಯ ಜನರ ಯಾವುದೇ ಸುಖ - ದುಃಖಗಳಿರಲಿ, ಅವನ್ನು ಮದ್ರಾಸಿನ ವಿಧಾನ ಪರಿಷತ್ತಿನಲ್ಲಿ ಎತ್ತಿ ಹಿಡಿದು ಅದಕ್ಕಾಗಿ ಕೆಲಸ ಮಾಡುತ್ತಿದ್ದರು.

ಅವರು ಎಂ.ಎಲ್.ಸಿ.ಯಾಗಿ ಮಾಡಿದ್ದೇನು? ಜನರಿಗಾಗಿ ಎಷ್ಟು ಹೋರಾಡಿದರು? - ಈ ವಿಷಯಗಳನ್ನು ವಿವರಿಸುವ ಒಂದು ಪುಸ್ತಕವನ್ನು ಕನ್ನಡದಲ್ಲಿ ಬರೆದು ಪ್ರಕಟಿಸಿದ್ದರು ; ಅದರ ಹೆಸರು - 'ನನ್ನ ಮೆಂಬರಿಕೆ.' ದೇವಸ್ಥಾನಗಳ ಸ್ಥಾನಮಾನ, ಆಸ್ತಿ - ಪಾಸ್ತಿಯ ವಿಚಾರ, ಜೈನರ ಉತ್ತರಾಧಿಕಾರದ ಕಾನೂನಿಗೋಸ್ಕರ ಅವರು ವಿಶೇಷವಾಗಿ ಶ್ರಮಿಸಿದ್ದರು.

ಮೊಳಹಳ್ಳಿ ಶಿವರಾಯರು, ಕೋಟ ರಾಮಕೃಷ್ಣ ಕಾರಂತರು, ಶಿವರಾಮ ಕಾರಂತರು, ಅರಳ ಧರ್ಮಪಾಲ ಶೆಟ್ಟಿಯವರು - ಮೊದಲಾಗಿ, ದೊಡ್ಡ - ದೊಡ್ಡ ಜನರು ಅವರಿಗೆ ಗೆಳೆಯರಾಗಿದ್ದರು.

1943ನೇ ಇಸವಿಯಲ್ಲಿ ಅವರ ಆಡಳಿತದ ರಜತೋತ್ಸವನ್ನು ಬಹುಸಂಭ್ರಮದಿಂದ ಆಚರಿಸಲಾಯಿತು.

1947ರಲ್ಲಿ ಕಾಸರಗೋಡಿನಲ್ಲಿ ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು. ಆಗ ಅದಕ್ಕೆ ಅವರೇ ಸ್ವಾಗತಾಧ್ಯಕ್ಷರಾಗಿದ್ದರು.

ಕನ್ನಡ ಭಾಷೆಯನ್ನಾಡುವವರೆಲ್ಲ ಒಂದಾಗಬೇಕು ; ಕರ್ನಾಟಕ ರಾಜ್ಯ ನಿರ್ಮಾಣವಾಗಬೇಕು - ಎಂದು ಅವರೂ ಹೋರಾಟ ನಡೆಸಿದರು. ಕರ್ನಾಟಕ ಏಕೀಕರಣವೆಂದರೆ ಅವರಿಗೆ ಪ್ರೀತಿಯ ವಿಷಯವಾಗಿತ್ತು. ಕನ್ನಡ ನಾಡಿನ ದಿಗ್ಗಜಗಳಾದ ಆಲೂರು ವೆಂಕಟರಾಯರು, ಸಿದ್ಧವನಹಳ್ಳಿ ಕೃಷ್ಣ ಶರ್ಮ, ಎಸ್. ನಿಜಲಿಂಗಪ್ಪ, ಕೆ.ಬಿ. ಜಿನರಾಜ ಹೆಗ್ಗಡೆ, ಅ.ನ. ಕೃಷ್ಣ ರಾವ್, ಕೆ.ಎಸ್. ಧರಣೇಂದ್ರಯ್ಯ, ಶಿವಮೂರ್ತಿ ಶಾಸ್ತ್ರಿ - ಮೊದಲಾದವರೊಂದಿಗೆ ಬಹು ಆತ್ಮೀಯತೆಯಿಂದ ಇದ್ದು, ಕರ್ನಾಟಕ ಏಕೀಕರಣಕ್ಕಾಗಿ ವಿಶೇಷವಾಗಿ ಶ್ರಮಿಸಿದರು. ಅದಕ್ಕಾಗಿಯೇ ಉಜಿರೆಯ ಹೈಸ್ಕೂಲಿಗೆ 'ಕರ್ನಾಟಕ - ವಿದ್ಯಾಲಯ' ಎಂದು ಹೆಸರಿಡಲಿಕ್ಕೂ ಅವರೇ ಕಾರಣರಾದರು.

ಅವರಿಗೆ 60 ವರ್ಷ ತುಂಬಿದಾಗ, ಅವರ ಷಷ್ಟ್ಯಬ್ಧವನ್ನು ಭಾರಿ ಸಂಭ್ರಮದಿಂದ ಮಂಗಳೂರಲ್ಲಿ ನಡೆಸಿದರು. 1950ರಲ್ಲಿ ನಡೆದ ಸಮಾರಂಭದಲ್ಲಿ 'ಸಮರ್ಪಣೆ' - ಎಂಬ ಅಭಿನಂದನ ಗ್ರಂಥವನ್ನು ಅವರಿಗೆ ಸಮರ್ಪಿಸಿದರು. ಈ ಗ್ರಂಥದಲ್ಲಿ ನಮ್ಮ ದೇಶದ ದೊಡ್ಡ - ದೊಡ್ಡ ಲೇಖಕರ ಬರೆಹಗಳು ಕಾಣಸಿಗುತ್ತವೆ. ಅವನ್ನು ನೋಡಿದರೆ ಅವರೆಷ್ಟು ಗಣ್ಯ ಮಹಾಪುರುಷರಾಗಿದ್ದರೆಂದು ಅರ್ಥವಾಗುತ್ತದೆ.

ಸಮ್ಮೇಳನಗಳನ್ನು ಆರಂಭಿಸಿದರು

ಯಾವುದೇ ಊರಿನಲ್ಲಿ ಜಾತ್ರೆಯೆಂದರೆ ಜನರು ಬರುತ್ತಾರೆ. ಜಾತ್ರೆಯಲ್ಲಿ ಸಂತೆ ತಿರುಗಿ, ಸ್ವಲ್ಪ ಹಣ ಖರ್ಚು ಮಾಡಿ, ಏನಾದರೂ ತಿಂದು, ಏನಾದರೂ ಖರೀದಿಸಿ ಮತ್ತೆ ಮನೆಗೆ ಹಿಂದಿರುಗುತ್ತಾರೆ. ಇದು ಹೀಗಾಗಬಾರದು, ಜನರು ಜಾತ್ರೆಗೆ ಬಂದಾಗ, ಅವರಿಗೊಂದಿಷ್ಟು ಜ್ಞಾನ ಲಾಭವಾಗಲಿ - ಎಂಬ ಉದ್ದೇಶದಿಂದ ಮಂಜಯ್ಯ ಹೆಗ್ಗಡೆಯವರು 1933ನೇ ಇಸವಿಯಲ್ಲಿ ಸರ್ವಧರ್ಮ ಸಮ್ಮೇಳನಗಳನ್ನು ಆರಂಭಿಸಿದರು.

ಧರ್ಮಸ್ಥಳದಲ್ಲಿ ನಡೆಯುವ ಲಕ್ಷದೀಪೋತ್ಸವವೆಂದರೆ - ಆಗಲೂ ಸಹ ಇಡೀ ರಾಜ್ಯದಲ್ಲೇ ಒಂದು ದೊಡ್ಡ ಪುಣ್ಯ ಕ್ಷೇತ್ರದ ಉತ್ಸವ ; ಆದ್ದರಿಂದ ಸಹಸ್ರ - ಸಹಸ್ರ ಸಂಖ್ಯೆಯಲ್ಲಿ ಜನರು ಆಗಮಿಸುತ್ತಿದ್ದರು. ಹಾಗೆ ಬಂದಾಗ ಪರಸ್ಪರ ಮತ - ಸಾಮರಸ್ಯ, ಧರ್ಮಗಳ ಪರಿಚಯ ಹಾಗೂ ದೇಶದ ಉದ್ಧಾರಕ್ಕೆ ಉಪಯುಕ್ತವಾಗುವಂತೆ ಸರ್ವಧರ್ಮ ಸಮ್ಮೇಳನವನ್ನು ಅವರು ಪ್ರಾರಂಭಗೊಳಿಸಿದರು.

1933ರಲ್ಲಿ ಈ ಸರ್ವಧರ್ಮ ಸಮ್ಮೇಳನದ ಮೊದಲ ಅಧಿವೇಶನದಲ್ಲಿ ಅವರು ಸ್ವಾಗತ ಭಾಷಣದಲ್ಲಿ ಹೀಗೆ ಹೇಳಿದರು -

"ನಾವು ಈ ದೀಪೋತ್ಸವ ಸಮಾರಂಭದಲ್ಲಿ ಸಾರ್ವಜನಿಕರಿಗೆ ಉಪಕಾರವಾಗಲಿ - ಎಂದು ವಿವಿಧ ಮತ ಧರ್ಮಸಮ್ಮೇಳನ - ಎಂಬ ಒಂದು ಹೊಸ ಏರ್ಪಾಟನ್ನು ಈ ವರ್ಷ ಆರಂಭಿಸಿದ್ದೇವೆ. ಇದೆಲ್ಲವೂ ನಿಮಗೆ ತಿಳಿದ ವಿಷಯವೇ. ಈ ಸಂದರ್ಭದಲ್ಲಿ ನೀವೆಲ್ಲರೂ ಈ ಕ್ಷೇತ್ರದ ಮೇಲೆ ಅಭಿಮಾನವಿರಿಸಿ, ಇಷ್ಟು ದೂರಕ್ಕೆ ದಯಮಾಡಿಸಿದ್ದೀರಿ. ನಮ್ಮೊಂದಿಗೆ ಸೇರಿ ಈ ಸಮ್ಮೇಳನವನ್ನು ಚಂದಗಾಣಿಸಿಕೊಟ್ಟದ್ದು ನಮಗೆ ಬಹಳ ಸಂತೋಷದ ವಿಷಯವಾಗಿದೆ. ಅದಕ್ಕಾಗಿ ನಿಮಗೆಲ್ಲರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

ಸಾಮಾನ್ಯವಾಗಿ ವಿವಿಧ ಮತ - ಧರ್ಮಗಳ ಏಕತೆಗೆ ಧರ್ಮಸ್ಥಳವು ಒಂದು ಆದರ್ಶ ಕ್ಷೇತ್ರವಾಗಿದೆ - ಎಂದರೆ ತಪ್ಪಾಗದು. ಹಿಂದುಗಳು, ಜೈನರು, ಮುಸ್ಲಿಮರು, ಕ್ರೈಸ್ತರು - ಎಂಬ ಭೇದಭಾವವಿಲ್ಲದೆ ಎಲ್ಲ ಮತ - ಧರ್ಮಗಳ ಜನರೂ ಈ ಕ್ಷೇತ್ರದ ವಿಶ್ವಾಸಕ್ಕೆ ಪಾತ್ರರಾಗಿರುವುದು ಒಂದು ದೊಡ್ಡ ನಿದರ್ಶನ. ಇದಲ್ಲದೆ, ವಿವಿಧ ಪ್ರಕಾರದ ಮತಭೇದಗಳನ್ನು ಗಮನಿಸದೆ, ದಾನಧರ್ಮಗಳನ್ನು ನೀಡುವುದೂ ಈ ಕ್ಷೇತ್ರದ ಮಹಿಮೆಯೆಂದೇ ಹೇಳಬಹುದು.

ಪ್ರತಿಯೊಬ್ಬ ಧರ್ಮಾಭಿಮಾನಿಯೂ, ಜಾತ್ರೆಯ ಸಂದರ್ಭದಲ್ಲಿ ಮಾಡಬೇಕಾದ ಕರ್ತವ್ಯಗಳು ಅನೇಕವಿದ್ದರೂ, ವಿಶೇಷವಾಗಿ ಇಂತಹ ಧಾರ್ಮಿಕ ಸಮ್ಮೇಳನಗಳನ್ನು ಮಾಡಿ, ಜನಸಾಮಾನ್ಯರ ಮನಸ್ಸಿನಲ್ಲಿರುವ ದೋಷಗಳನ್ನೂ, ಸಂಕುಚಿತ ಭಾವನೆಗಳನ್ನು ದೂರೀಕರಿಸಿ, ಧರ್ಮದ ನಿಜವಾದ ಮರ್ಮ ಅವರ ಹೃದಯದಲ್ಲಿ ನೆಲಸುವಂತೆ ಮಾಡುವುದಕ್ಕಾಗಿ ಸರಳವಾಗಿ, ಸುಲಭೋಪಾಯದಿಂದ ತಿಳಿಸುವುದೂ ಕೂಡಾ ಮುಖ್ಯವಾಗಿದೆ.

ಇಂದಿಗೆ ಈ ತೆರನಾದ ಸಮ್ಮೇಳನಗಳ ಆವಶ್ಯಕತೆ ಹೆಚ್ಚಿದೆ. ಪೂರ್ವದಲ್ಲಿ ನಮ್ಮ ಪವಿತ್ರ ಭಾರತ ದೇಶವೆಂದರೆ ವಿವಿಧ ಮತಧರ್ಮಗಳಿಗೆ ಎಲ್ಲ ದೇಶಗಳೆದುರಲ್ಲಿ ತಲೆಯೆತ್ತಿ ಸ್ವಾಭಿಮಾನದಿಂದ ಮೆರೆಯುತ್ತಿದೆ. ಈ ವಿಚಾರಗಳನ್ನು ಕೇಳಿದಾಗ ದೇಶಭಕ್ತರಾದ ಆಸ್ತಿಕರಿಗೆ ರೋಮಾಂಚನವುಂಟಾಗುತ್ತದೆ. ಈ ವಿಚಾರಗಳೆಲ್ಲವೂ ಭಾರತೀಯರ ಪಾಲಿಗೆ ಒಂದು ಮಹಾ ಅಭಿಮಾನದ ಸಂಗತಿಯಾಗಿದೆ."

- ಹೀಗೆ ಧರ್ಮಸ್ಥಳದಲ್ಲಿ ಆರಂಭವಾದ ಸರ್ವಧರ್ಮ ಸಮ್ಮೇಳನಗಳ ಪರಂಪರೆಯು ಇಂದಿಗೆ ಬೇರೆ - ಬೇರೆ ಊರುಗಳಿಗೂ ತಲಪಿದೆ. ಸಣ್ಣ - ದೊಡ್ಡ ಊರುಗಳಲ್ಲಿನ ದೇವಸ್ಥಾನಗಳಲ್ಲಿ, ಅಲ್ಲಿ ನಡೆಯುವ ಜಾತ್ರೆಗಳಲ್ಲಿ ಧರ್ಮ ಸಮ್ಮೇಳನಗಳ ಆಯೋಜನೆ ಅನೇಕ ಕಡೆಗಳಲ್ಲಿ ನಡೆಯುತ್ತಿದ್ದರೆ, ಅದಕ್ಕೆ ಮೂಲ ಪ್ರೇರಣೆ ಧರ್ಮಸ್ಥಳದಿಂದಲೇ ದೊರೆಯಿತೆನ್ನಬಹುದು. ಅಲ್ಲಿಯ ಧರ್ಮ ಸಮ್ಮೇಳನದಲ್ಲಿ ಹಿಂದೂ ಧರ್ಮ, ಜೈನ ಧರ್ಮ, ಕ್ರೈಸ್ತ ಧರ್ಮ, ಇಸ್ಲಾಂ ಧರ್ಮಗಳ ವಿದ್ವಾಂಸರು ಆಗಮಿಸಿ ಉಪನ್ಯಾಸ ನೀಡುತ್ತಿದ್ದರು. ಅಂತೆಯೇ ಬೌದ್ಧ ಧರ್ಮ, ವೀರಶೈವ ಧರ್ಮ, ಸಿಖ್ಖ - ಸೂಫಿ - ಮೊದಲಾದ ಧರ್ಮಗಳ ಬಗ್ಗೆಯೂ ಉಪನ್ಯಾಸಗಳು ನಡೆಯುತ್ತಿದ್ದವು.

ಈ ಸಮ್ಮೇಳನಗಳು ಎರಡು ದಿನ ನಡೆಯುತ್ತಿದ್ದವು. ಮೊದಲ ದಿನ ಧರ್ಮದ ವಿಷಯದಲ್ಲಿ ಹಾಗೂ ಮರುದಿನ ಸಾಹಿತ್ಯ ವಿಷಯದಲ್ಲಿ ಉಪನ್ಯಾಸಗಳು ನಡೆಯುತ್ತಿದ್ದವು. ಆಗ ಕೋಟ ಶಿವರಾಮ ಕಾರಂತ, ಕೆ.ಎಸ್. ಧರಣೇಂದ್ರಯ್ಯ, ಅ.ನ. ಕೃಷ್ಣ ರಾವ್, ಎತ್ತೂರು ಶಾಂತಿರಾಜ ಶಾಸ್ತ್ರಿಗಳಂತಹ ವಿದ್ವಾಂಸರು ಪ್ರತಿವರ್ಷವೂ ಬರುತ್ತಿದ್ದರು. ಅವರು ಎರಡು ದಿನಗಳ ಸಮ್ಮೇಳನದಲ್ಲೂ ಉಪನ್ಯಾಸ ನೀಡುತ್ತಿದ್ದರು.

ಹಾಗೆ ಬಂದ ವಿದ್ವಾಂಸರಿಗೆ, ಸಾಹಿತಿಗಳಿಗೆ ಹಾಗೂ ಸಮಾಜದ ಗಣ್ಯ ನೇತಾರರಿಗೆ ವಿಶೇಷವಾದ ಸನ್ಮಾನ, ಉಡುಗೊರೆ - ಇತ್ಯಾದಿ ನೀಡಿ ಗೌರವಿಸುತ್ತಿದ್ದರು.

ಅವರ ಕಲಾಸೇವೆ

ಶ್ರೀ ಮಂಜಯ್ಯ ಹೆಗ್ಗಡೆಯವರಿಗೆ ಕಲೆಯೆಂದರೆ ವಿಶೇಷವಾದ ಅಭಿಮಾನ. ಅವರಿಗೆ ತಾನು ಮುಂಬೈಗೆ ಹೋಗಬೇಕು ; ಅಲ್ಲಿನ ಜೆ.ಜೆ. ಆರ್ಟ್ಸ್ ಸ್ಕೂಲ್‌ನಲ್ಲಿ ಚಿತ್ರಕಲೆಯನ್ನು ಆಳವಾಗಿ ಅಧ್ಯಯನ ಮಾಡಬೇಕು - ಎಂಬಾಸೆಯಿತ್ತು. ಆದರೆ ಅವರ ಹೆಗಲ ಮೇಲೆ ಶ್ರೀ ಕ್ಷೇತ್ರದ ಜವಾಬ್ದಾರಿಯು ಬಿದ್ದುದರಿಂದಾಗಿ ಅವರ ಆಸೆ ಪೂರೈಸದೇ ಉಳಿದಿತ್ತು.

ಹಾಗಿದ್ದರೂ ಅವರು ಚಿತ್ರಕಲೆಯನ್ನು ತ್ಯಜಿಸಲಿಲ್ಲ. ಅವರೇ ಸ್ವತಃ ಚಿತ್ರಕಲೆಯ ಅಭ್ಯಾಸ ನಡೆಸಿದರು. ಇತರರ ಚಿತ್ರಗಳನ್ನು ನೋಡುತ್ತಾ - ನೋಡುತ್ತಲೇ ಅವರು ಚಿತ್ರ ಬರೆಯಲು ಕಲಿತರು. ಚಿತ್ರಕಲೆ ಕಲಿಯುವವರಿಗೆ ನೆರವಾದರು. ಅಮಿತ ತೇಜ - ಎಂಬ ಯುವಕನನ್ನು ಚಿತ್ರಕಲೆ ಕಲಿಯಲೆಂದೇ ಮುಂಬೈಗೆ ಕಳಿಸಿದರು ; ಖರ್ಚು - ವೆಚ್ಚಗಳನ್ನು ನೀಡಿದರು. ಉಜಿರೆಯ ಸಿದ್ಧವನದಲ್ಲೊಂದು ಕಲಾಶಾಲೆಯನ್ನಾರಂಭಿಸಿದರು. ಅಲ್ಲಿ ಬಿ.ಪಿ. ಸೋಮಯಾಜಿ, ಯು. ರಮಾನಾಥ ಪ್ರಭು, ವಿಟ್ಲ ಬಾಬು ರಾವ್ - ಅವರು ಚಿತ್ರಕಲಾಧ್ಯಾಪಕರಾಗಿ ಸಿದ್ಧವನದ ಮಕ್ಕಳಿಗೆ ಚಿತ್ರಕಲಾ ತರಬೇತಿಯನ್ನು ನೀಡುತ್ತಿದ್ದರು.

ಧರ್ಮಸ್ಥಳದಲ್ಲಿ ಲಕ್ಷದೀಪೋತ್ಸವದ ಸಮಯದಲ್ಲಿ ಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳೊಂದಿಗೇ ಲಲಿತ ಕಲಾ ಗೋಷ್ಠಿ, ಕೈಗಾರಿಕಾ ಪ್ರದರ್ಶನಗಳನ್ನು ನಡೆಸಿದರು. ಅಲ್ಲಿ ಶ್ರೇಷ್ಠ ಕಲಾವಿದರ ಉತ್ತಮ ಚಿತ್ರಗಳನ್ನೂ ಪ್ರದರ್ಶಿಸಿದರು.

ಧರ್ಮಸ್ಥಳದ 'ವಸಂತ ಮಹಲ್' (ಈಗಿನ ಹೆಸರು - ಶ್ರೀ ಮಂಜಯ್ಯ ಹೆಗ್ಗಡೆ ಕಲಾಮಂದಿರ)ದಲ್ಲಿ ಅವರು ತಯಾರಿಸಿದ ವರ್ಣಚಿತ್ರಗಳಿವೆ. ಅವರು ತಮ್ಮ ಕುಂಚದಿಂದ ರಚಿಸಿದ ಕೃತಿಗಳು ಹೀಗಿವೆ :-

(1) ಬುದ್ಧನ ವೈರಾಗ್ಯ

(2) ಶ್ರೀ ಮಹಾವೀರ ಸ್ವಾಮಿಯ ಸಮವಸರಣ

(3) ಕೇರಳದ ತರುಣಿ

(4) ಪದ್ಮಿನಿ

(5) ಪಂಪ ಮಹಾಕವಿ

(6) ಕುಕ್ಕುಟ ದೇವಿ

(7) ಮಹಾತ್ಮಾ ಗಾಂಧಿಯವರು

(8) ಕಡೆಗೋಲು ಕೃಷ್ಣ

(9) ಪ್ರಸನ್ನ ಮಹಾದೇವರು

(10) ಕ್ಷೇತ್ರದ ಧರ್ಮದೇವತೆಗಳು

(11) ಕರ್ಣಾವಸಾನ

(12) ತೋಳ

(13) ಜಮಾಲಾಬಾದ್

(14) ಜೋಗದ ಜಲಪಾತ

(15) ಶ್ರೀ ರಾಮ ಪಟ್ಟಾಭಿಷೇಕ (ಇದನ್ನು ಉಜಿರೆಯ ಶ್ರೀ ರಾಮ ಭಜನಾ ಮಂದಿರದಲ್ಲಿ ಪೂಜೆಗೆಂದು - ಉಜಿರೆಯ ಶ್ರೀ ಚರ್ಡಪ್ಪ ಶ್ಯಾನುಭೋಗರ ವಿನಂತಿಯಂತೆ ತಯಾರಿಸಿದರು. ಇದರಲ್ಲಿ ಶ್ರೀ ರಾಮ - ಸೀತೆ - ಲಕ್ಷ್ಮಣರಿದ್ದಾರೆ. ಈ ಚಿತ್ರವಿಂದಿಗೂ ಆ ಭಜನಾ ಮಂದಿರದಲ್ಲಿ ಪೂಜಿಸಲ್ಪಡುತ್ತದೆ. ಇಲ್ಲಿನ ಚಿತ್ರದಲ್ಲಿನ ಸೀತೆಯ ಚಿತ್ರಣದ ಸಂದರ್ಭದಲ್ಲಿ ತನ್ನ ಮಗಳಾದ ವಿಮಲಮ್ಮನವರನ್ನೇ ಮಾಡೆಲ್ ಆಗಿ, ಸೀತೆಯಂತೆ ಸೀರೆ - ಬಂಗಾರದಾಭರಣ ತೊಡಿಸಿ, ಚಿತ್ರೀಕರಣ ನಡೆಸಿದ್ದರೆನ್ನಲಾಗಿದೆ.

ಅಂತೆಯೇ ಅವರಿಗೆ ನಾಟಕ - ಕಲೆಯಲ್ಲೂ ವಿಶೇಷಾಸಕ್ತಿಯಿತ್ತು. 1932ನೇ ಇಸವಿಯಲ್ಲಿ ಧರ್ಮಸ್ಥಳಕ್ಕೊಬ್ಬ ನಾಟಕ ಕಲಾವಿದರು ಆಗಮಿಸಿದರು. ಅವರ ಹೆಸರು ನಂಜುಂಡಯ್ಯ. ಅವರ ನಿರ್ದೇಶನದಲ್ಲಿ 'ಲಂಕಾದಹನ' ನಾಟಕದ ಪ್ರದರ್ಶನ ನಡೆಯಿತು. ಅನಂತರ 'ಮೃತ್ಯುಂಜಯ' - ಎಂಬ ಹೆಸರಿನ ನಾಟಕವನ್ನು ಸ್ವತಃ ಬರೆದು, ಆಡಿಸಿದರು. ಅವರಿಗೆ ನಾಟಕ ಕಲೆಯಿಂದಾಗಿಯೇ ರಂಗನಾಥ ಭಟ್, ಶಾಲಿವಾಹನರು, ತಾಮ್ಹಣಕರರು, ಬಾಬು ರಾವ್ - ಮೊದಲಾದವರು ಆತ್ಮೀಯರೆನಿಸಿದರು.

ನಾಟಕ ಕಲೆಯಂತೆಯೇ ಅವರಿಗೆ ಶಿಲ್ಪಕಲೆಯಲ್ಲೂ ಆಸಕ್ತಿಯಿತ್ತು. ಮೈಸೂರಿನ ಶ್ರೀನಿವಾಸಾಚಾರ್ - ಎಂಬವರು ವಿವಿಧ ಜಾತಿಯ ಗೊಂಬೆಗಳನ್ನು ಮಾಡಿ ತರುತ್ತಿದ್ದರು. ಈಶ್ವರ, ಪಾರ್ವತಿ, ಗಣಪತಿ ಪ್ರತಿಮೆಗಳನ್ನೂ ಅವರು ತಂದರು. ಇಂದು ಲಲಿತೋದ್ಯಾನದಲ್ಲಿರುವ ಅಂಚೆಪೇದೆಯ ಮೂರ್ತಿಯನ್ನೂ ಅವರೇ ಮಾಡಿ ತಂದಿದ್ದರು.

ಅವರಿಗೆ ಫೋಟೋಗ್ರಫಿಯಲ್ಲೂ ವಿಶೇಷ ಅಭಿರುಚಿಯಿತ್ತು. ಸ್ವತಃ ಕ್ಯಾಮರಾ ಹಿಡಿದುಕೊಂಡು ಚಿತ್ರ ಸೆರೆಹಿಡಿಯುತ್ತಿದ್ದರು. ಉಜಿರೆಯ ರಮಾನಾಥ ಪ್ರಭು ಎಂಬ ಪ್ರಸಿದ್ಧ ಛಾಯಾಚಿತ್ರ ಗ್ರಾಹಕರು ಅವರ ಪ್ರೇರಣೆಯಿಂದಲೇ ಮುನ್ನಡೆದರು. ಅವರ ಬಳಿ ಒಂದು ವಿದೇಶೀ ಮೂವಿ - ಕ್ಯಾಮರಾ ಕೂಡಾ ಇದ್ದಿತ್ತು. ಆದರಿಂದಾಗಿ ಕೋಟ ಶಿವರಾಮ ಕಾರಂತರಂತಹ ಸಾಹಿತಿಗೂ ಅವರೊಂದಿಗೆ ಛಾಯಾಗ್ರಹಣ ಕಲೆಯ ಬಗ್ಗೆ ಆತ್ಮೀಯತೆ ಬೆಳೆಯಿತು.

ಯಕ್ಷಗಾನ, ತಾಳಮದ್ದಳೆ - ಎಂದರೆ ಅವರಿಗೆ ವಿಶೇಷ ಪ್ರೀತಿ. ಕವಿಭೂಷಣ ವೆಂಕಪ್ಪ ಶೆಟ್ಟಿ, ಶಂಕರನಾರಾಯಣ ಸಾಮಗ, ಎನ್.ಎಸ್. ಕಿಲ್ಲೆ, ವಕೀಲ ಬಾಲಕೃಷ್ಣ ರಾಯರೇ - ಮೊದಲಾದವರನ್ನು ಕಲೆ ಹಾಕಿ ತಾಳಮದ್ದಲೆ ನಡೆಸುತ್ತಿದ್ದರು.

ಮಂಜಯ್ಯ ಹೆಗ್ಗಡೆಯವರು ಕಿಲ್ಲೆಯವರಿಂದ ಒಮ್ಮೆ ಕರ್ಣನಾಗಿ ಅರ್ಜುನನಾಗಿ ಅರ್ಥ ಹೇಳಿಸುತ್ತಿದ್ದರು ; ಭಾಷಣ ಮಾಡಿಸುತ್ತಿದ್ದರು. ಅದನ್ನು ಕೇಳಿ ಸಂತಸ ಪಡುತ್ತಿದ್ದರು. ಅರ್ಥ ಹೇಳಿದವರಿಗೆ ಸನ್ಮಾನ ಗೌರವ ನೀಡುತ್ತಿದ್ದರು.

ಕವಿಭೂಷಣ ವೆಂಕಪ್ಪ ಶೆಟ್ಟಿಯವರಿಗೆ ಹೇಳಿ ಅವರಿಂದ ರನ್ನನ 'ಯಶೋಧರ ಚರಿತ್ರೆ'ಯ ಯಕ್ಷಗಾನ ಪ್ರಸಂಗ ಬರೆಸಿದರು. ರತ್ನಾಕರ ವರ್ಣಿಯ 'ಭರತೇಶ ವೈಭವ' ಕಾವ್ಯವೂ ಯಕ್ಷಗಾನದಲ್ಲಿ ಬರುವಂತೆ ಮಾಡಿದರು. ಇಷ್ಟೇ ಅಲ್ಲ, ಶ್ರೀ ಸಿದ್ಧವನ ಗುರುಕುಲದಲ್ಲಿ ನಡೆದ 'ವೃಷಭ ಜಯಂತಿ'ಯ ಅಂಗವಾಗಿ ಕರ್ನಾಟಕ ಯಕ್ಷಗಾನ ಮೇಳದವರು 'ಭರತೇಶ ವೈಭವ'ವನ್ನು ಅಭಿನಯಿಸಿದರು. ಆಗ ಯಕ್ಷಗಾನ - ರಂಗಸ್ಥಳದಲ್ಲೇ ಪ್ರಪ್ರಥಮ ಜೈನ ತತ್ವಜ್ಞಾನದ ಮಾತುಗಳನ್ನು ಯಕ್ಷಗಾನ ಪಾತ್ರಧಾರಿಗಳು ಆಡಿದಾಗ, ಪ್ರೇಕ್ಷಕರಿಗೆಲ್ಲ ಕುತೂಹಲಾಶ್ಚರ್ಯವುಂಟಾಯಿತು. ಇದಕ್ಕೆ ಮೂಲಪ್ರೇರಣೆ ನೀಡಿದವರು ಮಂಜಯ್ಯ ಹೆಗ್ಗಡೆಯವರೇ. ಅವರು ಸಿದ್ಧವನ ಗುರುಕುಲದ ನಿವಾಸಿಗಳಿಗೆ ಸಂಗೀತ, ನೃತ್ಯ, ಚಿತ್ರ, ಜಾದು ಕೂಡಾ ಕಲಿಸುವ ಏರ್ಪಾಟು ನಡೆಸಿದ್ದರು. ಹಳ್ಳಿಗಳ ಜಾನಪದ ಕುಣಿತ, ಕೋಲಾಟ, ಹರಿಕಥೆ, ವೇಷಗಳಿಗೂ ಪ್ರೋತ್ಸಾಹ ನೀಡುತ್ತಿದ್ದರು. ದೀಪೋತ್ಸವದ ಸಂದರ್ಭದಲ್ಲಿ ಧರ್ಮಸ್ಥಳದಲ್ಲಿ 1936ರ ಬಳಿಕ ಕಲಾಪ್ರದರ್ಶನವನ್ನೂ ಏರ್ಪಡಿಸುತ್ತಿದ್ದರು.

ಅವರ ಕಲಾಸೇವೆಯ ಕುರಿತು ಕರ್ನಾಟಕ ಲಲಿತ ಕಲಾ ಅಕಾಡಮಿಯ ಅಧ್ಯಕ್ಷರಾಗಿದ್ದ ಶ್ರೀ ಪಿ.ಆರ್. ತಿಪ್ಪೇಸ್ವಾಮಿಯವರು ಹೀಗೆನ್ನುತ್ತಾರೆ :-

"ಶ್ರೀ ಕ್ಷೇತ್ರದ ಆಡಳಿತದ ಹೊಣೆಗಾರಿಕೆಯ ನಡುವೆಯೂ ಅವರು ಪುರುಸೊತ್ತು ಮಾಡಿಕೊಂಡು ಚಿತ್ರರಚನೆ ಮಾಡುತ್ತಿದ್ದುದು ಒಂದು ಮಹತ್ವದ ಸಂಗತಿಯಾಗಿದೆ. ಕಲಾವಿದರಾಗಿ ಅವರು ಹತ್ತು - ಹದಿನಾರು ಅಮೂಲ್ಯ ಕಲಾಕೃತಿಗಳನ್ನು ಸೃಜಿಸಿದರು. ಆದರೆ ಇಂದಿಗೆ ನಮಗೆ ಸಿಗುವವು ಕಡಿಮೆ. ತೈಲವರ್ಣ ಮತ್ತು ಜಲವರ್ಣ - ಎರಡೂ ಮಾಧ್ಯಮಗಳಲ್ಲೂ ಚಿತ್ರರಚನೆ ಮಾಡಿದ್ದರು. ಅವರಲ್ಲಿ ವಿಶೇಷವಾದ ಆತ್ಮವಿಶ್ವಾಸವಿತ್ತು. ಇದರಿಂದ ಅವಿಶ್ರಾಂತವಾದ ಕಲಾರಾಧನೆ ನಡೆಸಿದರು. ಇಂತಹ ಅಚಲ ಶ್ರದ್ಧೆಯಿಂದಾಗಿ ಕಲಾದೇವತೆಯ ಪೂರ್ಣ ಅನುಗ್ರಹಕ್ಕೆ ಅವರು ಪಾತ್ರರಾದರು."

- ಈ ಮಾತು ಶತಶಃ ಸತ್ಯವಾಗಿತ್ತು.

ಜನತೆಯ ಆರೋಗ್ಯ ಸೇವೆ

ಶ್ರೀ ಮಂಜಯ್ಯ ಹೆಗ್ಗಡೆಯವರು ಪಟ್ಟಕ್ಕೆ ಬಂದಾಗ ಶ್ರೀ ಕ್ಷೇತ್ರದಲ್ಲಿ ಮಲೇರಿಯಾ ವ್ಯಾಧಿಯ ಬಾಧೆ ಅತಿಯಾಗಿತ್ತು. ಈ ರೋಗದಿಂದಾಗಿ ದೊಡ್ಡ ಹೊಟ್ಟೆಯವರೇ ಹೆಚ್ಚಾಗಿದ್ದರು. ಈ ರೋಗದ ನಿವಾರಣೆಗಾಗಿ ಅವರು ವಿಶೇಷ ಪ್ರಯತ್ನ ನಡೆಸಿದರು.

ಶ್ರೀ ಧರ್ಮಸ್ಥಳದ ಚತುರ್ದಾನಗಳಲ್ಲಿ ಔಷಧ ದಾನಕ್ಕೂ ಮಹತ್ವವಿದೆ. ಬಡವರಿಗೆ ಉಚಿತವಾಗಿ ಔಷಧಿ ಕೊಡಿಸುವುದು. ಇದು ಇಲ್ಲಿ ಹಿಂದಿನಿಂದಲೂ ಬಂದ ಸಂಪ್ರದಾಯ. ಇಲ್ಲಿ ಧರ್ಮಾಸ್ಪತ್ರೆಯಿತ್ತು. ಇಷ್ಟು ಮಾತ್ರವಲ್ಲದೆ ದೂರದೂರದ ಹಳ್ಳಿಗಳಿಗೆ ಅಲ್ಲಿರುವ ಬಡಜನತೆಗೆ ಉಚಿತ ಔಷಧಿಯು ಸಿಗುವಂತಾಗಬೇಕೆಂದು 1954ನೇ ಇಸವಿಯಲ್ಲಿ ಒಂದು ಸಂಚಾರಿ ಆಸ್ಪತ್ರೆಯನ್ನು ಆರಂಭಿಸಿದರು. ಆಗ ಉಜಿರೆಯಂಥ ಊರಿನಲ್ಲೂ ವೈದ್ಯರಿರಲಿಲ್ಲ. ಇಂಥ ಹಳ್ಳಿಹಳ್ಳಿಗಳಿಗೂ ಆರೋಗ್ಯದ ಸಂದೇಶ ತಲುಪುವಂತಾಗಲೆಂದು ಅವರು ಈ ಸಂಚಾರಿ ಆಸ್ಪತ್ರೆಯ ಯೋಜನೆಯನ್ನು ಹಮ್ಮಿಕೊಂಡರು. ಈ ಸಂಚಾರಿ ಆಸ್ಪತ್ರೆಯು ಬೆಳ್ತಂಗಡಿ ತಾಲೂಕಿನ ಮಡಂತ್ಯಾರು, ಅಳದಂಗಡಿ, ಗೇರುಕಟ್ಟೆ, ಚಾರ್ಮಾಡಿ - ಹೀಗೆ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಊರುಗಳಿಗೆ ವಾರಕ್ಕೊಮ್ಮೆಯಂತೆ ಹೋಗಿ ಉಚಿತ ಚಿಕಿತ್ಸೆ ಮತ್ತು ಔಷಧ ಮತ್ತು ಚಿಕಿತ್ಸೆಯನ್ನು ನೀಡುತ್ತಿತ್ತು. ಎಲ್ಲಾ ಮುಗಿಸಿ ಬರುವಾಗ ಕೆಲವೊಮ್ಮೆ ರಾತ್ರೆಯೂ ಆಗುತ್ತಿತ್ತು.

ಈ ಸಂಚಾರಿ ಆಸ್ಪತ್ರೆಯ ವೈದ್ಯರಾಗಿದ್ದ ಡಾ॥ ಸೋಮಸುಂದರ ರಾಯರು ಹೀಗೆ ಹೇಳುತ್ತಾರೆ :- "ನಾವು ಸಂಚಾರಿ ಆಸ್ಪತ್ರೆಯಲ್ಲಿ ಹೋಗಿ ಜನರಿಗೆ ಮದ್ದು ಕೊಟ್ಟು ಬರುವಾಗ ಎಷ್ಟೇ ತಡವಾಗಲಿ, ಅವರು ನಾವು ಬರುವವರೆಗೆ ಕಾದಿದ್ದು 'ಏನಾಯ್ತು? ಎಷ್ಟು ಜನರಿಗೆ ಔಷಧಿ ನೀಡಿದಿರಿ? ಏನು ವಿಶೇಷ?' ಎಂದು ವಿಚಾರಿಸುತ್ತಿದ್ದರು.

ಇಷ್ಟು ಮಾತ್ರವಲ್ಲದೆ, ಅವರಿಗೆ ವಿದೇಶಿ ಪದ್ಧತಿಯ ಔಷಧಿಗಳ ಬೆಲೆ ಅಧಿಕವಾದುದರಿಂದ ನಮ್ಮ ಸ್ವದೇಶಿ ಔಷಧಿಗಳಿಗೆ ಹೆಚ್ಚು ಪ್ರೋತ್ಸಾಹ ನೀಡಬೇಕೆಂಬ ಅಪೇಕ್ಷೆಯಿತ್ತು. ಇದೇ ಉದ್ದೇಶದಿಂದ ಆಯುರ್ವೇದ ಔಷಧಿಗಳನ್ನು ತಯಾರಿಸಲಿಕ್ಕಾಗಿ ಒಂದು ಫಾರ್ಮಸಿ ಹಾಗೂ ಇಂಥ ಔಷಧಿ ತಯಾರಿಕೆಗೆ ಬೇಕಾದ ಗಿಡ - ಮೂಲಿಕೆಗಳ ಆಯುರ್ವೇದೀಯ ಸಸ್ಯೋದ್ಯಾನವನ್ನೂ ಮಾಡಬೇಕೆಂಬ ಆಸೆಯು ಅವರಲ್ಲಿತ್ತು."

ಆಗ ಮಂಗಳೂರಲ್ಲಿ ಡಾ॥ ಹರಿದಾಸ ಭಟ್ - ಎಂಬವರು ಆಯುರ್ವೇದ ವಿಶಾರದರಾದ ವೈದ್ಯರಿದ್ದರು. ಅವರ ಕುರಿತಾಗಿ ಶ್ರೀ ಮಂಜಯ್ಯ ಹೆಗ್ಗಡೆಯವರಿಗೆ ವಿಶೇಷ ಗೌರವವಿತ್ತು.

ವೈದ್ಯಕೀಯ ಚಿಕಿತ್ಸಾ ಪದ್ಧತಿಗಳಾದ ಅಲೋಪತಿ, ಆಯುರ್ವೇದ ಮತ್ತು ಹೋಮಿಯೋಪತಿ - ಈ ಮೂರು ಪದ್ಧತಿಗಳ ಕುರಿತಾಗಿಯೂ ಅವರಲ್ಲಿ ಸಮಾನ ಗೌರವದ ಭಾವನೆಯಿತ್ತು.

ಶ್ರೀ ಕ್ಷೇತ್ರದ ಚತುರ್ದಾನಗಳಲ್ಲಿ ಔಷಧ ದಾನವೂ ಒಂದು ಮಹತ್ವದ ದಾನ. 1951ನೇ ಇಸವಿಯಲ್ಲಿ ಶ್ರೀ ಕ್ಷೇತ್ರದಲ್ಲಿ 'ಮಹಾನಡಾವಳಿ' ಎಂಬ ಉತ್ಸವದ ವರ್ಷವೇ ಅವರೊಂದು ವಿಶಿಷ್ಟ ಸೇವಾ ಕಾರ್ಯಕ್ರಮವನ್ನು ಏರ್ಪಡಿಸಿದರು. ಅದು ಉಚಿತ ನೇತ್ರ ಚಿಕಿತ್ಸಾ ಶಿಬಿರ. ಡಾ॥ ಎಂ.ಸಿ. ಮೋದಿ ಎಂಬ ಹೆಸರಿನ ಖ್ಯಾತ ನೇತ್ರ ವೈದ್ಯರು ಬಂದು, ನೇತ್ರ - ಶಸ್ತ್ರ ಚಿಕಿತ್ಸೆ ನಡೆಸಿದರು. ಬಡವರಿಗಾಗಿ ನಡೆದ ಈ ಶಿಬಿರದಲ್ಲಿ ಅವರಿಗೆ ಊಟ - ವಸತಿ, ಕಾಫಿ - ತಿಂಡಿ, ಔಷಧ ಎಲ್ಲವೂ ಉಚಿತ. ಇದರಿಂದ ಸಾಮಾನ್ಯ ಜನತೆಗೆ ವಿಶೇಷ ಪ್ರಯೋಜನ ದೊರೆಯಿತು.

ಇಂಥ ಆರೋಗ್ಯ ಸೇವೆಯಿಂದಾಗಿ ಇಡೀ ಬೆಳ್ತಂಗಡಿ ತಾಲೂಕಿನ ಜನರು ಧರ್ಮಸ್ಥಳವನ್ನು ಸದಾ ಸ್ಮರಿಸುವಂತಾಯಿತು.

'ಮಹಾನಡಾವಳಿ'ಯೆಂಬ ಸೇವೆ

ಶ್ರೀ ಕ್ಷೇತ್ರದ ಇತಿಹಾಸದಲ್ಲಿ ಅತ್ಯಂತ ಪ್ರಸಿದ್ಧವಾದ ಘಟನೆ ಹಾಗೂ ಬಹುದೊಡ್ಡ ಘಟನೆಯೆಂದರೆ - ಮಹಾನಡಾವಳಿ.

1909ನೇ ಇಸವಿಯಲ್ಲಿ ಈ ತೆರನಾದ ನಡಾವಳಿ ನಡೆದಿತ್ತು ಎನ್ನಲಾಗಿದೆ. ಅದು ಇಪ್ಪತ್ತನೇ ಶತಮಾನದಾರಂಭದಲ್ಲಿ ನಡೆದಿತ್ತು. ಅದನ್ನು ಸ್ವತಃ ಕಂಡ ಜನರು ಕಡಿಮೆ. ಆದರೆ 1951ನೇ ವರ್ಷದಲ್ಲಿ ನಡೆದ ಮಹಾನಡಾವಳಿಯೆಂಬ ಉತ್ಸವವು ಬಹುದೊಡ್ಡದು. ಉತ್ತರ ಭಾರತದ ತ್ರಿವೇಣೀ ಸಂಗಮದಲ್ಲಿ ನಡೆಯುವ ಮಹಾಕುಂಭ ಮೇಳದಂತೆಯೇ ಇದು ಕೂಡಾ ಒಂದು ದೊಡ್ಡ ಉತ್ಸವವಾಗಿತ್ತು.

ಇದು 21 ದಿನಗಳ ವರೆಗೆ ನಡೆದ ನಡಾವಳಿ ಉತ್ಸವ. ಫೆಬ್ರುವರಿ ತಿಂಗಳಲ್ಲಿ ಬಹು ಸಂಭ್ರಮ - ಸಡಗರಗಳಿಂದ ನಡೆಯಿತು. ಕಲೆ - ಕೈಗಾರಿಕೆಗಳ ಪ್ರದರ್ಶನ, ಕೃಷಿ ಪ್ರದರ್ಶನ, ದೇವರ ಉತ್ಸವ - ಮಂಟಪ - ಮೆರವಣಿಗೆ - ಅಲಂಕಾರಗಳು ; ಎಲ್ಲಿ ನೋಡಿದರಲ್ಲಿ ಸಡಗರ ಸಂಭ್ರಮ. ಪ್ರತಿದಿನವೂ ದೇವರ ಉತ್ಸವ - ಧಾರ್ಮಿಕ ಕಾರ್ಯಕ್ರಮಗಳು. ಧರ್ಮ - ಸಂಸ್ಕೃತಿ - ಕಲೆ - ಸಾಹಿತ್ಯದ ಕುರಿತಾದ ಭಾಷಣ, ನಾಟಕ, ನೃತ್ಯ, ಹರಿಕತೆ - ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳು.

ಬಂದವರಿಗೆ ಭಾರಿ ಭೋಜನದ ವ್ಯವಸ್ಥೆಯಿತ್ತು. ಬೇರೆ - ಬೇರೆ ಕಡೆಗಳಲ್ಲಿ ಊಟದ ವ್ಯವಸ್ಥೆ ಮಾಡಿದ್ದರು. ಎಲ್ಲರಿಗೂ ಉಚಿತ - ಊಟ ; ಹೊಟ್ಟೆ ತುಂಬಾ ಊಟ. ಎಲ್ಲೆಲ್ಲೂ ಸುವ್ಯವಸ್ಥೆ!

ಶ್ರೀ ಮಂಜುನಾಥ ಸ್ವಾಮಿಯ ಉತ್ಸವ ದೇವಸ್ಥಾನದಲ್ಲಿ, ಶ್ರೀ ಚಂದ್ರನಾಥ ಸ್ವಾಮಿಯ ಉತ್ಸವ ಬಸದಿಯಲ್ಲಿ, ಧರ್ಮ ದೇವತೆಗಳ ಉತ್ಸವ ನೆಲ್ಯಾಡಿ ಬೀಡಿನಲ್ಲಿ ನಡೆಯುತ್ತಿದ್ದವು. ರಾತ್ರಿ - ಹಗಲೆಂಬ ವ್ಯತ್ಯಾಸವೇ ಇರಲಿಲ್ಲ. ಯಾರಿಗೂ ಪುರುಸೊತ್ತಿಲ್ಲ. ಎಲ್ಲಿ ಹೋದರಲ್ಲಿ ಸಡಗರ - ಸಂಭ್ರಮ!

ಶ್ರೀ ಸಿದ್ಧವನ ಗುರುಕುಲ, ಕರ್ನಾಟಕ ವಿದ್ಯಾಲಯ ಪ್ರೌಢಶಾಲೆ ಮತ್ತು ಬುನಾದಿ ತರಬೇತಿ ಶಾಲೆ - ಈ ಮೂರು ಶಿಕ್ಷಣ ಸಂಸ್ಥೆಗಳ ವಾರ್ಷಿಕೋತ್ಸವಗಳೂ ಧರ್ಮಸ್ಥಳದಲ್ಲೇ ನಡೆದುವು. ಎಂತಹ ಭಾಷಣಗಳು, ಎಂತಹ ನಾಟಕಗಳು!

ಅಂತೆಯೇ ಫೆಬ್ರುವರಿ 21ರಂದು ಕನ್ನಡ ಸಾಹಿತ್ಯೋತ್ಸವ. ಕನ್ನಡದ ಗಣ್ಯ ಸಾಹಿತಿಗಳು ಈ ಉತ್ಸವದಲ್ಲಿ ಭಾಗವಹಿಸಿದ್ದರು. ಎಂ.ಆರ್. ಶ್ರೀನಿವಾಸ ಮೂರ್ತಿ, ಕೆ.ಎಸ್. ಧರಣೇಂದ್ರಯ್ಯ, ಶಿವರಾಮ ಕಾರಂತ, ಡಿ.ವಿ. ಗುಂಡಪ್ಪ, ಮಂಜೇಶ್ವರ ಗೋವಿಂದ ಪೈ - ಮೊದಲಾದವರು ಆಗಮಿಸಿ, ಉಪನ್ಯಾಸ ನೀಡಿದರು.

ಮರುದಿನ ಫೆಬ್ರುವರಿ 22ರಂದು ಸರ್ವಧರ್ಮಗಳ ಉತ್ಸವ. ಇದರಲ್ಲೂ ಹಿರಿಯ ವಿದ್ವಾಂಸರು ಪಾಲುಗೊಂಡರು; ಭಾಷಣ ಮಾಡಿದರು.

ಫೆ. 21ರಂದು ಶ್ರೀ ಮಂಜುನಾಥ ಸ್ವಾಮಿ ದೇವಸ್ಥಾನದಿಂದ ನೆಲ್ಯಾಡಿ ಬೀಡಿನ ವರೆಗೆ ಭಂಡಾರದ ಮೆರವಣಿಗೆ ಹಾಗೂ ಅಲ್ಲಿ ಧರ್ಮ - ದೇವತೆಗಳ ಧರ್ಮೋಪದೇಶ ನಡೆದುವು.

ಮಹಾ ನಡಾವಳಿಯೆಂದರೆ ಅತ್ಯಂತ ವೈಭವದ ಮಹಾ ಉತ್ಸವವೇ ಸರಿ. ಅಲ್ಲಿ ಸಂಸ್ಕೃತಿ, ಕಲೆ, ನೃತ್ಯ, ವಾದ್ಯ, ಹರಿಕಥೆ - ಎಲ್ಲವುಗಳಿಗೂ ಅವಕಾಶ ; ಮತ್ತು ಪ್ರೋತ್ಸಾಹವಿತ್ತು.

ಮೈಸೂರು - ಮಹಾರಾಜರು ತಮ್ಮ ಅರಮನೆಯ ಬ್ಯಾಂಡು - ವಾಲಗದ ತಂಡವನ್ನೇ ಕಳುಹಿಸಿದ್ದರು. ಇಪ್ಪತ್ತೆರಡು ಜನರುಳ್ಳ ಈ ತಂಡ ತನ್ನ ಅದ್ಭುತ ಕಾರ್ಯಕ್ರಮದಿಂದ ಎಲ್ಲರ ಗಮನ ಸೆಳೆಯಿತು.

ಅತ್ಯದ್ಭುತವಾದ ವಿದ್ಯುದ್ದೀಪಾಲಂಕಾರವಿತ್ತು!

ಮಹಾನಡಾವಳಿಯ ಕೊನೆಯ ಏಳು ದಿನಗಳಲ್ಲೂ ಧಾರ್ಮಿಕ ಕಾರ್ಯಗಳು - ಧಾರ್ಮಿಕ ಉಪನ್ಯಾಸಗಳು ನಡೆದುವು. ಮೂಡಬಿದ್ರೆ, ಕಾರ್ಕಳ, ಹೊಂಬುಜ, ಸಿಂಹನಗದ್ದೆ, ಬೆಳ್ಳೂರು ಮಠಗಳ ಮಠಾಧೀಶರುಗಳು ಆಗಮಿಸಿ, ಧಾರ್ಮಿಕ ಉಪನ್ಯಾಸ - ಅನುಗ್ರಹ ಪ್ರವಚನ ಮಾಡಿದರು.

ಕಾರ್ಕಳ, ಮಂಗಳೂರು, ಮೂಡಬಿದ್ರೆಗಳ ಪುರೋಹಿತ ವರ್ಗದವರು ಬಂದು ಈ ಮಹಾ ನಡಾವಳಿಯ ಧಾರ್ಮಿಕ ಕಾಂಡಗಳನ್ನು ನೆರವೇರಿಸಿದರು. ಎಲ್ಲವೂ ಸಾಂಗೋಪಾಂಗವಾಗಿ ನಡೆದುವು.

ಫೆ. 15ರಂದು ವಿಮಾನ ಶುದ್ಧಿ, ನಾಂದೀ ಮಂಗಲ ಹಾಗೂ ದೇವರಿಗೆ 24 ಕಲಶಗಳ ಅಭಿಷೇಕ ನಡೆದುವು.

ಫೆ. 16ರಂದು ಕಲಕುಂಡ ಯಂತ್ರಾರಾಧನೆ, ಯಕ್ಷ ಪ್ರತಿಷ್ಠೆ ಹಾಗೂ ದೇವರಿಗೆ 24 ಕಲಶಗಳಿಂದ ಅಭಿಷೇಕ.

ಫೆ. 17ರಂದು ಶಾಂತಿ ಚಕ್ರಯಂತ್ರಾರಾಧನೆ ಮತ್ತು 54 ಕಲಶಗಳಿಂದ ಅಭಿಷೇಕ.

ಫೆ. 18ರಂದು ಯಾಗ ಮಂಡಲಾರಾಧನೆ ಹಾಗೂ 108 ಕಲಶ ಅಭಿಷೇಕ.

ಫೆ. 19ರಂದು ಚಂದ್ರನಾಥ ಸ್ವಾಮಿಯ ಜನ್ಮಾಭಿಷೇಕ ಕಲ್ಯಾಣ. ಅಂದು ಬೀಡಿನಿಂದ ನೆಲ್ಯಾಡಿ ಬೀಡಿನ ವರೆಗೆ ಮೆರವಣಿಗೆ ನಡೆಯಿತು. ಮಂಜಯ್ಯ ಹೆಗ್ಗಡೆಯವರ ಬಳಿಕ ಧರ್ಮಸ್ಥಳದ ಧರ್ಮಾಧಿಕಾರಿಗಳಾಗಲಿದ್ದ ಶ್ರೀ ಡಿ. ರತ್ನವರ್ಮ ಹೆಗ್ಗಡೆಯವರು ಹಾಗೂ ಧರ್ಮಪತ್ನಿ ಶ್ರೀಮತಿ ರತ್ನಮ್ಮ ಆರ್. ಹೆಗ್ಗಡೆಯವರು ದೇವೇಂದ್ರ - ಶಚಿಯರಾಗಿ ಅಂಬಾರಿ ಹೊತ್ತ ಆನೆಯ ಮೇಲೆ ಆರೂಢರಾಗಿ ಮೆರವಣಿಗೆಯಲ್ಲಿ ಸಾಗಿದರು. ಪಾಂಡುಕ ಶಿಲೆಯಲ್ಲಿ ತೀರ್ಥಂಕರ - ಬಾಲಕನಿಗೆ ಜನ್ಮಾಭಿಷೇಕ ನಡೆಯಿತು. ಇದರ ವೈಶಿಷ್ಟ್ಯಗಳನ್ನು ಹೊಂಬುಜದ ಸ್ವಾಮಿಯವರು ಬಹು - ಸುಂದರವಾಗಿ ವರ್ಣಿಸಿದರು.

ಫೆ. 20ರಂದು ದೇವರಿಗೆ 504 ಕಲಶಗಳ ಅಭಿಷೇಕ. ಬೆಳ್ಳಿಯ ರಥದಲ್ಲಿ ಅಗ್ರೋದಕದ ಮೆರವಣಿಗೆ. ನೆಲ್ಯಾಡಿ ಬೀಡಿನ ಎದುರುಗಡೆ ಭಗವಂತನಿಗೆ ಸಮವಸರಣ ಪೂಜೆ, ಸಂಗೀತ, ನೃತ್ಯ, ಪ್ರವಚನ ನಡೆದುವು.

ಇವೆಲ್ಲವುಗಳಿಗಿಂತ ಮಿಗಿಲಾದ ಕಾರ್ಯಕ್ರಮವೆಂದರೆ ಅಂತಿಮ ದಿನದಂದು ಬಹುಸಂಭ್ರಮದಿಂದ ನಡೆದ ಸೂರೆ ; ಅದು ವೈಭವದ ಸಂಪತ್ತಿನ ಸೂರೆಯಾಗಿತ್ತು.

ಧರ್ಮಸ್ಥಳದ ನೆಲ್ಯಾಡಿ ಬೀಡಿನ ಸಮೀಪದಲ್ಲೇ - ಶ್ರೀ ಚಂದ್ರನಾಥ ಸ್ವಾಮಿ ಬಸದಿಯೆದುರಿನಲ್ಲಿ ಒಂದು ಚಪ್ಪರ ಹಾಕಲಾಗಿತ್ತು. ಆ ಚಪ್ಪರದಡಿಯಲ್ಲಿ ಎಲ್ಲಾ ಸೂರೆಗೆಂದು ಇರಿಸಿದ ಸಾಮಗ್ರಿಗಳು, ನವರತ್ನಾಭರಣ ತುಂಬಿದ ಸಾಮಗ್ರಿಗಳು, ಕುರ್ಜಾ, ಪವನು, ಬೆಳ್ಳಿ, ಚಿನ್ನದ ಮಿಶ್ರಿ, ಕಡೆಯುವ ಕಲ್ಲು, ಬೀಸುಗಲ್ಲು, ಈಳಿಗೆ ಮಣೆ, ಮೆಟ್ಟುಗತ್ತಿ, ಸೌಟು, ಗುಡಾಣ, ಬಿಂದಿಗೆ, ಸೀರೆ, ಧೋತಿ,ವಸ್ತ್ರ, ಶಾಲು,

ಹೋಳಿಗೆ - ಲಾಡು, ಹಸು - ಕರು ಇತ್ಯಾದಿ, ಒಂದು ಮನೆಗೆ ಬೇಕಾದ ಎಲ್ಲಾ ಸಾಮಗ್ರಿಗಳು. ಯಾರಿಗೆ ಏನು ಬೇಕೋ ಅದನ್ನು ಅವರು ಎತ್ತಿಕೊಳ್ಳಬೇಕು ; ಒಯ್ಯಬೇಕು.

ಆದರೆ ಹಾಗೆ ಒಯ್ಯುವಾಗ, ಯಾರಾದರೂ ಅಡ್ಡಬಂದು, ಕಿತ್ತುಕೊಂಡರೆ ಅದು ಅವನಿಗೇ. ಒಂದು ನಿರ್ದಿಷ್ಟ ಜಾಗದ ವರೆಗೆ ಈ ರೀತಿಯ ಸೆಣಸಾಟ. ಆ ಜಾಗವನ್ನು ತಲುಪಿದಾಗ ಅದು ಯಾರ ಕೈಯಲ್ಲಿದೆಯೋ ಅವನಿಗೇ. ಮತ್ತೆ ಎಳೆದಾಟವಿಲ್ಲ.

ಎಷ್ಟೊಂದು ಗಲಾಟೆ! ಎಂತಹ ನೂಕು - ನುಗ್ಗಾಟ! ಏನು ಜಯ - ಜಯಕಾರದ ಘೋಷಣೆಗಳು!

ಇದೊಂದು ಬಹುದೊಡ್ಡ ಯಜ್ಞವಾಗಿತ್ತು.

ಇದರ ಬಗ್ಗೆ ಸಾಹಿತಿ ಕೆದಂಬಾಡಿ ಜತ್ತಪ್ಪ ರೈ - ಅವರು ಹೀಗನ್ನುತ್ತಾರೆ :-

"ತಮ್ಮ ಸರ್ವಸ್ವವನ್ನೂ ದಾನವನ್ನಾಗಿ ನೀಡಿದ ಮಂಜಯ್ಯ ಹೆಗ್ಗಡೆಯವರು ಎಂತಹ ಮಹಾಪುರುಷರು! ಅವರು ಶ್ರೀ ಚಂದ್ರನಾಥ ಸ್ವಾಮಿ ಬಸದಿಯಲ್ಲಿ ಪ್ರಾರ್ಥನೆಯಲ್ಲಿ ಮುಳುಗಿದ್ದರು ; ಜಪದಲ್ಲಿ ತಲ್ಲೀನರಾಗಿದ್ದರು. ಈ ದಾನಶೂರ, ಸತ್ಯಸಂಧ, ಅಹಿಂಸಾವಾದಿ, ಧರ್ಮಪ್ರಿಯರನ್ನು ಪುರಾಣದ ಯಾವ ಮಹಾವ್ಯಕ್ತಿಗೆ ಹೋಲಿಸಲಿ? ಪುರಾಣ ಪುರುಷರಲ್ಲೂ ಇವರ ಹಂತವನ್ನೇರಬಲ್ಲ ಜನರು ಎಷ್ಟು ಮಂದಿಯಿದ್ದಾರೆ?"

"ಅಷ್ಟು ದಿನಗಳ 'ಮಹಾನಡಾವಳಿ'ಯ ಸಂಭ್ರಮದಲ್ಲಿ ಪಾಲುಗೊಳ್ಳಲೆಂದು ಆಗಮಿಸಿದ ಜನರಿಗೆ ಅನೇಕ ಕಡೆಗಳಲ್ಲಿ ಚಪ್ಪರ ಹಾಕಿ, ಊಟದ ವ್ಯವಸ್ಥೆ ಮಾಡಲಾಗಿತ್ತು. ಅವರ ಪೈಕಿ, ಮಂಗಳೂರಿನಿಂದ ಬಂದಿದ್ದ ಪೋಲಿಸ್ ತಂಡದವರಿಗಾಗಿ ಒಂದೆಡೆ ಪ್ರತ್ಯೇಕ ಊಟದ ವ್ಯವಸ್ಥೆ ಮಾಡಲಾಗಿತ್ತು. ಅಲ್ಲಿ ಕೊನೆಗೆ ಉಳಿದ ಉಪ್ಪು - ಮೆಣಸು ಮೊದಲಾದ ಸಾಮಗ್ರಿಗಳನ್ನು ಅನುಮತಿ ಪಡೆಯದೆಯೇ ಅವರು ತಮ್ಮೊಂದಿಗೆ ಮಂಗಳೂರಿಗೆ ಒಯ್ದರಂತೆ. ಆದರೆ ಅಲ್ಲಿ ಮಂಗಳೂರಲ್ಲಿ ಅಡುಗೆ ಮಾಡುವಾಗ ಅವರ ಮನೆಯ ಸ್ತ್ರೀಯರಿಗೆ ಮೈ - ಕೈ - ಕಾಲುಗಳು ಕಂಪಿಸಲಾರಂಭಿಸಿದುವು. ಕೆಲವರು ಅನ್ನ ಬೇಯಿಸುವಾಗ, ಅಲ್ಲಿ ಚೇಳುಗಳು, ಕೊಂಡಿ ಚೇಳುಗಳು ಕಾಣಿಸಿಕೊಳ್ಳಲಾರಂಭಿಸಿದುವಂತೆ.

ಇದೊಂದು ಪವಾಡ ; ಅದ್ಭುತ ಚಮತ್ಕಾರವೆನ್ನಬಹುದು. ತಕ್ಷಣ ಅವರು ಧರ್ಮಸ್ಥಳಕ್ಕೆ ಬಂದು, ಹೆಗ್ಗಡೆಯವರಿಗೆ ನಮಸ್ಕರಿಸಿ, ಕ್ಷಮೆ ಕೇಳಿದ ಬಳಿಕ ಈ ತೊಂದರೆ ಉಪಶಮನವಾಯಿತಂತೆ."

ಡಾ|| ಕೋಟ ಶಿವರಾಮ ಕಾರಂತರು ಈ ನಡಾವಳಿಯ ಕುರಿತಾಗಿ ಹೀಗೆನ್ನುತ್ತಾರೆ :-

"ನಮ್ಮ ಭಾರತದ ನಿತ್ಯಜೀವನದಲ್ಲಿ, ಸಾರ್ವಜನಿಕ ಕೂಟಗಳಲ್ಲಿ ಧರ್ಮಸ್ಥಳದ ಮಾದರಿಯ ಶಿಸ್ತು, ಸಂಯಮ, ಒಗ್ಗಟ್ಟು ಮೂಡಿಬಂದದ್ದೇ ಆದ ಪಕ್ಷದಲ್ಲಿ, ನಮ್ಮ ನಾಡಿನಲ್ಲಿ ಮಹಾನ್ - ಕಾರ್ಯಗಳನ್ನು ಸಾಧಿಸಲು ಶಕ್ಯವಾದೀತು.

ಮನಸ್ಸಿನ ಕೊಳೆಯನ್ನು ನಿವಾರಿಸಿ, ಅದನ್ನು ನಿರ್ಮಲಗೊಳಿಸಲು ಸಾಧ್ಯ - ಎಂಬುದಕ್ಕೆ ಈ ಉತ್ಸವವೇ ಒಂದು ಸಾಕ್ಷಿ."

ಅವರ ಸಾಹಿತ್ಯ - ಸೇವೆ

ಶ್ರೀ ಮಂಜಯ್ಯ ಹೆಗ್ಗಡೆಯವರಿಗೆ ಲಲಿತಕಲೆಗಳಾದ ಸಂಗೀತ, ಚಿತ್ರ, ನೃತ್ಯ, ನಾಟಕ, ಶಿಲ್ಪ, ವಾಸ್ತುಕಲೆಗಳಂತೆಯೇ ಸಾಹಿತ್ಯಕಲೆಯೂ ಬಹಳ ಪ್ರಿಯವಾಗಿತ್ತು.

ಅವರು ಸ್ವತಃ ಬರೆಹಗಾರರಾಗಿದ್ದರು. ಸಾಹಿತ್ಯ ರಚಿಸುವವರನ್ನು ಬರಮಾಡಿಸಿ, ಅವರಿಂದ ಉಪನ್ಯಾಸ ಮಾಡಿಸುತ್ತಿದ್ದರು. ಸಾಹಿತಿಗಳು, ಧರ್ಮದ ಕುರಿತಾಗಿ ಅಧ್ಯಯನ, ಉಪನ್ಯಾಸ ಮಾಡುವ ಅವರು ವಿಶೇಷ ಪ್ರೋತ್ಸಾಹ ನೀಡಿದರು. ಸಾಹಿತಿಗಳಿಗೆ ವಿಶೇಷವಾದ ಗೌರವ - ಸನ್ಮಾನ ನೀಡಿದರು.

ಶಿವರಾಮ ಕಾರಂತರು, ಅ.ನ. ಕೃಷ್ಣರಾಯರು, ಕೆ.ಎಸ್. ಧರಣೇಂದ್ರಯ್ಯ, ಎರ್ತೂರು ಶಾಂತಿರಾಜ ಶಾಸ್ತ್ರಿ - ಮೊದಲಾದವರು ಪ್ರತಿ ವರ್ಷವೂ ಲಕ್ಷದೀಪೋತ್ಸವಕ್ಕೆ ಬರುತ್ತಿದ್ದರು. ಇವರೊಂದಿಗೆ ಬೆಂಗಳೂರಿಂದ ಸಾಹಿತಿಗಳ ತಂಡವೇ ಆಗಮಿಸುತ್ತಿತ್ತು. ಲಕ್ಷದೀಪೋತ್ಸವದಂಗವಾಗಿ ನಡೆವ ಧಾರ್ಮಿಕ ಸಮ್ಮೇಳನಗಳಲ್ಲಿ ಧರ್ಮ ಮತ್ತು ಸಾಹಿತ್ಯ - ಎರಡು ವಿಷಯಗಳ ಬಗೆಗೂ ಉಪನ್ಯಾಸ ಮಾಡುತ್ತಿದ್ದರು.

ತುಳುನಾಡಿನ ಸಾಹಿತಿಗಳಿಗೆ ಇವರು ವಿಶೇಷ ಉತ್ತೇಜನ ನೀಡಿದರು. ಕವಿಭೂಷಣ ವೆಂಕಪ್ಪ ಶೆಟ್ಟಿ, ಎನ್.ಎಸ್. ಕಿಲ್ಲೆ, ಎಂ.ಆರ್. ಶಾಸ್ತ್ರಿ, ಸೇಡಿಯಾಪು ಕೃಷ್ಣ ಭಟ್, ಮಂಜೇಶ್ವರ ಗೋವಿಂದ ಪೈ, ಬಿ. ಶಂಕರ ಭಟ್, ಉಗ್ರಾಣ ಮಂಗೇಶ ರಾವ್, ಮುಳಿಯ ತಿಮ್ಮಪ್ಪಯ್ಯ, ಹೊಸಬೆಟ್ಟು ರಾಮ ರಾವ್ - ಮೊದಲಾದವರು ಸಮ್ಮೇಳನಗಳಲ್ಲಿ ಪಾಲುಗೊಂಡವರು.

ಅದೇ ರೀತಿ ಕನ್ನಡ ಸಾಹಿತ್ಯದ ದಿಗ್ಗಜಗಳೆನಿಸಿದ ದ.ರಾ. ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ರಂ.ಶ್ರೀ. ಮುಗಳಿ, ವೀ. ಸೀತಾರಾಮಯ್ಯ, ಆಲೂರು ವೆಂಕಟರಾವ್, ಶ್ರೀರಂಗ, ಬೀಚಿ, ಹಂಪನಾ, ಬ್ರಹ್ಮಪ್ಪ - ಮೊದಲಾದವರೂ ಭಾಗವಹಿಸುತ್ತಿದ್ದರು.

ಹೀಗೆ ಬೇರೆ - ಬೇರೆ ಊರಿನ, ಬೇರೆ - ಬೇರೆ ಸಾಹಿತ್ಯ ಪ್ರಕಾರದ ಗಣ್ಯರನ್ನು, ಸಾಹಿತಿಗಳನ್ನು ಅವರು ಗೌರವಿಸಿದರು.

ಇಷ್ಟು ಮಾತ್ರವಲ್ಲದೆ, ಅವರೇ ಸ್ವತಃ ಉತ್ತಮ ವಾಗ್ಮಿಗಳು. ಉತ್ತಮ ಬರೆಹಗಾರರೂ ಕೂಡಾ ಆಗಿದ್ದರು. ಅವರ ಭಾಷಣಗಳ ಸಂಗ್ರಹವನ್ನು ಗಮನಿಸಿದರೆ, ಅವರೆಷ್ಟು ಆಳವಾಗಿ, ಗಂಭೀರವಾಗಿ ವಿಷಯಗಳನ್ನು ಅಧ್ಯಯನ ಮಾಡುತ್ತಿದ್ದರೆಂದು ಅರಿವಾಗುತ್ತದೆ.

ಉದಾಹರಣೆಗೆ ಅವರು ಬರೆದ ಕೆಲವೊಂದು ಕೃತಿಗಳನ್ನು ಪರಿಶೀಲಿಸಲಾಗಿದೆ.

ನನ್ನ ಪೂರ್ವ ವೃತ್ತಾಂತ

ಅವರು ಧರ್ಮಸ್ಥಳದಲ್ಲಿ ಪಟ್ಟಾಭಿಷಿಕ್ತರಾಗಿ 25 ವರ್ಷಗಳಾದಾಗ,1943ನೇ ವರ್ಷದಲ್ಲಿ ರಜತಮಹೋತ್ಸವವೆಂಬ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಅವರನ್ನು ಗೌರವಿಸಲಾಯಿತು. ಆಗ ಸನ್ಮಾನಕ್ಕೆ ಉತ್ತರಿಸುವಾಗ ಹೇಳಿದ ಮಾತುಗಳೇ - ಕನ್ನಡದಲ್ಲಿ ಒಂದು ಕಿರು ಹೊತ್ತಗೆಯಾಗಿ ಪರಿಣಮಿಸಿತು. ನಿಜವಾಗಿ ಇದೊಂದು ಆತ್ಮಕಥಾ ಶೈಲಿಯ ಕೃತಿಯೇ ಆಗಿದೆ.

19 ಪುಟಗಳ ಕನ್ನಡದ ಕೃತಿ - ಒಂದು ಸಣ್ಣ ಹೊತ್ತಗೆ.

ಮಹಾತ್ಮಾ ಗಾಂಧಿಯವರ ಆತ್ಮಕಥೆಯಾದ 'ಸತ್ಯ ಶೋಧನೆ'ಯಂತೆಯೇ ಈ ಕೃತಿಯಿದೆ. ಅವರು ಪ್ರಸ್ತಾವನೆಯಲ್ಲೇ ಹೇಳುತ್ತಾರೆ - ಈ ತರದ ರಜತೋತ್ಸವದ ಆಚರಣೆ ನನಗೆ ಸರಿಯೆನ್ನಿಸುವುದಿಲ್ಲ. ಏಕೆಂದರೆ ಇದೆಲ್ಲವೂ ಪಾಶ್ಚಾತ್ಯರ ಕ್ರಮ - ಎಂದು ಅವರು ಟೀಕಿಸುತ್ತಾರೆ. ಈ ಸನ್ನಿವೇಶದಲ್ಲಿ ನಾವು ಅವರ ನಿರ್ದಾಕ್ಷಿಣ್ಯ ಪ್ರವೃತ್ತಿಯನ್ನು ಅರ್ಥಮಾಡಿಕೊಳ್ಳಬಹುದು.

ಈ ಸಣ್ಣ ಪುಸ್ತಕದಲ್ಲಿ ಅವರ ಜೀವನ ಚರಿತ್ರೆಯಿದೆ. ಅವರ ಬದುಕಿನ ಹಿನ್ನೆಲೆ, ಕ್ಷೇತ್ರದ ಸಂಬಂಧ, ವಿದ್ಯಾಭ್ಯಾಸದ ಕ್ರಮ, ಧರ್ಮಸ್ಥಳ ಕ್ಷೇತ್ರದ ವಿಶೇಷತೆಗಳು, ಅಲ್ಲಿನ ಜನತಾ ಸೇವೆಯ ವಿಚಾರ, ಸಮಾಜಸೇವೆಯ ಕುರಿತಾಗಿ ಬರೆದಿದ್ದಾರೆ. ಇದಲ್ಲದೆ, ಇನ್ನು ಮುಂದಕ್ಕೆ ಮಾಡಬೇಕೆಂದಿರುವ ಏಳು ವಿಧದ ಭವಿಷ್ಯತ್ತಿನ ಕಾರ್ಯಯೋಜನೆಗಳನ್ನೂ (ಮಲೇರಿಯಾ ನಿವಾರಣೆ, ಕೃಷಿಕಾರ್ಯ, ವಿದ್ಯಾಸಂಸ್ಥೆಗಳು, ನಡಾವಳಿ - ಇತ್ಯಾದಿ) ವಿವರಿಸಿದ್ದಾರೆ.

ಅವರು ಈ ಪುಸ್ತಕದಲ್ಲಿ ತಮ್ಮ ಅಂತರಂಗದೊಳಗಿನ ಸಂಗತಿಗಳ ಬಗ್ಗೆ ಹೀಗೆ ಬರೆದಿದ್ದಾರೆ :-

ಪ್ರಕೃತ ನನ್ನ ಪ್ರಾಯ ಮೀರುತ್ತಿದೆ. ಶರೀರ ಮತ್ತು ಮನಸ್ಸಿನ ಶಕ್ತಿ ಕುಂಠಿತವಾಗುತ್ತಿದೆ. ಇನ್ನು ಮುಂದಕ್ಕೆ ಮಿತಿಮೀರಿದ ಪರಿಗ್ರಹಗಳ ಜವಾಬ್ದಾರಿಯ ಪಟ್ಟಾಧಿಕಾರದಲ್ಲಿ ಇದ್ದುಕೊಂಡು ಶ್ರೀ ಸ್ವಾಮಿಯ ಸೇವೆಯನ್ನೂ, ಜನಸೇವೆಯನ್ನೂ ಮಾಡೋಣವೇ? ಅಥವಾ, ಕಡಿಮೆ ಪರಿಗ್ರಹಗಳ ಶಾಂತಜೀವನದಲ್ಲಿ ಶ್ರೀ ಸ್ವಾಮಿಯ ಭಜನೆ ಮಾಡಿಕೊಂಡು ಕಾಲ ಕಳೆಯೋಣವೇ? ಈ ವಿಚಾರಗಳು ನನ್ನ ಮನಸ್ಸನ್ನು ಆಗಾಗ ಕಾಡುತ್ತಿವೆ. ಈ ಪರಿಸ್ಥಿತಿಯಲ್ಲಿ ಶ್ರೀ ಮಂಜುನಾಥ ಸ್ವಾಮಿಯೆ ದಾರಿ ತೋರಿ ನಡೆಸುತ್ತಾರೆ - ಎಂಬ ನಂಬಿಕೆ ನನಗಿದೆ.

ಈ ಪುಸ್ತಕದ ಕೊನೆಯಲ್ಲಿ ಅವರು ಹೀಗನ್ನುತ್ತಾರೆ :-

'ನನಗೆ ಒಳ್ಳೇ ಪುಣ್ಯವಿದ್ದು, ದೈವಾನುಕೂಲವಿದ್ದರೆ ಎಲ್ಲವೂ ಸರಿ ಹೋದೀತು - ಎಂದು ನನ್ನ ನಂಬಿಕೆ. ಉಳಿದುದೆಲ್ಲವೂ ದೈವೇಚ್ಛೆ.'

- ಈ ಮಾತಿನಲ್ಲಿ 'ಅನ್ಯಥಾ ಶರಣಂ ನಾಸ್ತಿ, ತ್ವಮೇವ ಶರಣಂ ಮಮ' - ಎಂಬ ಸಮರ್ಪಣ ಭಾವದ ಸೌಂದರ್ಯವನ್ನೂ ಗಮನಿಸಬಹುದು. ಪ್ರಾಯಶಃ ಭಗವಂತನ ಪೂರ್ಣ ಶರಣಾಗತಿಯ ಭಾವವೇ ಅವರನ್ನು ಮುನ್ನಡೆಸುತ್ತಿತ್ತು.

ಅವರ ತುಳು ಗ್ರಂಥಗಳು

ಶ್ರೀ ಮಂಜಯ್ಯ ಹೆಗ್ಗಡೆಯವರು ತುಳುವಿನಲ್ಲಿ ನಾಲ್ಕು ಪುಸ್ತಕಗಳನ್ನು ಬರೆದಿದ್ದರು. ಪ್ರಾಯಶಃ ಇಂಗ್ಲೀಷು, ಕನ್ನಡ ಭಾಷೆಗಳಲ್ಲಿ ಬರೆಯುವ ಬದಲಿಗೆ ತುಳುವಿನಲ್ಲಿ ಬರೆದರೆ, ತನ್ನ ಪರಿಸರದ ಹೆಚ್ಚು ಜನರನ್ನು ಹೆಚ್ಚು ಸುಲಭವಾಗಿ ತಲುಪಲು ಸಾಧ್ಯ - ಎಂದು ಅವರು ಭಾವಿಸಿರಬೇಕು.

ತುಳುವೆಂದರೆ ಜನಸಾಮಾನ್ಯರ ಸುಂದರ ಭಾಷೆ ; ಸತ್ವಯುತವಾದ ಭಾಷೆ. ಅದು ದೊಡ್ಡ ವಿದ್ವಾಂಸರ ಭಾಷೆಯಲ್ಲ. ಆದ್ದರಿಂದ ಜನಸಾಮಾನ್ಯರ ಹೃದಯವನ್ನು ಸ್ಪರ್ಶಿಸಬೇಕಾದರೆ, ಅವರ ಭಾಷೆಯಲ್ಲೇ ಮಾತಾಡಬೇಕು ; ವ್ಯವಹರಿಸಬೇಕು ಹಾಗೂ ಬರೆಯಬೇಕು - ಎಂದು ಅವರು ಅರ್ಥ ಮಾಡಿಕೊಂಡಿದ್ದರು.

ಮಹಾವೀರ, ಬುದ್ಧ, ಕಬೀರ, ಬಸವಣ್ಣ, ತುಳಸೀದಾಸರು - ಎಲ್ಲರೂ ಅವರವರ ಜನರಿಗೆ ಅರ್ಥವಾಗುವಂತೆ ಹೇಳಬೇಕೆಂದು ಜನಸಾಮಾನ್ಯರ ಭಾಷೆಯನ್ನೇ ಆಶ್ರಯಿಸಿದರು. ಅಂತೆಯೇ ಕ್ರೈಸ್ತ ಪಾದ್ರಿಗಳು ತಮ್ಮ ಧರ್ಮ ಪ್ರಸಾರಕ್ಕಾಗಿ ತುಳುಭಾಷೆಯನ್ನು ಕಲಿತು, ಅಲ್ಲಿಗೆ ಉತ್ತಮ ಸೇವೆ ಸಲ್ಲಿಸಿದರು.

ಅದೇ ರೀತಿಯಲ್ಲಿ ಮಂಜಯ್ಯ ಹೆಗ್ಗಡೆಯವರ ಧೋರಣೆಯೂ ಇತ್ತು. ಅವರಿಗೆ ಕನ್ನಡ - ಇಂಗ್ಲಿಷ್ ಭಾಷೆಗಳಲ್ಲಿ ಸಾಕಷ್ಟು ವಿದ್ವತ್ತು ಇದ್ದರೂ, ಅವರಿಗೆ ಸಂಸ್ಕೃತ - ಹಿಂದಿ ಭಾಷೆಗಳಲ್ಲಿ ಪ್ರೀತಿಯಿದ್ದರೂ, ಅವರು ನಾಲ್ಕು ಪುಸ್ತಕಗಳನ್ನು ತುಳು - ಭಾಷೆಯಲ್ಲಿ ಬರೆದರು. ಅವರು ತುಳುವನ್ನೇ ಆಶ್ರಯಿಸಿದರು. ಅವರು ಬರೆದ ತುಳು ಪುಸ್ತಕಗಳು ಹೀಗಿವೆ :-

(1) ದೇವೆರ್ - (ಪರಮಾತ್ಮ)

(2) ಅಂದೇ ಸ್ವಾಮಿ - (ಹೌದಾ ಸ್ವಾಮಿ) [ಪಾಪ - ಪುಣ್ಯ] ಎಂಚಾ? (ಹೇಗೆ?)

(3) ಜೈನೆರ್ - (ಜೈನರು)

(4) ತುಳು - ನಿತ್ಯವಿಧಿ

ದೇವೆರ್ (ದೇವರು)

ಇದೊಂದು ಸಣ್ಣ ಪುಸ್ತಕ. ಗಾತ್ರದಲ್ಲಿ ಸಣ್ಣದಾಗಿದ್ದೂ, ಬಹು ಗಹನವಾದ ಕೃತಿಯಿದು. ಇದರಲ್ಲಿ 14 ಪುಟಗಳು ಇವೆ. ಆದರೆ ಇಲ್ಲಿ ಆಧ್ಯಾತ್ಮಿಕ ವಿಚಾರಗಳನ್ನು ಸರಳವಾದ ತುಳು ಭಾಷೆಯಲ್ಲಿ ಹೇಳುವ ಪ್ರಯತ್ನ ನಡೆಸಲಾಗಿದೆ. ಭಗವದ್ಗೀತೆ, ಉಪನಿಷತ್ತು, ತತ್ವಾರ್ಥ ಸೂತ್ರ - ಮೊದಲಾದ ಪುಸ್ತಕಗಳಲ್ಲಿ ಕ್ಲಿಷ್ಟವಾಗಿ ಹೇಳಲಾದ ವಿಚಾರಗಳನ್ನು ಈ ಪುಸ್ತಕದಲ್ಲಿ ಸರಳವಾಗಿ ವಿವರಿಸಿದ್ದಾರೆ.

ಅವರ ವಿಷಯ ನಿರೂಪಣೆಯ ರೀತಿ, ಭಾಷಾ ಶೈಲಿ - ಇತ್ಯಾದಿಗಳಿಗೆ ಒಂದು ಉದಾಹರಣೆ ನೋಡೋಣ :-

"ದೇವರು ಹೇಗಿದ್ದಾರೆ? ದೇವರ ಸ್ವರೂಪ ಹೇಗಿದೆ? ದೇವರ ಆಕಾರ ಹೇಗಿದೆ? ದೇವರೆಂದರೆ ಕಲ್ಲೋ? ಮಣ್ಣೋ? ಮರವೋ? ನೀರೋ? ಬೆಂಕಿಯೋ? ಗಾಳಿಯೋ? ಅಥವಾ ದೊಡ್ಡ ವಿಕೃತ ಶಿರಧ ಬೇತಾಳವೋ? ಅಥವಾ ಒಂದು ಭಯಂಕರವಾದ ಭೂತದ ಸ್ವರೂಪವೋ? ಅದು ಯಾವುದೂ ಅಲ್ಲ!

ದೇವರೆಂದರೆ ಪರಮಾತ್ಮನೇ. ದೇವರಿಗೆ ಲೆಕ್ಕವಿಲ್ಲದಷ್ಟು ಹೆಸರುಗಳು. ಹಾಗೆಯೇ ಗುಣಗಳೂ ಇವೆ. ಪರಮಾತ್ಮ ಯಾರು? ಅವನು ಹೇಗಿರುವನು? - ಇದನ್ನು ಸರಿಯಾಗಿ ತಿಳಿದುಕೊಳ್ಳಬೇಕು."

- ಹೀಗೆ ಒಂದು ಪ್ರಸ್ತಾವನೆಯ ಮೂಲಕ ವಿಷಯ ಪ್ರವೇಶ ಮಾಡಿದ ಬಳಿಕ, ಕೇಳಿದ ಪ್ರಶ್ನೆಗಳಿಗೆ ಅವರೇ ಉತ್ತರಗಳನ್ನೂ ನೀಡುತ್ತಾರೆ. ಸಣ್ಣ - ಸಣ್ಣ ವಾಕ್ಯಗಳಲ್ಲಿ ಅವನ್ನು ವಿವರಿಸುತ್ತಾ ಹೋಗುತ್ತಾರೆ. ಆತ್ಮ ಅಂದರೆ ಯಾರು? ಆತ್ಮದ ಪರಿಚಯವನ್ನು ಅವರು ಹೀಗೆ ಕೊಡುತ್ತಾರೆ :-

"ಆತ್ಮವೆಂದರೆ ಒಂದು ಜ್ಞಾನಸಹಿತವಾದ ವಸ್ತು. ಜ್ಞಾನ ಮತ್ತು ಬುದ್ಧಿಯನ್ನು ಹಿಡಿಯಲು, ತಿನ್ನಲು, ಮೂಸಲು, ನೋಡಲು ಹಾಗೂ ಆಲಿಸಲು ಸಾಧ್ಯವುಂಟೇ? ಅದಕ್ಕೆ ಆಕಾರವಿದೆಯೇ? ಅದು

ಕಪ್ಪೇ? ಬಿಳಿಯೇ? ಅದೇನೂ ಅಲ್ಲ. ಆದ್ದರಿಂದ ಜ್ಞಾನ, ಬುದ್ಧಿ ಇರುವ ವಸ್ತುಗಳೇ ಆತ್ಮ. ಇದನ್ನು ಮನಸ್ಸಿನಿಂದ ಮಾತ್ರ ತಿಳಿಯಲು ಸಾಧ್ಯ. ಅಲ್ಲದೆ, ಹಿಡಿಯಲು ನೋಡಲು ಸಾಧ್ಯವಿಲ್ಲ. ಜ್ಞಾನವೆಂಬುದು ಸಣ್ಣ - ದೊಡ್ಡ ಎಲ್ಲಾ ಪ್ರಾಣಿಗಳ ಶರೀರದಲ್ಲೂ ಇದೆ. ಆದ್ದರಿಂದಲೇ ಎಲ್ಲಾ ಜೀವಗಳಿಗೂ ಸುಖದ ಅರಿವು ಇದ್ದೇ ಇದೆ. ಅಂತಹ ಜ್ಞಾನ ಇರುವ ವಸ್ತುವೇ ಆತ್ಮ. ಜೀವಗಳಲ್ಲಿ ಇರುವ ಸುಖ - ದುಃಖಗಳನ್ನು ಅರಿತುಕೊಳ್ಳುವ ವಿಧಾನವೇನೆಂಬುದು ಗೊತ್ತಿದೆಯೇ ?"

ಅದರ ಬಳಿಕ ಪಂಚ - ಇಂದ್ರಿಯಗಳು - ಅಂದರೆ ಮಾನವನ ದೇಹದ ನಾಲಗೆ, ಮೂಗು, ಕಣ್ಣು, ಕಿವಿ, ಚರ್ಮದ ವಿಚಾರ, ಗಿಡ - ವೃಕ್ಷಗಳ ಸುಖ - ದುಃಖದ ವಿಚಾರ. ದುಂಬಿ - ನೊಣಗಳ ವಿಚಾರ, ಐದು ಇಂದ್ರಿಯಗಳಿರುವ ಜೀವಿಗಳ ವಿಚಾರ, ಏಕೇಂದ್ರಿಯದ ಜೀವಿಗಳ ವಿಚಾರ - ಹೀಗೆ ಎಲ್ಲಾ ವಿಚಾರಗಳನ್ನೂ ಹೇಳುತ್ತಾ ಸಾಗುತ್ತಾರೆ.

ಆತ್ಮ ಜ್ಞಾನಕ್ಕೆ ಕಾರಣ - ನಮ್ಮ ಕರ್ಮ, ಮತ್ತೆ ಸೂಕ್ಷ್ಮವಾದ ಕರ್ಮ - ಮೀಮಾಂಸೆಯನ್ನು ಮಾಡುತ್ತಾರೆ. ಪಾಪ - ಪುಣ್ಯ, ಒಳಿತು - ಕೆಡುಕು - ಹೀಗೆ ಎರಡೂ ಕರ್ಮಗಳ ವಿಚಾರವನ್ನು ತಿಳಿಸುತ್ತಾರೆ.

ಮರ, ಹುಳ, ಇರುವೆ - ದುಂಬಿ, ಮಾನವ - ಹೀಗೆ ಇಂದ್ರಿಯಗಳ ಸಂಖ್ಯೆ ಹೆಚ್ಚಿದಂತೆಯೇ ಆ ಜೀವಿಗೆ ಜ್ಞಾನದ ಪ್ರಮಾಣವೂ ಹೆಚ್ಚು. ಆಧುನಿಕ ವೈಜ್ಞಾನಿಕ ಸಾಧನ - ಉಪಕರಣ - ಸಾಮಗ್ರಿಗಳನ್ನು ಅವರು ಹೀಗೆ ವಿವರಿಸುತ್ತಾರೆ :-

"ನೋಡಿ, ಈಗಲೂ ಬಿಳಿ ಜನಗಳು ಮಾನವರಿಗೆ ಬೇಕಾದ ತರತರದ ಸಾಧನಗಳನ್ನು ತಯಾರಿಸುತ್ತಿರುತ್ತಾರೆ. ವೇಗವಾಗಿ ಸಂಚರಿಸಲು 'ಝುಕ್ - ಝುಕ್' ಶಬ್ದ ಮಾಡುವ ರೈಲುಗಾಡಿ, ಭರ್ರ್... ಭರ್ರ್... ಎಂದು ಸದ್ದು ಮಾಡುವ ಮೋಟಾರು - ಕಾರು, ಡರ್ರ್... ಡರ್ರ್... ಎಂದು ದನಿ ಮಾಡುವ ವಿಮಾನ, ಶೀಘ್ರವಾಗಿ ಸುದ್ದಿ ತಲುಪಿಸಲು ದೂರವಾಣಿ. ಅಷ್ಟು ಮಾತ್ರವಲ್ಲದೆ ರೇಡಿಯೊ ಮೂಲಕ ದೂರದ ಊರುಗಳ ಸಮಾಚಾರಗಳನ್ನೂ, ಸಂಗೀತ ಕಾರ್ಯಕ್ರಮಗಳನ್ನೂ ಕುಳಿತಲ್ಲೇ ಕೇಳಬಹುದಾಗಿದೆ. ಏನಚ್ಚರಿ!

ಇದೇ ರೀತಿಯಲ್ಲಿ ನಮಗೆ ಬೆಳಕು - ವಿದ್ಯುತ್ ಶಕ್ತಿಯಿಂದ ಒಳ್ಳೇ ಬೆಳಕು ಸಿಗುತ್ತದೆ. ವಿದ್ಯುಚ್ಛಕ್ತಿಯಿಂದಲೇ ನೀರನ್ನು ಮಂಜುಗಡ್ಡೆಯನ್ನಾಗಿ ಮಾಡುತ್ತಾರೆ ; ನೀರನ್ನು ಬಿಸಿ ಮಾಡುತ್ತಾರೆ ; ಯಂತ್ರದ ಕೆಲಸ ಮಾಡಲು ಬಳಸುತ್ತಾರೆ. ಇಷ್ಟೆಲ್ಲ ಸುಖ - ಸಾಧನಗಳು ಇದ್ದರೂ, ಇನ್ನೂ ಕೆಲವರಿಗೆ ತೃಪ್ತಿಯಿಲ್ಲ!"

ಜೈನ ಶಾಸ್ತ್ರದಲ್ಲಿನ ಆಧ್ಯಾತ್ಮಿಕ ವಿಚಾರಗಳನ್ನು ವಿವರಿಸುತ್ತಾರೆ. ಅವರು ಜ್ಞಾನಗಳ ಬಗ್ಗೆ - ಮತಿಜ್ಞಾನ, ಶ್ರುತಜ್ಞಾನ, ಅವಧಿ - ಜ್ಞಾನ, ಮನಃ ಪರ್ಯಾಯ ಜ್ಞಾನ, ಕೇವಲ ಜ್ಞಾನಗಳ ಬಗ್ಗೆ ವಿವರಣೆ ನೀಡುತ್ತಾರೆ.

ಭಾಷಣದ ಶೈಲಿಯ ಅವರ ಉದ್ಗಾರಗಳನ್ನು ಗಮನಿಸಿ

'ವಾಹ್, ವಾಹ್! ಅದನ್ನು ಸಮುದ್ರದ ಹಾಗೆ, ಇಷ್ಟೇ ದೊಡ್ಡದು ಇದೆ - ಎಂದು ಹೇಳಲು ಸಾಧ್ಯವಿಲ್ಲ. ಇದಕ್ಕೊಂದು ಇತಿ ಮಿತಿ ಇಲ್ಲ. ಲೋಕದ ಒಳ - ಹೊರಗೆ ಇರುವ ವಸ್ತುಗಳೆಲ್ಲವನ್ನೂ ಸದಾ ಅರಿಯುವ ಜ್ಞಾನವೇ ಕೇವಲ ಜ್ಞಾನ. ಈ ಕೇವಲ ಜ್ಞಾನವುದಿಸಿದ ಜೀವರ ಶರೀರವು ಸೂರ್ಯ ಚಂದ್ರರ ಹಾಗೆ ಫಳ - ಫಳ ಎಂದು ಹೊಳೆಯುತ್ತದೆ. ಹೂವಿನ ಹಾಗೆ ಹಗುರವಾಗುತ್ತದೆ. ಅತ್ಯಂತ ಸುಂದರವಾದ ಮುದ್ದು - ದೇಹವಾಗಿ ಅದು ಕಂಗೊಳಿಸುತ್ತದೆ.

ಪುರುಷೋತ್ತಮ, ಪರಮಾತ್ಮ, ಭಗವಂತ, ವಿಷ್ಣು, ಈಶ್ವರ, ಬ್ರಹ್ಮ, ಜಿನೇಶ್ವರ, ತೀರ್ಥಂಕರ - ಎಂದು ಸಾವಿರದೆಂಟು ಹೆಸರುಗಳು ದೇವರಿಗಿವೆ. (ಈ ವಾಕ್ಯದಲ್ಲಿ ಅವರಲ್ಲಿ ಸರ್ವ ಧರ್ಮ ಸಮನ್ವಯದ ದೃಷ್ಟಿ ಮೂಡಿ ಬಂದುದನ್ನು ಗಮನಿಸಿ.)

ಪರಮಾತ್ಮನಿಗೆ ನಮ್ಮ ಹಾಗೆ ಹಸಿವು, ಬಾಯಾರಿಕೆ, ಹೆದರಿಕೆ, ಕೋಪ, ಪ್ರೀತಿ, ಮೋಹ, ಚಿಂತೆ, ವೃದ್ಧಾಪ್ಯ, ರೋಗ, ಪುನರ್ಜನ್ಮ, ಬೆವರು, ಬೇಸರ, ಗರ್ವ, ಆಶ್ಚರ್ಯ, ರತಿ, ನಿದ್ರೆ, ವಿಷಾದ - ಇಂತಹ ಕೆಲವು ದೋಷಗಳೂ ಇರುವುದಿಲ್ಲ. ಅವರೇ ಅರಹಂತರು. ಶರೀರವಿರುವ ದೇವರು.'

- ಹೀಗೆ ಅವರು ಅರ್ಹಂತರ ಸ್ವರೂಪವನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುತ್ತಾರೆ.

ಅದೇ ರೀತಿಯಲ್ಲಿ ತೀರ್ಥಂಕರರ ಸಮವಸರಣದ ವಿಚಾರವನ್ನೂ ಸರಳವಾದ ರೀತಿಯಲ್ಲಿ ತಿಳಿಸಿದ್ದಾರೆ -

'ತೀರ್ಥಂಕರರು, ಸಮವಸರಣದಲ್ಲಿದ್ದು ಭೂಲೋಕದ ಜೀವಿಗಳಿಗೆ ನೀಡಿದ ಉಪದೇಶವೇ ಶಾಸ್ತ್ರ.'

ದೇವರ ಲಕ್ಷಣವನ್ನು ಹೀಗೆ ವಿವರಿಸಿದ್ದಾರೆ -

"ಅವರೇ ದೇವರು; ಪರಮಾತ್ಮನೂ ಅವರೇ. ಆದಿ - ಆರಂಭ, ಮಧ್ಯ, ಅಂತ್ಯ ಇಲ್ಲದ ಸರ್ವಾಂತರ್ಯಾಮಿ."

ಅವರ ಭಾಷೆಯಲ್ಲಿ ಬ್ರಾಹ್ಮಣರ ತುಳುವಿನ ಪ್ರಭಾವವು ಸ್ವಲ್ಪ ಕಾಣಿಸುತ್ತದೆ. 'ಳ' ಕಾರ 'ಣ'ಕಾರದ ಪ್ರಯೋಗಗಳು ಅಧಿಕವಾಗಿವೆ. ಅಲ್ಲದೆ ಅವರ ಬರವಣಿಗೆ ಕೆಲವೊಮ್ಮೆ ಸಂಭಾಷಣೆಯ ಶೈಲಿಯಲ್ಲಿ ಸಾಗುತ್ತದೆ :-

"ನೀವು, ಇಷ್ಟರ ವರೆಗೆ ಹೇಳಿದ ವಿಷಯವನ್ನು ಸರಿಯಾಗಿ ಮನಸ್ಸಿಟ್ಟು ಕೇಳಿ ಅರ್ಥ ಮಾಡಿಕೊಂಡಿರಾ? ಆತ್ಮನಿಗೆ ರೂಪವಿಲ್ಲ ; ಆಕಾರವಿಲ್ಲ. ನಮ್ಮ ಇಂದ್ರಿಯಗಳಿಗೆ ಗೋಚರವಾಗುವಂತಹ ಯಾವುದೇ ಚಿಹ್ನೆಗಳೂ ಇಲ್ಲ - ಎಂದು ತಿಳಿಯಬಹುದಲ್ಲವೇ?"

ಕರ್ಮ - ಸಿದ್ಧಾಂತಗಳ ಬಗ್ಗೆ ಬಹು ಸುಂದರವಾದ ವಿವರಣೆ ನೀಡುತ್ತಾರೆ -

"ಕರ್ಮಗಳನ್ನು ಧ್ಯಾನ - ತಪಸ್ಸಿನ ಮೂಲಕ ಸುಟ್ಟು, ನಾಶ ಮಾಡಬೇಕು. ಆತ್ಮನೇ ಪರಮಾತ್ಮನಾಗುವನು. ಆತ್ಮನೇ ಕರ್ಮಗಳನ್ನು ತೊರೆದು ಪರಮಾತ್ಮನಾಗುವನು."

ಸುಖ - ದುಃಖ, ಸಂಪತ್ತು - ವಿಪತ್ತು, ಬೆಳ್ಳಿ - ಬಂಗಾರ, ಜನ್ಮ - ಪುನರ್ಜನ್ಮ ಇತ್ಯಾದಿ ಅನೇಕ ವಿಷಯಗಳನ್ನು ವಿವರಿಸುತ್ತಾರೆ.

ಧ್ಯಾನದ ವಿಚಾರವೂ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಬಹುಮುಖ್ಯವಾದ ಸಂಗತಿಯಾಗಿದೆ. ಅವರು ಧ್ಯಾನದ ಮೂಲವನ್ನೇ ವಿವರಿಸುತ್ತಾರೆ :-

"ನನ್ನಲ್ಲಿ ಅನಂತ ಸುಖ, ಅನಂತ ಶಕ್ತಿ, ಅನಂತ ದರ್ಶನ, ಅನಂತ ಜ್ಞಾನವೂ ಇದ್ದೇ ಇದೆ. ಆದರೆ ಈ ಕೆಟ್ಟ ಕರ್ಮದಿಂದಾಗಿ ನನಗೆ ಬೇರೆ - ಬೇರೆ ಜನ್ಮಗಳು ದೊರೆತವು. ಈಗ ದೊರೆತ ಮಾನವ ಜನ್ಮವೂ ಸ್ವಲ್ಪ ಸಮಯದ ಬಳಿಕ ನಾಶವಾಗಲಿದೆ. ಮತ್ತೆ ಇನ್ನೊಂದು ಜನ್ಮ ದೊರೆಯಲಿದೆ. ಇದೇ ಈ ಸಂಸಾರದ ಕಷ್ಟವಾಗಿದೆ. ಅಯ್ಯೋ, ಒಮ್ಮೆ ಈ ಕಷ್ಟಗಳ ಸಂಕೋಲೆಯಿಂದ ಪಾರಾಗಿ ಶುದ್ಧ - ಆತ್ಮನಾಗಿ ಬಿಟ್ಟರೆ ನಾನು ಸುರಕ್ಷಿತವಾಗಿರಬಲ್ಲೆ. ಸ್ವಾಮಿ ದೇವರೆ, ನೀವು ಪರಮ ಆತ್ಮನಾಗಿದ್ದೀರಿ. ನಿಮ್ಮ ನೆಲೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು ನನ್ನಲ್ಲಿ ಬುದ್ಧಿಯೆಲ್ಲಿದೆ? ಒಮ್ಮೆ ನನ್ನನ್ನು ಈ ಸಂಸಾರದ ದುಃಖಗಳ ಗಡಿಯನ್ನು ದಾಟಿಸಿ, ನಿಮ್ಮ ಬಳಿಯೇ ಸೇರಿ ಬಿಡುವಂತೆ ಮಾಡಿ ಬಿಡಿ."

- ಇಲ್ಲಿ ದೇವರ ಜತೆಗೆ ಸಾಮೀಪ್ಯ, ಸಾರೂಪ್ಯ ಮತ್ತು ಸಾಯುಜ್ಯ ಪಡೆಯುವ ಆಶೆ - ಅಭಿಲಾಷೆ ಎಷ್ಟೊಂದು ಸುಂದರವಾಗಿ ಅಭಿವ್ಯಕ್ತಗೊಂಡಿದೆ! ಎಂಬುದನ್ನು ಗಮನಿಸಿ :-

"ನನ್ನನ್ನು ನಿಮ್ಮ ಹಾಗೆಯೇ ಮಾಡಿರಿ. ಅದಕ್ಕಾಗಿ ನಾನು ಯಾರಲ್ಲೂ ಕೋಪ, ಮೋಸ, ಕೆಟ್ಟ ಕಾರ್ಯ ಮಾಡುವುದಿಲ್ಲ. ಯಾರಿಗೂ, ಏನಾದರೂ ತಿಳಿದೋ, ತಿಳಿಯದೆಯೋ ವಿರೋಧ, ಕೆಡುಕು ಮಾಡಿದ್ದರೆ ಆ ಜೀವಗಳು ನನಗೆ ಕ್ಷಮೆ ಕೊಡಲಿ. ನಾನು ಅವುಗಳನ್ನು ಎಲ್ಲವನ್ನೂ ಕ್ಷಮಿಸುತ್ತೇನೆ. ಎಲ್ಲಾ ಜೀವಗಳಲ್ಲೂ ಕರುಣೆ, ದಯೆ, ಪ್ರೀತಿಯಿಂದ ಇರುತ್ತೇವೆ. ನನ್ನ ಮನಸ್ಸು ಯಾವಾಗಲೂ ಶಾಂತಿಯಿಂದ ಇರಲಿ ; ಆನಂದದಿಂದ ಇರಲಿ ; ಧೈರ್ಯದಿಂದಿರಲಿ - ನನ್ನ ಆತ್ಮವು ಯಾವಾಗಲೂ ಇದೇ ರೀತಿಯಲ್ಲಿ ದೇವರಂತೆ ಶಾಂತವಾಗಿರಲಿ. ಈ ರೀತಿ ಸದಾ ದೇವರ ಪೂಜೆ ಮಾಡುತ್ತಾ, ಧ್ಯಾನ ಮಾಡುತ್ತಾ, ಹಾಗೂ ಸೇವಾನಿಷ್ಠೆಯಲ್ಲಿದ್ದರೆ, ನಾವು ಕೂಡಾ ದೇವರ ಸ್ಥಾನವನ್ನು ಸೇರಲು ಸಾಧ್ಯ."

- ಎಷ್ಟೊಂದು ಸುಂದರವಾದ ವಿವರಣೆ! 'ಸಾಮಯಿಕ - ಭಾವ'ಗಳನ್ನು ಇದಕ್ಕಿಂತ ಚೆನ್ನಾಗಿ ವಿವರಿಸಲು ಸಾಧ್ಯವೇ? ಅಸಾಧ್ಯವೆಂದೇ ಹೇಳಬಹುದು. ಮುಂದಕ್ಕೆ ರತ್ನತ್ರಯಗಳ ವಿವರಣೆಯನ್ನು ಸ್ವಲ್ಪ ಗಮನಿಸೋಣ :-

"ದೇವರು, ಗುರುಗಳು ಮತ್ತು ಶಾಸ್ತ್ರಗಳ ಬಗ್ಗೆ ಒಳ್ಳೆಯ ನಂಬಿಕೆ, ಒಳ್ಳೆಯ ಜ್ಞಾನ, ಒಳ್ಳೆಯ ನಡವಳಿಕೆ - ನನ್ನಲ್ಲಿರುವಂತೆ ದೇವರಲ್ಲಿ ಬೇಡಿಕೊಳ್ಳುತ್ತೇನೆ. ಇದುವೇ ಸಮ್ಯಗ್ - ದರ್ಶನ, ಸಮ್ಯಕ್ - ಜ್ಞಾನ ಮತ್ತು ಸಮ್ಯಕ್ - ಚಾರಿತ್ರ."

ಜೈನ ಶ್ರಾವಕರಿಗೆ ಅತಿ ಮುಖ್ಯ ವಿಚಾರವಾದ ಪಂಚ ನಮಸ್ಕಾರ - ಮಂತ್ರದ ವಿವರಣೆಯನ್ನು ಇಲ್ಲಿ ಕೊಟ್ಟಿದ್ದಾರೆ -

ಓಂ ಣಮೋ ಅರಹಂತಾಣಂ. ಣಮೋ ಸಿದ್ಧಾಣಂ. ಣಮೋ
ಆಯಿರಿಯಾಣಂ. ಣಮೋ ಉಪಜ್ಝಾಯಾಣಂ. ಣಮೋ ಲೋಏ
ಸವ್ವಸಾಹೂಣಂ - ಎಂಬ ಪಂಚನಮಸ್ಕಾರ ಮಂತ್ರದ ವಿವರಣೆ ಹೃದಯಸ್ಪರ್ಶಿಯಾಗಿದೆ.

ಇದೇ ಪ್ರಸಂಗದಲ್ಲಿ - ನಿತ್ಯವೂ ನಾವು ಏನು ಮಾಡಬೇಕು? ಎಂದು ನೀವು ಕೇಳಬಹುದು - ಎಂದು ಪ್ರಶ್ನೆಯನ್ನು ಕಲ್ಪಿಸಿ, ಅವರೇ ಉತ್ತರ ನೀಡುವ ಶೈಲಿ ವಿಶಿಷ್ಟವಾದುದುದು. ಗೃಹಸ್ಥರಿಗೆ ಮಾರ್ಗದರ್ಶನ ನೀಡಲೆಂದು ನಿತ್ಯಕ್ರಿಯೆಗಳ ಬಗ್ಗೆ ಚರ್ಚಿಸುತ್ತಾರೆ -

"ನಮ್ಮೆಲ್ಲರಿಗೂ ದೊಡ್ಡ - ದೊಡ್ಡ ವ್ರತ - ಉಪವಾಸ - ತಪಸ್ಸು ಮಾಡಲು ಸಾಧ್ಯವಾಗದಿದ್ದರೂ, ಬೆಳಗ್ಗೆದ್ದು ಕೈ - ಕಾಲು - ಮುಖ ತೊಳೆದು, ಬಟ್ಟೆ ಬದಲಿಸಿ, ಬಸದಿಯಲ್ಲಿ ಅಥವಾ ಮನೆಯೊಳಗೆ ಇರುವ ಜಿನಬಿಂಬದೆದುರು - ಇಲ್ಲವೆಂದಾದರೆ ಎಲ್ಲಿಂದಾದರೂ ಒಂದು ಬಿಂಬವನ್ನು

ತಂದಿರಿಸಿಕೊಳ್ಳಬೇಕು ; ಆ ಬಿಂಬದೆದರು ನಿಂತು ಕೈಮುಗಿದು, ದೇವರ ಸ್ವರೂಪವನ್ನು ಸ್ಮರಿಸಿ, ಹೂವಿಟ್ಟು, 'ಸ್ವಾಮಿ ಭಗವಂತನೆ, ನನ್ನನ್ನು ರಕ್ಷಿಸಿರಿ. ನನ್ನ ಕಷ್ಟಗಳಿಗೆ ಪರಿಹಾರವನ್ನು ಒದಗಿಸಿ' - ಎಂದು ಪಂಚನಮಸ್ಕಾರ ಮಂತ್ರವನ್ನು ಕನಿಷ್ಠ ಪಕ್ಷ 54 ಸಲವಾದರೂ ಜಪಿಸಬೇಕು."

- ಇಲ್ಲಿಯ ಮಾತುಗಳಲ್ಲಿ 'ಅನ್ಯಥಾ ಶರಣಂ ನಾಸ್ತಿ, ತ್ವಮೇವ ಶರಣಂ ಮಮ' - ಎಂಬ ಭಾವನೆಯು ಎಷ್ಟು ಚೆನ್ನಾಗಿ ಅಭಿವ್ಯಕ್ತಿಗೊಂಡಿದೆ!

ಗೃಹಸ್ಥರು ತಮ್ಮ ಪ್ರತಿನಿತ್ಯದ ಕರ್ತವ್ಯಕ್ಕೆ ಹೇಗೆ ಹೋಗಬೇಕು - ಎಂಬುದನ್ನು ತಿಳಿಸುತ್ತಾರೆ :-

"ಬಳಿಕ ನಮ್ಮ ಕೆಲಸಗಳಿಗೆ ನಾವು ಹೋಗಬಹುದು. ಮಧ್ಯಾಹ್ನ ಕೆಲಸದಿಂದ ಬಂದ ಮೇಲೆ ಸಂಧ್ಯಾವಂದನೆ ಮಾಡಬೇಕು. ದೇವರೆದುರು ಸಂಕ್ಷೇಪವಾಗಿಯಾದರೂ ಮಾಡಲೇಬೇಕು. ಕತ್ತಲೆಗೂ ದೇವರೆದುರು ದೀಪವುರಿಸಿ, ಹೂವಿಟ್ಟು, ಹಾಲಿರಿಸಿ, ಕೈಮುಗಿದು, ಜಪ ಮಾಡಬೇಕು. ಹೀಗೆ ಮಾಡುವಾಗ ನಮಗೆ ಬರುವ ಕಷ್ಟಗಳು ದೂರವಾಗುವವು. ಸಂಪತ್ತಿನ ಅಭಿವೃದ್ಧಿಯಾಗುವುದೂ ಖಂಡಿತ!"

ಇದೇ ಸಂದರ್ಭದಲ್ಲಿ ಕಪಟ - ಧ್ಯಾನ, ತೋರಿಕೆಯ ಜಪದ ವಿಚಾರದ ಬಗೆಗೂ ಎಚ್ಚರಿಸುತ್ತಾರೆ :-

ಇಷ್ಟು ಮಾತ್ರವಲ್ಲದೆ, ಜನಿವಾರವನ್ನು ಸುಮ್ಮನೆ ಕೈಬೆರಳಿಗೆ ಸೇರಿಸಿ, ಮಣ - ಮಣ ಮಂತ್ರ ಹೇಳುತ್ತಾ, ಆಚೆ - ಈಚೆ ನೋಡುತ್ತಾ, ನಡು - ನಡುವೆ ಮಾತಾಡುತ್ತಾ, ಹೇಗಾದರೊಮ್ಮೆ ಜಪ ಮುಗಿಸಿ ಎದ್ದರೆ ಅದು ಪ್ರಯೋಜನಕಾರಿಯಾಗದು. ಇದು ಖಂಡಿತ."

- ಇನ್ನೂ ಒಂದು ಸುಂದರವಾದ ವಿಶ್ಲೇಷಣೆ ಹೀಗಿದೆ :-

"ಭೂತಗಳಿಗೆ ಕೈಮುಗಿಯಬಹುದು. ಆದರೆ ದೇವರ ಹಾಗೆ ಭಕ್ತಿ, ಧ್ಯಾನ, ಪೂಜೆ - ಮಾಡಬೇಕಾಗಿಲ್ಲ" - ಎಂದು ಅವರು ಹೇಳುತ್ತಾರೆ.

'ನಮ್ಮಂತೆ ನನ್ನನ್ನೂ ಮಾಡಿ' ಎಂದು ದೇವರಲ್ಲಿ ನಾವು ಕೇಳಿಕೊಳ್ಳಬಹುದು. ಆದರೆ ಭೂತಗಳೊಡನೆ ಈ ರೀತಿ ಕೇಳಿಕೊಳ್ಳಬಾರದು - ಎಂದು ಅವರು ನಮ್ಮನ್ನು ಎಚ್ಚರಿಸುತ್ತಾರೆ.

ರಾತ್ರೆಯಲ್ಲಿ ತಿನ್ನಬಾರದು. ನೀರನ್ನು ಸೋಸಿಯೇ ಕುಡಿಯಬೇಕು

- ಹೀಗೆಲ್ಲಾ ಹೇಳಿ, ಗೃಹಸ್ಥರು ಯಾವ - ಯಾವ ನೋಂಪಿಗಳನ್ನು ಮಾಡಬೇಕೆಂದೂ ವಿವರಿಸುತ್ತಾರೆ.

ಈ ಪುಸ್ತಕದ ಕೊನೆಯಲ್ಲಿ ತುಳುವಿನಲ್ಲಿ ಈ ಪುಸ್ತಕವನ್ನು ಬರೆದುದರ ಉದ್ದೇಶವನ್ನು ಹೇಳಿದ್ದಾರೆ

"ಈ ಪುಸ್ತಕವನ್ನು ನೀವು ಎರಡೆರಡು ಸಲ ಸರಿಯಾಗಿ ಓದಿ, ತಿಳಿದುಕೊಳ್ಳಲು ಪ್ರಯತ್ನಿಸಬೇಕು. ಓದು - ಬರೆಹ ತಿಳಿಯದವರಿಗೋಸ್ಕರ ಚೆನ್ನಾಗಿ ಅರ್ಥವಾಗುವಂತೆ ಓದಿ ಹೇಳಬೇಕು. ತಿಳಿಯಿತೇ? ವಿಷಯ ತುಸು ಕಷ್ಟವೆನಿಸಿದರೂ, ಎರಡೆರಡು ಸಲ ಓದುವಾಗ ಅರ್ಥವಾಗುತ್ತದೆ. ಸ್ವಾಮಿ ದೇವರೇ, ನಮಸ್ಕಾರ"

ಆಧ್ಯಾತ್ಮಿಕ ವಿಷಯಗಳನ್ನು ಒಳ್ಳೆಯ ಶಿಕ್ಷಣ, ಓದು - ಬರೆಹ ಅರಿತವರು ಕನ್ನಡದಲ್ಲಿ, ಇಂಗ್ಲೀಷ್ - ಹಿಂದಿ - ಸಂಸ್ಕೃತ - ಭಾಷೆಗಳಲ್ಲಿ ಓದಿ ತಿಳಿಯಲು ಸಾಧ್ಯ. ಆದರೆ ಈ ಪುಸ್ತಕದ ಉದ್ದೇಶ - ಅಕ್ಷರ ಜ್ಞಾನವಿಲ್ಲದ ಜನರ ಕಿವಿಗೆ, ತನ್ಮೂಲಕ ಅವರ ಮನಸ್ಸಿಗೆ ಧಾರ್ಮಿಕ ವಿಚಾರಗಳು ತಲಪುವಂತಾಗಬೇಕೆಂಬುದೇ ಆಗಿತ್ತು.

ಕಬ್ಬಿಣದ ಕಡಲೆಯಂತಿರುವ ಆಧ್ಯಾತ್ಮಿಕ ವಿಚಾರಗಳನ್ನು ಜನಸಾಮಾನ್ಯರಿಗಾಗಿ ತುಳುನಾಡಿನ ಹಲಸಿನ ಹಣ್ಣಿನಂತೆ ಮೆದುಗೊಳಿಸಿ, ತಿಳಿಯಪಡಿಸುವುದೇ ಈ ಪುಸ್ತಕದ ಉದ್ದೇಶ.

ಓದು - ಬರೆಹ ತಿಳಿದವರು ಸೇ. 10ಕ್ಕಿಂತಲೂ ಕಡಿಮೆಯಿರುವಾಗ ತುಳುನಾಡಿನ ಜನಸಾಮಾನ್ಯರಿಗೆ ಸುಶಿಕ್ಷಿತ ಜನರು ಈ ಪುಸ್ತಕವನ್ನು ಗಟ್ಟಿಯಾಗಿ ಓದಿದರೆ, ಓದು ಬರೆಹವಿಲ್ಲದ ಬಡಪಾಯಿಗಳು ಅದನ್ನು ಕೇಳಿಯೇ ಅರ್ಥ ಮಾಡಿಕೊಳ್ಳಬಲ್ಲರು. ಹಾಗೆಂದೇ ಅವರು ಈ ಪುಸ್ತಕವನ್ನು ಬರೆದರು. ಸರಳ ಭಾಷೆಯಲ್ಲಿ ಬರೆದರು. ನಮ್ಮ ಜನತೆ ಬಾಳಲಿ ; ನಮ್ಮ ಜನರು ಎದ್ದು ನಿಲ್ಲುವಂತಾಗಲಿ; ಅವರು ಉದ್ಧಾರ ಹೊಂದಲಿ - ಎಂಬ ಸದಾಶಯದಿಂದಲೇ ಈ ಪುಸ್ತಕವನ್ನು ಇಷ್ಟು ಚೆನ್ನಾಗಿ ಬರೆದರು.

ಹೌದಾ ಸ್ವಾಮಿ, ಪಾಪ - ಪುಣ್ಯ - ಹೇಗೆ?

ಇದು ಇನ್ನೊಂದು ಕೃತಿ. ಧಾರ್ಮಿಕ ವಿಚಾರಗಳ ಬಗೆಗೇ ಇನ್ನೊಂದು ತರದ ಶೈಲಿಯಲ್ಲಿ ಬರೆದ ಪುಸ್ತಕ.

ಧಾರ್ಮಿಕ ವಿಚಾರಗಳನ್ನು ನಾಟಕೀಯ ಶೈಲಿಯಲ್ಲಿ ಬರೆದು, ಜನರಿಗೆ ಇನ್ನಷ್ಟು ಆಕರ್ಷಕ ರೀತಿಯಿಂದ ತಿಳಿಸುವ ಉದ್ದೇಶ ಅವರದಾಗಿತ್ತು.

ಜಿನ್ನು ಬಂಗರು ಮತ್ತು ದೇವರಾಜ ಶಾಸ್ತ್ರಿಗಳು ಸೇರಿ ಈ ತರದ ಸಂಭಾಷಣೆಯನ್ನು ನಡೆಸುತ್ತಾರೆ. ವ್ಯಂಗದ ಶೈಲಿಯಲ್ಲಿ ಈ ಸಂಭಾಷಣೆ ಸಾಗುತ್ತದೆ.

ನಮಸ್ಕಾರ ಮಾಡುವುದು, ಬಾಯಾರಿಕೆ ಕೇಳುವುದು, ಸುಖ - ದುಃಖವನ್ನು ವಿಚಾರಿಸುವುದು - ಇವೆಲ್ಲವೂ ತುಳುನಾಡಿನಲ್ಲಿ ಪ್ರಚಲಿತವಾಗಿರುವ ಸಂಸ್ಕಾರ - ಸಂಪ್ರದಾಯಗಳು. ಇದರಿಂದ ಆ ಕಾಲದ ಗೃಹಸ್ಥರ ಕರ್ತವ್ಯ, ಆಚಾರ - ವಿಚಾರ, ದಾನ - ಧರ್ಮ - ಮೊದಲಾದ ಎಲ್ಲಾ ವಿಚಾರಗಳೂ ಇಲ್ಲಿ ಅಭಿವ್ಯಕ್ತಿ ಪಡೆದಿವೆ.

ದೇವರಾಜ ಶಾಸ್ತ್ರಿಗಳ ಮನೆಯಲ್ಲಿ ನೋಂಪಿಯ ಉದ್ಯಾಪನೆ ನಡೆಯಲಿದೆ - ಎಂದು ತಿಳಿದು ಜಿನ್ನು ಬಂಗರು ನಾಲ್ಕು ಕುಡ್ತೆ (ಸುಮಾರು ಮುಕ್ಕಾಲು ಲೀಟರಿನಷ್ಟು) ತುಪ್ಪವನ್ನು ಒಂದು ಪಾತ್ರೆಯಲ್ಲಿ ಹಾಕಿ ತಂದಿದ್ದರು. ನೋಂಪಿ - ಎಂದರೆ ವ್ರತ, ಆರಾಧನೆ, ದೇವರ ಕೆಲಸ. 'ಇಂತಹ ಪುಣ್ಯದ ಕಾರ್ಯಕ್ಕೆ ನೆರವಾಗುವುದು ಒಂದು ಪುಣ್ಯದ ಕಾರ್ಯ' - ಹಾಗೆಂದು ತಿಳಿದು ಬಂಗರು ತುಪ್ಪ ತಂದಿದ್ದರು.

ದೇವರಾಜ ಶಾಸ್ತ್ರಿಗಳು ಜಿನ್ನು ಬಂಗರೊಡನೆ ಪ್ರಶ್ನಿಸಿದರು -

'ನಿಮ್ಮ ಊರಲ್ಲಿ ತುಪ್ಪ ರೂಪಾಯಿಗೆ ಎಷ್ಟು ಕುಡ್ತೆ ಸಿಗತ್ತೆ?'

- ಇಂದಿಗೆ ಈ ಪ್ರಶ್ನೆಯನ್ನು ಕೇಳಿದಾಗ ನಮಗೆ ನಗು ಬರಬಹುದು. ಏಕೆಂದರೆ - ಇಂದಿಗೆ 'ನೂರು ರೂಪಾಯಿಗೆಷ್ಟು ಕುಡ್ತೆ?' ಎಂದು ಕೇಳಬೇಕಾದ ಕಾಲ ಬಂದಿದೆ. ಆದರೆ, ಆಗ 'ರೂಪಾಯಿಗೆಷ್ಟು ಕುಡ್ತೆ?' ಎಂಬ ಪ್ರಶ್ನೆ ಕೇಳುತ್ತಿದ್ದರು!

ಇನ್ನು ಮುಂದಕ್ಕೆ "ಸಾವಿರ ರೂಪಾಯಿಗೆಷ್ಟು ಕುಡ್ತೆ ತುಪ್ಪ?" - ಎಂದು ಪ್ರಶ್ನೆ ಕೇಳುವ ದಿನಗಳೂ ಬರಬಹುದು.

ಜಿನ್ನು ಬಂಗರು - 'ಬಹಳ ತುಟ್ಟಿ ಸ್ವಾಮಿ!' - ಎಂದು ಸಂಕೋಚವನ್ನು ವ್ಯಕ್ತಪಡಿಸುತ್ತಾರೆ.

- ಇದೆಲ್ಲವನ್ನೂ ಗಮನಿಸಿದಾಗ, ಓದಿದಾಗ, ನಮ್ಮ ತುಳುನಾಡಿನ ಸ್ವಾತಂತ್ರ್ಯ ಪೂರ್ವದ ಜನಜೀವನದ ಸ್ವರೂಪ, ಜನಗಳ ಸಂಸ್ಕೃತಿ - ಇತ್ಯಾದಿಯ ಪರಿಚಯವಿಲ್ಲಿ ದೊರೆಯುತ್ತದೆ.

ಶಾಸ್ತ್ರಿಗಳು ನುಡಿದರು -

"ದೇವರ ಕೆಲಸಕ್ಕೆ ತುಪ್ಪ ಕೊಟ್ಟರೆ, ನಿಮ್ಮ ಪುಣ್ಯವಾದರೂ ದೊರೆಯಬಹುದು"

- ಈ ಮಾತನ್ನು ಕೇಳಿದಾಗ ಜಿನ್ನು ಬಂಗರ ಕುತೂಹಲ ಕೆರಳಿತು. ಅವರು ಕೇಳಿಯೇ ಬಿಟ್ಟರು - 'ಹಾಗಂದರೇನು?

- 'ಒಳ್ಳೆಯ ಕೆಲಸ, ಕೆಟ್ಟ ಕೆಲಸಗಳಿವೆ. ಇದರಿಂದ ಪುಣ್ಯ, ಅದರಿಂದ ಪಾಪ. ಇದೆಲ್ಲ ಏನು?' - ಎಂದು ಅವರು ಪ್ರಶ್ನಿಸಿದರು.

ಒಳ್ಳೆಯದೆಂದರೇನು? ಕೆಟ್ಟವೆಂದರೇನು? - ಇದೆಲ್ಲವನ್ನೂ ದೇವರಾಜ ಶಾಸ್ತ್ರಿಗಳು ಎಳೆ - ಎಳೆಯಾಗಿ ಬಿಡಿಸಿ ವಿವರಿಸಿದರು.

"ನಾನು ನನಗೆ ತಿಳಿದಷ್ಟು ವಿವರಿಸಬಲ್ಲೆ. ನಮ್ಮ ಮನಸ್ಸಿನಲ್ಲಿ ಒಳ್ಳೆಯದೆಂದು ತೋರಿದರೆ, ಅದು ಇತರರಿಗೂ ಒಳ್ಳೆಯದೇ. ಅದು ಕೆಟ್ಟದೆಂದು ಅನ್ನಿಸಿದರೆ ಇತರರಿಗೂ ಕೆಟ್ಟದೇ ಆಗುತ್ತದೆ. ಕೆಟ್ಟ ಕೆಲಸ ಅಥವಾ ಕೆಟ್ಟ ಭಾವನೆಯಿಂದ ಪಾಪ ಉಂಟಾಗುತ್ತದೆ. ಒಳ್ಳೆಯ ಕೆಲಸ ಅಥವಾ ಒಳ್ಳೆಯ ಭಾವನೆಯಿಂದ ಪುಣ್ಯವುಂಟಾಗುತ್ತದೆ."

ಜಿನ್ನು ಬಂಗರೆಂದರೆ ಅವರೊಬ್ಬ ಗೃಹಸ್ಥ, ಜಿಜ್ಞಾಸು. ಅವರಿಗೆ ತಿಳಿಯಬೇಕೆಂಬ ಹಂಬಲ ಅಪಾರವಾಗಿದೆ. ಅದಕ್ಕಾಗಿ ಅವರು ಮರು ಪ್ರಶ್ನೆ ಹಾಕುತ್ತಾರೆ - ಮಹಾಭಾರತದಲ್ಲಿ ಅರ್ಜುನ ಕೃಷ್ಣನಿಗೆ ಪ್ರಶ್ನೆಗಳನ್ನು ಹಾಕಿದಂತೆ, ಯಕ್ಷನು ಧರ್ಮರಾಜನಿಗೆ ಪ್ರಶ್ನೆಗಳನ್ನು ಕೇಳಿದಂತೆ.

ಆದರೆ, ಪ್ರಾಚೀನ ಪುರಾಣದ ಯಕ್ಷನು 'ಈ ಧರ್ಮರಾಜನಿಗೆ ಎಷ್ಟು ಜ್ಞಾನವಿದೆ?' - ಎಂದು ಪರೀಕ್ಷಿಸುವುದಕ್ಕಾಗಿ ಪ್ರಶ್ನೆ ಹಾಕಿದ್ದ. ಈತನ ಮನಸ್ಸು ಹೇಗಿದೆ? - ನೋಡೋಣ! - ಎಂದು ಯಕ್ಷನು ಪ್ರಶ್ನೆಗಳನ್ನು ಹಾಕುತ್ತಾ ಹೋದ. ಅದೆಲ್ಲವೂ ಧರ್ಮರಾಜನ ಬುದ್ಧಿವಂತಿಕೆಯ ಪರೀಕ್ಷೆಗಾಗಿದ್ದ ಪ್ರಶ್ನೆಗಳು.

ಆದರೆ, ಇಲ್ಲಿ ಹಾಗಲ್ಲ. ಜಿನ್ನು ಬಂಗರು ಮುಗ್ಧರು. ಕೇವಲ ಅಜ್ಞಾನಿ; ಏನೂ ತಿಳಿಯದವರು. ಆದರೆ ತಿಳಿಯಬೇಕು - ಎಂಬ ಕುತೂಹಲವುಳ್ಳ ಓರ್ವ ಶ್ರಾವಕ. ದೇವರಾಜ ಶಾಸ್ತ್ರಿಗಳು - 'ಶುಭಃ ಪುಣ್ಯಸ್ಯ ; ಅಶುಭಃ ಪಾಪಸ್ಯ'- ಎಂದು ಹೇಳಿ, ಸಂಸ್ಕೃತ ಸೂತ್ರಗಳ ಮೂಲಕ ವಿವರಣೆಯನ್ನಾರಂಭಿಸಿದಾಗ, ಜಿನ್ನು ಬಂಗರು ಅದನ್ನು ವಿರೋಧಿಸುವ ವಿಧಾನವೂ ಗಮನಾರ್ಹ :-

"ಹೋಯ್, ನೀವು ಹೀಗೆ ಈ ಸಂಸ್ಕೃತದಲ್ಲಿ, ಶ್ಲೋಕದಲ್ಲಿ ಹೇಳಿದ್ರೆ ನನಗರ್ಥವಾಗುವುದೇ? ನಾವು ಓದು ಬರೆಹ ಇಲ್ಲದವರು. ನಮಗೆ ಸರಳವಾದ ತುಳು ಭಾಷೆಯಲ್ಲೇ ಹೇಳಿದರೆ ಸ್ವಲ್ಪ ಅರ್ಥವಾದೀತು. ಅಲ್ಲವೇ?"

- ಈ ಸಂದರ್ಭದಲ್ಲಿ ನಮಗೆ ಮಂಜಯ್ಯ ಹೆಗ್ಗಡೆಯವರ ಉದ್ದೇಶ ಸ್ಪಷ್ಟವಾಗಿ ಅರ್ಥವಾಗುತ್ತದೆ. ತುಳು ಭಾಷೆಯಲ್ಲಿ ತುಳು - ತಾಯಿಯ ಮಕ್ಕಳಿಗಾಗಿ ಈ ರೀತಿಯಲ್ಲಿ ಕೃತಿರಚನೆ ಮಾಡುವ ಪ್ರಯತ್ನವೇಕೆಂದರೆ - ಓದು ಬರೆಹವಿಲ್ಲದ ಜನರಿಗೆ ಈ ತುಳು ಭಾಷೆಯಲ್ಲಿ ಹೇಳಿಯಾದರೂ ಜ್ಞಾನೋದಯವುಂಟಾಗುವಂತೆ ಮಾಡಬೇಕು.

ಪಾಪ - ಪುಣ್ಯಗಳ ಪರಿಭಾಷೆಯಲ್ಲಿ ಕೊಡುವಾಗ ಅವರು ಹೀಗನ್ನುತ್ತಾರೆ :-

'ಸಾರಾಂಶ ರೂಪದಲ್ಲಿ - ಜೀವಗಳಿಗೆ ಕಷ್ಟ - ದುಃಖ ಕಷ್ಟ ನೀಡಿ, ನಮ್ಮ ಮನಸ್ಸನ್ನು ವಿಕೃತಗೊಳಿಸುವುದೇ ಹಾಳು ಕೆಲಸ (ಪಾಪ). ಬೇರೆ ಜನರಿಗೆ, ಬೇರೆ ಪ್ರಾಣಿಗಳಿಗೆ ಒಳ್ಳೆಯ ಉಪಕಾರ, ದಯೆ, ಸಹಾಯ ಮಾಡಿ ನಾವು ತೃಪ್ತಿ ಪಡೆದು, ಆನಂದದಿಂದ ಇರುವುದೇ ಒಳ್ಳೆಯ ಕೆಲಸ (ಪುಣ್ಯ) - ಎಂದು ತಿಳಿಯಬಹುದು.

ಧರ್ಮ, ಆಧ್ಯಾತ್ಮ, ತತ್ವಜ್ಞಾನದಂತಹ ಗಂಭೀರ ವಿಚಾರಗಳ ಸಾರವನ್ನು ಸರಳವಾಗಿ ಜನತೆಗೆ ಸ್ಪಷ್ಟವಾಗಿ ತಿಳಿಸುವ ಅವರ ವಿಧಾನ ಅದ್ಭುತವೇ ಸರಿ!

"ಆತ್ಮನೆಂಬ ವಸ್ತುವಿನ ಸ್ವರೂಪವನ್ನು ದೇವರ ಸ್ವರೂಪವೆಂದು ಈ ಹಿಂದೆ ಹೇಳಿದ್ದೆನಲ್ಲ. ನಾವು ಆತ್ಮವನ್ನು ಹಿಡಿಯಲು, ನೋಡಲು, ಕೇಳಲು, ರುಚಿನೋಡಲು, ಮೂಸಲು ಹೇಗೆ ಸಾಧ್ಯವಾಗುವುದಿಲ್ಲವೋ ಹಾಗೆಯೇ ಪಾಪ - ಪುಣ್ಯಗಳನ್ನೂ ಕೂಡಾ ನೋಡಲು, ಹಿಡಿಯಲು ಸಾಧ್ಯವಿಲ್ಲ. ಇದೆಲ್ಲವನ್ನೂ ಕೆಲವು ಸಂಗತಿಗಳ ಮೂಲಕ ಅಥವಾ ವಿದ್ಯಮಾನಗಳ ಮೂಲಕ ಊಹಿಸಿಕೊಂಡು, ಇಲ್ಲವೇ ಶಾಸ್ತ್ರಗಳಲ್ಲಿ ಹೇಳಿದ್ದನ್ನು ಕೇಳಿಕೊಂಡು ನಂಬಬೇಕಾಗಿದೆ."

ಧಾರ್ಮಿಕ ವಿಚಾರಗಳನ್ನು ವಿವರಿಸುವಾಗ, ಈಗಿನ ಹೊಸ ವೈಜ್ಞಾನಿಕ - ವಿಚಾರಗಳ ಉದಾಹರಣೆಗಳನ್ನೂ ಅವರು ನೀಡುತ್ತಾರೆ. ರೇಡಿಯೋದ ಕಥೆ ಹೇಳುತ್ತಾರೆ. (ಇಂದು ರೇಡಿಯೊ, ಟಿ. ಮೊದಲಾದವು ಎಲ್ಲರಿಗೂ ತಿಳಿದ ವಿಚಾರವಾದರೂ, ಅಂದು ಈ ಪುಸ್ತಕವನ್ನು ಬರೆದ ಕಾಲದಲ್ಲಿ, ರೇಡಿಯೋದ ವಿಚಾರವನ್ನು ಹಳ್ಳಿಗರು ಇನ್ನೂ ಅರಿತಿರಲಿಲ್ಲ.) ಅದರ ಕುರಿತಾಗಿ ಜಿನ್ನು ಬಂಗರು ಪ್ರಶ್ನೆ ಹಾಕುತ್ತಾರೆ :-

"ರೇಡಿಯೋವೇ? ನಮ್ಮ ಮೂಡಬಿದ್ರಿಯ ಪಾಠಶಾಲೆಯ ಎದುರಿನ ಉಪ್ಪರಿಗೆಯಲ್ಲಿ ಸಣ್ಣ ಪೆಟ್ಟಿಗೆಯ ಹಾಗಿದೆ. ಅದು ಸ್ವರ, ರಾಗ, ಸಂಗೀತ ಹೊರಹೊಮ್ಮಿಸುತ್ತದೆ. ಅದನ್ನು ಕೂಡಾ ಒಮ್ಮೆ ಕೇಳಿದ್ದೇನೆ. ಅದು ಪದ್ಯ ಹೇಳುವ ಫೋನೋಗ್ರಾಫ್‌ನ ಪೆಟ್ಟಿಗೆಯಂತೆ. ಅಲ್ಲವೇ ಸ್ವಾಮಿ?"

ಅನಂತರ ಅವರು ಆತ್ಮ ಮತ್ತು ದೇವರ ಸ್ವರೂಪವನ್ನು ಪುತ್ಥಳಿ (ಶುದ್ಧ) ಬಂಗಾರದ ಉದಾಹರಣೆ ನೀಡಿ ವಿವರಿಸುತ್ತಾರೆ.

"ಆತ್ಮನೆಂದರೆ ಭತ್ತದ ಒಳಗಿರುವ ಅಕ್ಕಿಯ ಹಾಗೆ."

- ಅನ್ನುತ್ತಾರೆ.

ಕ್ರೋಧ, ಗರ್ವ, ಮತ್ಸರ, ಮಾನ, ಮಾಯ, ಲೋಭ - ಮೊದಲಾದ ಭಾವನೆಗಳ ವಿಚಾರವನ್ನು ತಿಳಿಸಿದ ಬಳಿಕ ಕರ್ಮ, ಆಸ್ರವ, ಬಂಧ, ನಿರ್ಜರೆ, ಮೋಕ್ಷವನ್ನೂ, ಜೀವಗಳ ಭೇದವನ್ನೂ, ಹಿಂಸೆಯ ಭೇದವನ್ನೂ, ಜಗಳ - ಯುದ್ಧ - ಹೋರಾಟಗಳ ವಿಚಾರವನ್ನೂ, ಮಹಾತ್ಮರ ಲಕ್ಷಣವನ್ನೂ ಎಳೆ - ಎಳೆಯಾಗಿ ವಿವರಿಸುತ್ತಾ ಸಾಗುತ್ತಾರೆ.

ಎಲ್ಲವನ್ನೂ ಕೇಳಿದ ಬಳಿಕ ಜಿನ್ನು ಬಂಗರು ಹೇಳುತ್ತಾರೆ -

"ಇದೆಲ್ಲ ಕೇಳಿ ತಿಳಿದರೂ, ಅದಕ್ಕನುಸಾರವಾಗಿ ಆಚರಿಸಲು ತಾಪತ್ರಯದ ಜೀವನ ಸಾಗಿಸುವ ನಮ್ಮಂಥವರಿಗೆ ಸಾಧ್ಯವೇ ಸ್ವಾಮಿ?"

- ಇದು ಜನಸಾಮಾನ್ಯರ ಪ್ರತಿಕ್ರಿಯೆ. ಆಧ್ಯಾತ್ಮಿಕ ವಿಚಾರಗಳನ್ನು ತಿಳಿಯುವುದೇ ಕಷ್ಟ! ತಿಳಿದರೂ ಆಚರಣೆ ಬಹಳ ಕಷ್ಟ!

ಅದಕ್ಕೂ ಶಾಸ್ತ್ರಿಗಳ ಬಳಿ ಉತ್ತರವಿದೆ :-

"ನಮಗೆ ತಿಳಿದ ಬಳಿಕ ಸಾಧ್ಯವಾದಷ್ಟು ಆಚರಿಸುವುದು ಒಳ್ಳೆಯದಲ್ಲವೇ? ಒಂದು ಸಂಗತಿಯನ್ನು ತಿಳಿದುಕೊಂಡರೆ ಅದರಿಂದ ಹಾನಿಯೇನೂ ಇಲ್ಲವಷ್ಟೆ!"

ಜೈನರು

ಈ ಪುಸ್ತಕವೂ ಕೂಡಾ ಶುದ್ಧ ಪ್ರಶ್ನೋತ್ತರ ಶೈಲಿಯಲ್ಲೇ ಇದೆ. ಜೈನರು, ಜಿನೇಶ್ವರ, ಆತ್ಮ, ಶಾಸ್ತ್ರ, ಅರಹಂತರ ಸ್ವರೂಪದ ವಿವರಣೆಯಿಲ್ಲಿದೆ.

ಜೈನರಲ್ಲಿ ದಿಗಂಬರ - ಶ್ವೇತಾಂಬರರದ ವ್ಯತ್ಯಾಸವನ್ನೂ ವಿವರಿಸಿದ್ದಾರೆ.

ದೇವರಿಗೆ ನೈವೇದ್ಯವೇಕೆ? - ಎಂಬ ಪ್ರಶ್ನೆಗೆ ನೀಡುವ ಉತ್ತರ ಹೀಗಿದೆ :-

ದೇವರಿಗೆ ನೈವೇದ್ಯವನ್ನು ದೀಪ, ನೀರು, ಫಲವಸ್ತುಗಳನ್ನೂ ಇಟ್ಟು ಪೂಜೆ ಮಾಡುತ್ತೇವೆ. ಅದೆಲ್ಲವನ್ನೂ ದೇವರು ತಿನ್ನುವರೆಂದಲ್ಲ. ನಾವು ದೇವರ ಮೇಲೆ ಭಕ್ತಿಯಿರಿಸಿ, ನಮಗೆ ಪ್ರಿಯವಾದ ವಸ್ತುಗಳನ್ನು ದೇವರಿಗೆ ಅರ್ಪಿಸಿ, ನಮ್ಮಲ್ಲಿನ ತ್ಯಾಗ ಗುಣ ಹೆಚ್ಚಲೆಂದು ಅಂಥ ದ್ರವ್ಯ ಪೂಜೆಯನ್ನು ಮಾಡುತ್ತೇವೆ. ನಮ್ಮ ಭಕ್ತಿಯು ಪ್ರಾರಂಭದಲ್ಲಿ ತುಂಬಾ ಸ್ಥಿರವಾಗಿರಲೆಂದು ಹಾಗೆ ಪೂಜೆ ಮಾಡುತ್ತೇವೆ. ನಮ್ಮ ಭಕ್ತಿ ಜ್ಞಾನ ಹೆಚ್ಚಾದಂತೆಯೇ ಬಳಿಕ ಅಂಥ ಪೂಜೆಗಳನ್ನು ಮಾಡದೆ ದೇವರ ನಿಜ ಸ್ವರೂಪವನ್ನು ಧ್ಯಾನ ಮಾಡುತ್ತಾ ಪರಿಶುದ್ಧ ಆತ್ಮರಾಗುವಂತಹ ಪ್ರಯತ್ನ ಮಾಡುತ್ತೇವೆ."

ಜಾತಿಗಳ ಭೇದ - ನೀತಿಯ ವಿಚಾರ, ದಾನ - ಧರ್ಮ, ಉಪವಾಸ, ಶ್ರಾವಕ ಧರ್ಮ, ಉಪವಾಸ ವ್ರತ, ಆಹಾರ - ದಾನ, ನೋಂಪಿ, ಪೂಜೆ, ಬಸ್ತಿ ದರ್ಶನ - ಇಂಥ ಅನೇಕ ವಿಚಾರಗಳನ್ನು ಹೇಳುತ್ತಾರೆ.

ಜೈನರ ಶಾಸ್ತ್ರ ಗ್ರಂಥಗಳಲ್ಲಿ ಜೈನ ಶ್ರಾವಕರು ಅರ್ಥಾತ್ ಗೃಹಸ್ಥರು ಹೇಗಿರಬೇಕು? ಏನು ಮಾಡಬೇಕು? ಏನು ಮಾಡಬಾರದು? - ಎಂಬ ವಿಚಾರಗಳಿಗೆ ವಿಶೇಷ ಮಹತ್ವವಿದೆ.

ರತ್ನಕರಂಡಕ ಶ್ರಾವಕಾಚಾರ, ಸಾಗಾರ ಧರ್ಮಾಮೃತ, ದ್ರವ ಸಂಗ್ರಹ, ತತ್ವಾರ್ಥ ಸೂತ್ರ - ಇಂಥ ಅನೇಕ ಪುಸ್ತಕಗಳಲ್ಲಿ ಗೃಹಸ್ಥರ ಕರ್ತವ್ಯಗಳನ್ನು ವಿವರಿಸಿದ್ದಾರೆ. ಆದರೆ ಅವನ್ನೆಲ್ಲ ಸಂಸ್ಕೃತ ತಿಳಿಯದವರು ಹೇಗೆ ಅರಿಯಲು ಸಾಧ್ಯ? ಓದು - ಬರೆಹ ಇಲ್ಲದವರಿಗಾಗಿ ಸರಳವಾಗಿ ಜೈನ ಧರ್ಮವನ್ನು ಈ ಕಿರುಪುಸ್ತಕದಲ್ಲಿ ನಿರೂಪಿಸುತ್ತಾರೆ.

'ಸಾಧ್ಯವಾದರೆ ಪುಣ್ಯಕ್ಷೇತ್ರಗಳನ್ನು, ಬಸ್ತಿಗಳನ್ನು ದರ್ಶನ ಮಾಡಬೇಕು. ಬಸ್ತಿ ಕಟ್ಟಿಸಿ, ಪಂಚಕಲ್ಯಾಣ ಮಾಡಿಸಬೇಕು. ತಮ್ಮ ಶಕ್ತಿಗನುಸರವಾಗಿ ಗೃಹಸ್ಥರು ನೋಂಪಿ ಪೂಜೆಗಳನ್ನು ಮಾಡಬೇಕು. ನಮ್ಮ ಹೆಚ್ಚು ಪಾಪ ಅಂಟಿಕೊಳ್ಳದಂತೆ ವೃತ್ತಿಯನ್ನು ಅವಲಂಬಿಸಿ, ಕಾಲ ಕಳೆಯಬೇಕು. ಇದೆಲ್ಲವೂ ಜೈನರ ನೀತಿಗಳು.'

'ಪಾಪ - ಪುಣ್ಯ ಹೇಗೆ? - ಎಂಬ ಪುಸ್ತಕಕ್ಕಿಂತಲೂ ಸ್ವಾರಸ್ಯಕರವಾಗಿ ಈ ಪುಸ್ತಕ ರೂಪುಗೊಂಡಿತು - ಎನ್ನಬಹುದು. ಅವುಗಳಲ್ಲಿ ಬರುವ ಕೆಲವೊಂದು ವೈಶಿಷ್ಟ್ಯಗಳು ಹೀಗಿವೆ :-

(1) ಮೊದಲ ಪುಸ್ತಕದ ಕುರಿತಾಗಿ ಹಾಗೂ ಮೂರನೇ ಪುಸ್ತಕದ ಕುರಿತಾಗಿ ಎರಡನೇ ಪುಸ್ತಕದಲ್ಲಿ ಉಲ್ಲೇಖಗಳಿವೆ.

(2) ಆ ವಿಷಯ ಹಾಗಿರಲಿ, ನಮಗೆ ಬೇಡ - ಎಂಬ ವಿಚಾರಗಳೂ ಇವೆ.

(3) ಕೇವಲ ಜೈನರಿಗೋಸ್ಕರ ಈ ಕೃತಿ ರಚನೆ ನಡೆದಂತಿದೆ.

(4) ಜೈನರಿಗಾಗಿ ತುಳು ಭಾಷೆಯಲ್ಲೂ, ಇತರ ಜಾತಿಯವರಿಗಾಗಿ ಕನ್ನಡದಲ್ಲೂ ಉಪದೇಶ ನೀಡಲು ಕೃತಿರಚನೆ ಮಾಡುವ ಸಂಪ್ರದಾಯವು ಆ ಕಾಲದಲ್ಲಿದ್ದಿರಬಹುದೇ? ಎಂದು ಊಹಿಸಬಹುದಾಗಿದೆ.

(5) ಈ ಕೃತಿಯಲ್ಲಿ ಸರಳವಾದ ದೈನಿಕ ವ್ಯವಹಾರದ ಭಾಷೆಯನ್ನು ಬಳಸಲಾಗಿದೆಯೆನ್ನಬಹುದು.

ತುಳು - ನಿತ್ಯವಿಧಿ

ಇದು ತುಳುಭಾಷೆಯಲ್ಲಿ ಅವರು ಬರೆದ ನಾಲ್ಕನೇ ಕೃತಿ.

ಜೈನರಿಗೆ ಮಾರ್ಗದರ್ಶನ ನೀಡಲೆಂದೇ ಈ ಪುಸ್ತಕವನ್ನು ಬರೆದಂತಿದೆ. ಇದರಲ್ಲಿ ಸಣ್ಣ - ಸಣ್ಣ ಪರಿಚ್ಛೇದಗಳಿವೆ. ಅವುಗಳಿಗೆ ಒಂದೊಂದು ಪುಟ್ಟ ಶೀರ್ಷಿಕೆಗಳನ್ನೂ ನೀಡಲಾಗಿದೆ.

(1) ಸ್ತೋತ್ರ :

ಮಾತಾ ಯಸ್ಯ ಪ್ರಭಾತೇ... ಇತ್ಯಾದಿಯಾಗಿ ಸಂಸ್ಕೃತದಲ್ಲಿ - ತೀರ್ಥಂಕರ ಭಗವಾನರ ತಾಯಿ ಕಂಡ 16 ಕನಸುಗಳ ವಿವರಗಳನ್ನು ತುಳುವಿನಲ್ಲಿ ತುಂಬಾ ಚೆನ್ನಾಗಿ ವಿವರಿಸಿದ್ದಾರೆ.

(2) ಸಂಧ್ಯಾ ವಂದನೆ :

ಓಂ ಹ್ರೀಂ ಶುದ್ಧ ನಿರ್ಮಲ ನೀರಿನಲ್ಲಿ ಪಾದ ಶುದ್ಧಿಯ ಮಾಡಿಕೊಳ್ಳುವೆನು. ಕೈಶುದ್ಧಿ, ಮೋರೆ ಶುದ್ಧಿ, ದಂತ ಶುದ್ಧಿ, ಸರ್ವಾಂಗ ಶುದ್ಧಿಯ ಉಲ್ಲೇಖವುಂಟು. ಅಷ್ಟರ ವರೆಗೆ ಸಂಸ್ಕೃತದ ಮಂತ್ರಗಳ ಸ್ಥಾನದಲ್ಲಿ ತುಳುವಿನ ಪ್ರಯೋಗ ಮಾಡಿದವರಿಲ್ಲ. ಅಂಥ ಮೊತ್ತಮೊದಲ ಪ್ರಯೋಗ ಮಾಡಿದವರು - ಮಂಜಯ್ಯ ಹೆಗ್ಗಡೆಯವರು.

(3) ಸಂಕಲ್ಪ :

ಊರು, ಗ್ರಾಮ, ಬಸದಿ, ಸಂವತ್ಸರ, ಋತು, ಪಕ್ಷ, ತಿಂಗಳು, ತಿಥಿ, ದಿನ, ಗೋತ್ರ, ತಂದೆಯ ಹೆಸರು ಹೇಳಿ, ಅವರ ಮಗನಾದ .... ಹೆಸರಿನ ನಾನು ಸಂಕಲ್ಪ ಮಾಡುವುದೇಕೆಂದರೆ -

ನನ್ನ ಎಲ್ಲಾ ಪಾಪದ ನಾಶಕ್ಕಾಗಿ -

ಆಯುಷ್ಯ ಆರೋಗ್ಯ ಐಶ್ವರ್ಯಗಳು ಹೆಚ್ಚಲೆಂದು ಎಲ್ಲರಿಗೂ ಸಿದ್ಧಿ, ಶುದ್ಧಿ, ಶಾಂತಿ, ಮಂಗಲಗಳು ಉಂಟಾಗಲೆಂದು -

- ಹೀಗೆ ನಾಲ್ಕು ಉದ್ದೇಶಗಳಿಗಾಗಿ ಸಂಧ್ಯಾವಂದನೆ ಮಾಡುತ್ತೇನೆ - ಎಂಬ ಉಲ್ಲೇಖವನ್ನು ಓದುವಾಗ ರೋಮಾಂಚನವುಂಟಾಗುತ್ತದೆ. ನಮ್ಮ ಮಾತೃಭಾಷೆ - ತುಳುವಿನಲ್ಲೂ ಇಷ್ಟೊಂದು ಶಕ್ತಿ, ಮಂತ್ರ ಪ್ರಯೋಗಗಳಿಗೆ ಬಳಕೆಯಾಗುವಷ್ಟು ಶಕ್ತಿಯಿದೆ - ಎನ್ನುವುದು ಬಹು ಸಂತಸದ ವಿಚಾರ.

ಜಲಧಾರೆಯನ್ನು ಹರಿಸುವುದು, ವಸ್ತ್ರದ ಮೇಲೆ ಶುದ್ಧ ಜಲವನ್ನು ಚಿಮುಕಿಸುವುದು, ನೂರೆಂಟು ಬಾರಿ ಪಂಚ ನಮಸ್ಕಾರ ಮಂತ್ರ ಹೇಳುವುದು, ದಶದಿಕ್ಕುಗಳ ದಿಕ್ಪಾಲಕರಿಗೆ ಅಕ್ಷತೆ (ಅಕ್ಕಿ ಕಾಳು) - ಜಲದಿಂದ ಸತ್ಕಾರ ಮಾಡಿ ನಮಸ್ಕಾರ ಮಾಡುವುದು - ಹೀಗೆ ಸಂಧ್ಯಾವಂದನೆಯ ಪದ್ಧತಿಯಿದೆ.

(4) ಮೋಕ್ಷ ಮಾರ್ಗ

ಉಮಾಸ್ವಾಮಿಯೆಂಬ ಹೆಸರಿನ ಮುನಿಗಳು ಸಂಸ್ಕೃತದಲ್ಲಿ ಬರೆದ ಶಾಸ್ತ್ರಗ್ರಂಥವಿದು. (ಮೋಕ್ಷ ಶಾಸ್ತ್ರಕ್ಕೆ ಇನ್ನೊಂದು ಹೆಸರು - ತತ್ವಾರ್ಥ ಸೂತ್ರ) ಇದನ್ನು ತುಳುಭಾಷೆಗೆ ಅನುವಾದಿಸುವ ಪ್ರಯತ್ನವನ್ನಿಲ್ಲಿ ಕಾಣಬಹುದಾಗಿದೆ.

ಮೋಕ್ಷ ಮಾರ್ಗಸ್ಯ ನೇತಾರಂ
(ಮೋಕ್ಷ ಮಾರ್ಗಕ್ಕೆ ಸ್ವಾಮಿಯಾಗಿಹ)
ಭೇತ್ತಾರಂ ಕರ್ಮಭೂಭೃತಾಂ ।
(ಕರ್ಮ - ಬೆಟ್ಟವನೊಡೆದು ಹಾಕಿದ)
ಜ್ಞಾತಾರಂ ವಿಶ್ವತತ್ವಾನಾಂ
(ಲೋಕದ ಎಲ್ಲ ತತ್ವಗಳ ಅರಿತಿರುವ)
ವಂದೇ ತದ್ಗುಣ ಲಬ್ಧಯೇ ॥
(ಪರಮ ದೇವರ ಗುಣಗಳೆನಗೆ ಸಿದ್ಧಿಸಲೆಂದು ವಂದಿಪೆ)

- ಇಲ್ಲಿ ಕೊನೆಯ ಪಂಕ್ತಿ ತುಸು ಉದ್ದವೆನಿಸಿದರೂ, ಇದರಿಂದ ಸಂಸ್ಕೃತ ಶ್ಲೋಕದ ಪೂರ್ಣ ತಾತ್ಪರ್ಯ ಸ್ಪಷ್ಟವಾಗುತ್ತದೆ. ಆದ್ದರಿಂದಲೇ ಇದನ್ನು ಒಂದು ಆದರ್ಶ ಅನುವಾದವೆನ್ನಬಹುದು.

(5) ದರ್ಶನ ಸ್ತೋತ್ರ

ಇಲ್ಲಿ ಕೂಡಾ ಸಂಸ್ಕೃತ ಶ್ಲೋಕಗಳ ಅನುವಾದದ ಸ್ವಾರಸ್ಯವನ್ನು ಸವಿಯಬಹುದಾಗಿದೆ :-

ದರ್ಶನೇನ ಜಿನೇಂದ್ರಾಣಾಂ ಸಾಧೂನಾಂ ವಂದನೇನ ಚ ॥
(ಸತ್ಯಸಾಧುಗಳ ವಂದನೆ, ಜಿನದೇವರ ದರ್ಶನದಿಂದ)
ನ ಚಿರಂ ತಿಷ್ಠತೇ ಪಾಪಂ ಉದ್ರ ಹಸ್ತೇ ಯಥೋದಕಂ ॥
(ನೀರು ಸೋರುವ ಹಸ್ತದಂತೆಯೇ
ಸರ್ವ ಪಾಪವೂ ತೊಳೆದು ಪೋಪುದು
ನಿತ್ಯದರ್ಶನ ಮಾಳ್ಪ ಜೀವರ್ಗೆ)

(5) ಪಂಚ ನಮಸ್ಕಾರದ ಮಹಿಮೆ

'ಮಂತ್ರವನ್ನು ಶುದ್ಧರೂಪದಲ್ಲಿ ಉಚ್ಚರಿಸುತ್ತಾ ಜಪ ಮಾಡಬೇಕು. ಆಗ ಉತ್ತಮ ಫಲ ದೊರೆಯುವುದು. ಇಲ್ಲಿ ಇದು ಲೆಕ್ಕಕ್ಕೆ ಬಾರದು ; ಆದರೆ ನಿಃಸಂಶಯವಾಗಿ ಒಳ್ಳೆಯ ಫಲ ಸಿಗುವುದು"

ಒಂದೇ ಪರಿಚ್ಛೇದದಲ್ಲಿ ಬ್ರಾಹ್ಮಣರ ತುಳು ಭಾಷಾ ಪ್ರಯೋಗವಾದ 'ಸಿಕ್ಕುಜಿ' ಮತ್ತು ಜೈನರ ತುಳು ಭಾಷಾ ಪ್ರಯೋಗವಾದ 'ಹಿಕ್ಕುಜಿ' - ಎರಡನ್ನೂ ಬಳಸಿ, ಸಮನ್ವಯದ ದಾರಿಯನ್ನು ತೋರಿದ್ದಾರೆ.

ಆ ಬಳಿಕ ಭೂತಕಾಲದ 24 ಮಂದಿ, ವರ್ತಮಾನಕಾಲದ 24 ಮಂದಿ ಹಾಗೂ ಭವಿಷ್ಯತ್ ಕಾಲದ 24 ಮಂದಿ ತೀರ್ಥಂಕರರ ಹೆಸರುಗಳನ್ನೂ ನಮೂದಿಸುತ್ತಾರೆ.

(7) ಸಾಮಯಿಕ ಪಾಠ

ಇದು ಕೂಡಾ ಸಂಸ್ಕೃತದ 'ಸಾಮಯಿಕ ಪಾಠ'ದ ಅನುವಾದವಾಗಿದೆ. ಅತ್ಯಂತ ಯಥಾರ್ಥವಾದ ಅನುವಾದವಾಗಿದೆ :-

ಸ್ವಾಮಿ ದೇವನೆ, ಎನ್ನ ಆತ್ಮವು ನಿತ್ಯವೂ ಸರ್ವ ಜೀವದಿ ಸ್ನೇಹವಿಡಲಿ, ಗುಣವಂತರು ಪ್ರೇಮವಿಡಲಿ, ನಿತ್ಯವೂ ನಿರ್ಮಲದ ದಯೆ ತೋರಲಿ ದುಃಖ ತುಂಬಿದ ಜೀವಿಗಳಲಿ ದುಷ್ಟ ಕರ್ಮಿಗಳ ಒಳಿತು ಕೆಡುಕನು ತ್ಯಜಿಸಿ ಬದುಕು ಸಾಗಲಿ.

- ಬಹು ಸುಂದರವಾದ ಅನುವಾದ. ಪ್ರಾಸವನ್ನು ಬಳಸಲಾಗಿದೆ.

(ಸತ್ವೇಷು ಮೈತ್ರೀಂ ಗುಣಿಷು ಪ್ರಮೋದಂ
ಕ್ಲಿಷ್ಟೇಷು ಜೀವೇಷು ಕೃಪಾಪರತ್ವಂ ||
ಮಾಧ್ಯಸ್ಥ ಭಾವಂ ವಿಪರೀತ ವೃತ್ತೌ
ಸದಾ ಮಮಾತ್ಮಾ ವಿದಧಾತು ದೇವ||)

- ಸಂಸ್ಕೃತದಲ್ಲಿ ಈ ತೆರನಾದ ಪ್ರಾಸವನ್ನು ಬಳಸಲಾಗಿಲ್ಲ. ಆದ್ದರಿಂದ ಅದರ ಅನುವಾದವೇ ಹೆಚ್ಚು ಸುಂದರವಾಗಿದೆಯೆನ್ನಬಹುದು.

(8) ಅಭಿಷೇಕ - ನಿತ್ಯಪೂಜೆ

ಇದನ್ನೂ ಕೂಡಾ ತುಳುವಿನಲ್ಲೇ ತಿಳಿಸುತ್ತಾರೆ :-

"ಈಗ ನಾನು ಕೂಡಾ ಇಲ್ಲಿ ನನ್ನ ಶಕ್ತ್ಯನುಸಾರವಾಗಿ ಭಕ್ತಿಯಿಂದ ನನ್ನ ಎಲ್ಲ ಪಾಪ - ಶಮನಕ್ಕಾಗಿ ಜಿನೇಶ್ವರರ ಅಭಿಷೇಕವನ್ನು ಆರಂಬಿಸುತ್ತೇನೆ.

ಓಂ ಹ್ರೀಂ ಕೈಶುದ್ಧಿ ಮಾಡಿಕೊಳ್ಳುತ್ತೇನೆ.

(ಓಂ ಹ್ರೀಂ ಹಸ್ತಶುದ್ಧಿಂ ಕರೋಮಿ)

- ಎಷ್ಟೊಂದು ಸುಂದರವಾದ ಅನುವಾದ. ಪ್ರಾಯಶಃ ಸಂಸ್ಕೃತ ಭಾಷೆಯ ಶ್ಲೋಕ - ಮಂತ್ರಗಳನ್ನು ದೇಶೀಯ ಭಾಷೆಗೆ ಅಳವಡಿಸುವಂಥ ಪ್ರಪ್ರಥಮ ಪ್ರಯತ್ನವಿದು!

(9) ಅರಹಂತರ ಪೂಜೆ :

ಅರಹಂತ - ದೇವರನ್ನು ತುಳುವಿನಲ್ಲೇ ಆಹ್ವಾನ ಮಾಡುವ ವಿಧಾನವನ್ನು ಗಮನಿಸಿ :-

'ಓಂ ಹ್ರೀಂ ಅರಹಂತರೆ, ಈ ಸ್ಥಾನಕ್ಕೆ ದಯಮಾಡಿಸಿ,

ದಯಮಾಡಿಸಿ - ಸಂತೋಷದಿಂ ಓಂ ಹ್ರೀಂ ಅರಹಂತರೆ,

ಈ ಪೀಠಕ್ಕೆ ದಯಮಾಡಿಸಿ, ಠಠ! ಓಂ ಹ್ರೀಂ ಅರಹಂತರೆ, ಎನ್ನ ಬಳಿಯೆ ನೆಲಸಿರಿ, ವಷಟ್ ಸ್ವಾಹಾ!!

(10) ಅರಹಂತರ ಪೂಜಾಷ್ಟಕ

'ಭಾವಜ - ವಿಜಯನೇ' - ಎಂಬ ಪದದ ಧಾಟಿಯಲ್ಲಿ, ಮೋಹನ ರಾಗದಲ್ಲಿ ಹಾಗೂ ಛಾಪ ತಾಳದಲ್ಲಿ ಬರೆಯಲಾದ ಈ ಕೆಳಗಿನ ಪದ್ಯವನ್ನು ಗಮನಿಸಿ :-

ಕಾಣುವ ಸುಖವೆಲ್ಲ
ಉಪಯೋಗವಿಲ್ಲೆಂದು
ರಾಜ್ಯ ಭೋಗವ ತ್ಯಜಿಸಿದವಗೆ
ಅಹಂತ ದೇವಗೆ ಜಲಾರ್ಚನೆ ಮಾಡುವೆ
ಮೂಡಿ ಬಂದ ಭಕ್ತಿಯಲ್ಲಿ
ಪರಿಪರಿಯ ವಿಧಗಳಲ್ಲಿ

- ಹೀಗೆ ನೀರು, ಬಳಿಕ ಗಂಧ, ಅಕ್ಷತೆ, ಹೂ, ಚರು, ದೀಪ, ಧೂಪ, ಫಲ ಅಷ್ಟ ವಿಧಾರ್ಚನೆ ಮಾಡುವ ಪದ್ಯಗಳು ಮತ್ತು ಮಂತ್ರಗಳು -ಎರಡನ್ನೂ ತುಳುವಿನಲ್ಲೇ ಮಾಡುವ ಅವರ ಅದ್ಭುತ ಸೃಷ್ಟಿ - ನಿಜಕ್ಕೂ ಅಪೂರ್ವ ಸೃಷ್ಟಿಯೇ ಸೈ!

(11) ನವ ದೇವತೆಗಳ ಪೂಜೆ

ಇಲ್ಲಿ ಕೂಡಾ ನೀರು, ಗಂಧ, ಅಕ್ಷತೆ (ಅಕ್ಕಿ), ಹೂ, ನೈವೇದ್ಯ, ದೀಪ, ಧೂಪ ಸಮರ್ಪಣೆ ಮಾಡುವ ರೀತಿಯನ್ನು ವಿವರಿಸುತ್ತಾರೆ.

ಇದು ಕೂಡಾ ತುಂಬಾ ಚೆನ್ನಾಗಿ ಮೂಡಿಬಂದಿದೆ.

ಅದೇ ರೀತಿಯಲ್ಲಿ ಸಿದ್ಧರ ಪೂಜೆ, ಸರಸ್ವತಿ ಪೂಜೆ, ಗಣಧರರ ಪೂಜೆ, ಪದ್ಮಾವತಿ ಅಮ್ಮನವರ ಪೂಜೆ, ಕೊನೆಗೆ ವಿಸರ್ಜನೆಯ ಮಂತ್ರಗಳೂ ಇವೆ.

ಗಣಧರರ ಪೂಜೆಯ ಉದ್ದೇಶವನ್ನು ಗಮನಿಸಿ :-

"ನನ್ನ ದುರ್ನಡತೆಗಳು ದೂರವಾಗಲಿ, ಒಳ್ಳೆ ಶೀಲವು ಮೂಡಲಿ.
ಶಾಂತಿಧಾರೆಯ, ದಿವ್ಯ ಪುಷ್ಪಂಜಲಿಯ ಮಾಡುವೆ ಸ್ವಾಹಾ ||

ವಿಸರ್ಜನೆಯ ಮಂತ್ರದಲ್ಲಿ ದೇವರನ್ನು ಹಿಂದಕ್ಕೆ ಕಳುಹಿಸುವ ವಿಧಾನವನ್ನು ಗಮನಿಸಬಹುದು -"ಈ ಪೂಜೆಯಲ್ಲಿ ನಾನು ಯಾರ್‍ಯಾರನ್ನು ಕರೆದು ಪೂಜೆ - ಸತ್ಕಾರಗಳ ಮಾಡಿದೆನೋ ಅವರೆಲ್ಲರೂ ಅವರವರ ಸ್ಥಾನಕ್ಕೆ ದಯಮಾಡಿ ಹೋಗಲಿ, ಸರ್ವಜೀವಗಳಿಗೆ ಶಾಂತಿಯಾಗಲಿ."

- ಹೀಗೆ ತುಳುವಿನಲ್ಲಿ ಮಂತ್ರ - ಪೂಜೆ ಮಾಡುವ ಪ್ರಯೋಗಗಳನ್ನು ಮನೆಯಲ್ಲಾಗಲಿ, ಬಸದಿಗಳಲ್ಲಾಗಲಿ - ಈ ಹಿಂದೆ ಯಾರೂ ಮಾಡಿದವರಿಲ್ಲ. ಸಂಸ್ಕೃತ, ಹಿಂದಿ, ಕನ್ನಡ ಭಾಷೆಗಳಲ್ಲಿ ಇಂತಹ ಪೂಜಾ ವಿಧಾನದ ಪ್ರಯೋಗಗಳು ನಡೆದಿದ್ದರೂ, ತುಳುವಿನಲ್ಲಿ ಇಂತಹ ಪ್ರಯೋಗ ಶ್ರೀ ಮಂಜಯ್ಯ ಹೆಗ್ಗಡೆಯವರಿಂದಲೇ ಆರಂಭವಾಯಿತೆನ್ನಬಹುದು.

ಕನ್ನಡ ಪುಸ್ತಕಗಳು

'ಪಾಪ - ಪುಣ್ಯ' - ಇದು ಅವರು ಬರೆದ ಇದೇ ಹೆಸರಿನ ತುಳು ಭಾಷಾಪುಸ್ತಕದ ಕನ್ನಡಾನುವಾದವಾಗಿದೆ.

'ಸಂಕ್ಷಿಪ್ತ ಪೂಜಾ ಸಂಗ್ರಹ' - ಇದು ಕೂಡಾ ಅವರು ತುಳು ಭಾಷೆಯಲ್ಲಿ ಬರೆದಿದ್ದ ಪುಸ್ತಕದ ಅನುವಾದವೆನ್ನಬಹುದು.

ಇಷ್ಟು ಮಾತ್ರವಲ್ಲದೆ ಬೇರೆ - ಬೇರೆ ಕಡೆಗಳಲ್ಲಿ ಅವರು ಮಾಡಿದ ಭಾಷಣಗಳು, ಅವರು ೆದ ಮುನ್ನುಡಿಗಳು, ಇತ್ಯಾದಿಗಳನ್ನೋದಿದಾಗ ನಮಗೆ ಅಚ್ಚರಿಯೆನಿಸುತ್ತದೆ :- ಎಷ್ಟೊಂದು ಅದ್ಭುತವಾದ ರಚನಾ ಸಾಮರ್ಥ್ಯ! ಎಷ್ಟೊಂದು ಅದ್ಭುತವಾದ ವಿಷಯ ಸಂಗ್ರಹ!

ಉಪಸಂಹಾರ

ಹೀಗೆ ನಮ್ಮ ನಾಡಿಗೆ, ನಮ್ಮ ದೇಶಕ್ಕೆ, ನಮ್ಮ ಮಾನವ ಜನಾಂಗಕ್ಕೆ ಬಹುಮುಖವಾದ ಸೇವೆ ಸಲ್ಲಿಸಿದ್ದರು ಧರ್ಮ ಮೂರ್ತಿ ಶ್ರೀ ಮಂಜಯ್ಯ ಹೆಗ್ಗಡೆಯವರು. ಅಂತಿಮ ಕಾಲದಲ್ಲಿ ಸ್ವಲ್ಪ ಅಸೌಖ್ಯದಿಂದ ಇದ್ದರು. ಅದರಿಂದಾಗಿ ತಮ್ಮ ಬಂಧುಗಳು, ಆಶ್ರಿತರು, ಮಿತ್ರರು, ಹಿತಚಿಂತಕರು - ಮೊದಲಾದವರ ಸಮಕ್ಷಮದಲ್ಲೇ ಪಂಚನಮಸ್ಕಾರ ಮಂತ್ರವನ್ನು ಸ್ಮರಿಸುತ್ತಾ, 1955ನೇ ಇಸವಿ ಆಗಸ್ಟ್ 31ರಂದು ಅವರು ಸ್ವರ್ಗಸ್ಥರಾದರು. ಆಗ ಅವರಿಗೆ 66 ವರ್ಷಗಳಾಗಿದ್ದವು. ಅವರು ಅಮರ ಜೀವಿಯೆನಿಸಿದರು. ಏಕೆಂದರೆ - ಅವರು ತೀರಿಹೋಗುವ ಮೊದಲು ತಾವು ಮಾಡಬೇಕಾದ ಎಲ್ಲಾ ಕರ್ತವ್ಯಗಳನ್ನೂ ಪೂರೈಸಿದ್ದ ಪುಣ್ಯಾತ್ಮರು.

ಅವರು ಧರ್ಮಸ್ಥಳದ ಕಟ್ಟು - ಕಟ್ಟಳೆಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಿದರು ; ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಿದರು. 37 ವರ್ಷಗಳ ಕಾಲ ತುಂಬಾ ಸುಂದರವಾದ ಆಡಳಿತವನ್ನು ಶ್ರೀ ಕ್ಷೇತ್ರದಲ್ಲಿ ನಿರ್ವಹಿಸಿದರು. ಬಡವರಿಗೆ ಆಶ್ರಯ ನೀಡಿದರು. ಭಕ್ತರಿಗೆ ಅಭಯ ಕೊಟ್ಟರು. ಕಲಾವಿದರಿಗೆ, ಸಾಹಿತಿಗಳಿಗೆ ವಿಶೇಷ ಪ್ರೋತ್ಸಾಹ ಮಾಡಿದರು. ಈ ಲೋಕದ ಉದ್ಧಾರಕ್ಕಾಗಿಯೇ ಶ್ರಮಿಸಿದರು.

ಅವರು ತೀರಿಹೋದರೂ, ಅವರ ಕೀರ್ತಿಯು ಚಿರಕಾಲದ ವರೆಗೆ ಉಳಿಯುವಂಥದ್ದೇ ಸೈ!

ಶ್ರೀ ಕ್ಷೇತ್ರದಲ್ಲಿ ಅವರು ಆರಂಭಿಸಿದ ಸರ್ವಧರ್ಮ ಸಾಹಿತ್ಯ ಸಮ್ಮೇಳನಗಳು, ತೋಟ - ಲಲಿತೋದ್ಯಾನಗಳು, ವಸಂತ ಮಹಲ್‌ನಂತಹ ಕಟ್ಟಡಗಳು, ಉಜಿರೆಯಲ್ಲಿ ಶ್ರೀ ಸಿದ್ಧವನ ಗುರುಕುಲ, ಹೈಸ್ಕೂಲುಗಳಂತಹ ಸಂಸ್ಥೆಗಳು ಇರುವಷ್ಟು ಕಾಲ ಅವರ ಯಶಸ್ಸು - ಕೀರ್ತಿ - ಪ್ರಸಿದ್ಧಿಗಳು ಅಮರವಾಗಿ ಉಳಿಯುವುದರಲ್ಲಿ ಯಾವುದೇ ಸಂಶಯವಿಲ್ಲ!

ಶ್ರೀ ಮಂಜಯ್ಯ ಹೆಗ್ಗಡೆಯವರ ಜೀವನದ ಮುಖ್ಯ ಹಂತಗಳು

2.11.1889	-	ಜನನ
1918	-	ಧರ್ಮಾಧಿಕಾರಿಯಾಗಿ ಪಟ್ಟಾಭಿಷೇಕ
1922	-	ವಿವಾಹ
1927	-	ಎಂ.ಎಲ್.ಸಿ. (ಮದ್ರಾಸು - ಇಂದಿನ ತಮಿಳುನಾಡು ರಾಜ್ಯದಲ್ಲಿ) ಆದುದು
1933	-	ಸರ್ವಧರ್ಮ - ಸಾಹಿತ್ಯ ಸಮ್ಮೇಳನಗಳ ಆರಂಭ
1940	-	ಉಜಿರೆಯಲ್ಲಿ ಶ್ರೀ ಸಿದ್ಧವನ ಗುರುಕುಲದ ಆರಂಭ
1943	-	ಪಟ್ಟಾಭಿಷೇಕದ ರಜತೋತ್ಸವ
1945	-	ಪತ್ನೀ ವಿಯೋಗ
1947	-	ಉಜಿರೆಯಲ್ಲಿ ಹೈಸ್ಕೂಲು ಆರಂಭ
1950	-	ಮಂಗಳೂರು ನಗರದಲ್ಲಿ ಅವರ ಷಷ್ಟ್ಯಬ್ಧ ಸಮಾರಂಭ
1951	-	ಮಹಾನಡಾವಳಿ
1951	-	ಧರ್ಮಸ್ಥಳದಲ್ಲಿ ಡಾ|| ಮೋದಿಯವರ ನೇತ್ರ ಚಿಕಿತ್ಸಾ ಶಿಬಿರ
1952	-	'ಪರಮಾತ್ಮ ಪ್ರಕಾಶ' ಗ್ರಂಥದ ಪ್ರಕಟಣೆ
1953	-	ಶ್ರವಣಬೆಳಗೊಳದಲ್ಲಿ ನಡೆದ ಅಖಿಲ ಭಾರತ ದಿಗಂಬರ ಜೈನ ಮಹಾಸಮ್ಮೇಳನದ ಸ್ವಾಗತಾಧ್ಯಕ್ಷರು
1954	-	ಸಂಚಾರಿ ಆಸ್ಪತ್ರೆಯ ಆರಂಭ
1954	-	ಶ್ರೀ ಸಿದ್ಧವನದಲ್ಲಿ ಶ್ರೀ ಋಷಭ - ಜಯಂತಿ
31-8-1955	-	ಸ್ವರ್ಗಸ್ಥರಾದರು.

ಅವರು ಬರೆದ ಪುಸ್ತಕಗಳು

ತುಳುಭಾಷೆಯಲ್ಲಿ

(1) ದೇವೆರ್ (ಪರಮಾತ್ಮೆ)

(2) ಅಂದೇ ಸ್ವಾಮಿ (ಪಾಪ - ಪುಣ್ಯೊ) ಎಂಚಾ?

(3) ಜೈನೆರ್

(4) ತುಳು ನಿತ್ಯವಿಧಿ

ಕನ್ನಡ ಭಾಷೆಯಲ್ಲಿ

(5) ಪಾಪ - ಪುಣ್ಯ

(6) ಸಂಕ್ಷಿಪ್ತ ಸ್ತೋತ್ರ ಪೂಜಾ ಸಂಗ್ರಹ

ಅವರ ಬಗ್ಗೆ ಪ್ರಕಟವಾದ ಪುಸ್ತಕಗಳು

(1) ಮಹಾಚೇತನ - (ಸಂಪುಟ-1)

(2) " - (ಸಂಪುಟ-2)

(3) " - (ಸಂಪುಟ-3)

(4) ಸಮರ್ಪಣೆ (ಅಭಿನಂದನ ಗ್ರಂಥ)

(5) ವಿವೇಕಾಭ್ಯುದಯದಲ್ಲಿ ಲೇಖನಗಳು (ಮಾಸಪತ್ರಿಕೆ)

(6) ಮಹಾಪುರುಷ (ಮಿರ್ಜಿ ಅಣ್ಣಾರಾಯರು)

(7) 'ಆರೋಹಣ' (ಅಭಿನಂದನ ಗ್ರಂಥದಲ್ಲಿ ಕೆಲ ಲೇಖನಗಳು)

(8) ಕನ್ನಡ ಕುಲರಸಿಕರು (ಅ.ನ.ಕೃ.)

(9) ತೆಂಕನಾಡು (ಕಾಸರಗೋಡು ಕನ್ನಡ ಅ.ಭಾ. ಸಾಹಿತ್ಯ - ಸಮ್ಮೇಳನ - ಸ್ಮರಣ ಸಂಚಿಕೆ)

(10) 'ಮಂಜೂಷಾ' (ಧರ್ಮಸ್ಥಳದಲ್ಲಿ ನಡೆದ 51ನೇ ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣಸಂಚಿಕೆ)

(11) ಕನ್ನಡ ನುಡಿ (ಕನ್ನಡ ಸಾಹಿತ್ಯ ಪರಿಷತ್ತಿನ ಪತ್ರಿಕೆ)

(12) ಧರ್ಮಸ್ಥಳ ಮಂಜಯ್ಯ ಹೆಗ್ಗಡೇರ್ (ಕರ್ನಾಟಕ ತುಳುಸಾಹಿತ್ಯ ಅಕಾಡಮಿ ಪ್ರಕಟಣೆ)

ತುಳುನಾಡು, ತುಳುಭಾಷೆ, ಸಾಹಿತ್ಯ ಸಂಸ್ಕೃತಿ ಮತ್ತು ತುಳುವರ ಏಳಿಗೆಗಾಗಿ ತಮ್ಮ ಸರ್ವಸ್ವವನ್ನೂ ಮುಡಿಪಿಟ್ಟು ಬಹಳಷ್ಟು ಹೆಣಗಾಡಿರುವ ನಮ್ಮ ಹಿರಿಯರ ಸಾಧನೆಗಳನ್ನು ಅವರು ತುಳುವಿಗಾಗಿ ಸಲ್ಲಿಸಿದ ಕಾಣಿಕೆಗಳನ್ನು ಎಲ್ಲರಿಗೂ ತೋರಿಸಿ ತಿಳಿಸಿಕೊಡುವ ಉದ್ದೇಶದಿಂದ 'ಮರೆಯಬಾರದ ತುಳುವರು' ಪುಸ್ತಕ ಮಾಲೆಯನ್ನು ಕರ್ನಾಟಕ ತುಳುಸಾಹಿತ್ಯ ಅಕಾಡೆಮಿ ನಿಮ್ಮ ಮಡಿಲಿಗೆ ಹಾಕುತ್ತಿದೆ.

ತುಳುವಿಗಾಗಿ ಅನನ್ಯ ಸಾಧನೆಗೈದು ನಿನ್ನೆಗೆ ಸಂದಿರುವ ಹಿರಿಯರಿಗೆ ಈ ನೆಲದ ಭಾಷೆ ಸಂಸ್ಕೃತಿಯ ಮೇಲೆ ಇದ್ದ ಪ್ರೀತಿ ಅಭಿಮಾನ ಗೌರವ ಭಾವವನ್ನು ಈ ಪುಸ್ತಕಗಳು ತಿಳಿಸಿಕೊಡುತ್ತವೆ. ನಾಳೆಯ ತುಳುವಿನ ಬೆಳವಣಿಗೆಗಾಗಿ ಇಂದು ನಾವು ಏನೇನು ಕಾರ್ಯ ಚಟುವಟಿಕೆಗಳನ್ನು ಯೋಚಿಸಿ ಯೋಜಿಸಿ ಮುಂದೆ ಸಾಗಬಹುದು ಎನ್ನುವುದಕ್ಕೆ ಈ ಮಹನಿಯರ ಬದುಕು ಮತ್ತು ಸಾಧನೆಗಳು ನಮಗೆ ಪ್ರೇರಣೆ ಮತ್ತು ಚೈತನ್ಯ ನೀಡುತ್ತವೆ.